# ಅಪರಂಜಿ

ತಿಳಿನಗೆಯ ಕಾರಂಜಿ

ಜನವರಿ 2019




ಬಿಡಿ ಪ್ರತಿ: ರೂ.10.00

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎಸ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎಸ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್



**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ




# ಅಪರಂಜಿ

ತಿಳಿನಗೆಯ ಕಾರಂಜಿ


**ಸಂಪುಟ 36**

**ಸಂಚಿಕೆ - 04**

**ಜನವರಿ - 2019**


## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ಗುಡೇಮಾರನಹಳ್ಳಿ.... | ವತ್ಸನ | 3 |
| ಪುಸ್ತಕ ಪರಿಚಯ | ಶಿವಕುಮಾರ್ | 3 |
| ನಿಸರ್ಗೋಪಚಾರದ ಡಯಟ್ಟು.. | ಆರತಿ ಘಟಿಕಾರ್, ದುಬೈ | 6 |
| ಸಂಪಾದಕರಿಗೆ ಇನ್ನೊಂದು ಪತ್ರ | ಎಚ್. ಆರ್. ಹನುಮಂತರಾವ್ | 11 |
| ಬೂಮರಾಂಗ್ (ಅಜ್ಜ ಅಜ್ಜಿ ಕಥೆ) | ಶಂಸ ಐತಾಳ | 15 |
| ಹೀಗೊಂದು ಅತಿಥಿ ಸತ್ಕಾರ... | ನಳಿನಿ. ಟಿ. ಭೀಮಪ್ಪ | 17 |
| ಅಯ್ಯೋ, ಮರ್ತೆ ಹೋಗಿತ್ತು ರೀ......... | ವೈ. ಎನ್. ಗುಂಡೂರಾವ್ | 25 |
| ಹೊಸ ವರ್ಷದ ಆಶೋತ್ತರಗಳು | ಬೇಲೂರು ರಾಮಮೂರ್ತಿ | 28 |
| ವಿವಾ ಹೋತ್ಸವ ವಿನೋದಾವಳಿಗಳು | ನಂನಾಗ್ರಾಜ್ | 30 |
| ಅಂಬಾನಿಯ ಆಹ್ವಾನ ಪತ್ರಿಕೆ | ಪಾಲಹಳ್ಳಿ ವಿಶ್ವನಾಥ್ | 33 |
| ನಮ್ಮೂರು ಚಂದವೋ,........... | ಹೆಚ್. ಎನ್. ರಾಮಮೂರ್ತಿ | 36 |
| ಇಸ್ಪೀಟಾಟವೂ ಭಾಷಾವಿಜ್ಞಾನವೂ | ಕೆ.ವಿ. ತಿರುಮಲೇಶ್ | 37 |
| ಪ್ರಭುಶಂಕರರ ಆಯ್ದ ಕೆಲವು ....... | ಸಂಗ್ರಹ : ಬೇಲೂರು | 41 |


**ಮುಖಪುಟ ವ್ಯಂಗ್ಯಚಿತ್ರ - ಜಿ.ಎಸ್. ನಾಗನಾಥ್**


ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003. email: koravanji42@hotmail.com ದೂರವಾಣಿ: 080-23345259

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ಕುಡಿಯುವ ನೀರಿನಲ್ಲಿ ಯುರೇನಿಯಂ –ಸುದ್ದಿ
ಅಮೆರಿಕದ ಕೈವಾಡ !!

★★★

ಕಾಲಾ ಚಿತ್ರ ಪ್ರದರ್ಶನ ರದ್ದು –ಪತ್ರಿಕೆ
ಅದರ ಕಾಲ ಇನ್ನೂ ಬಂದಿಲ್ಲ!!

★★★

ಬಂಡಾಯಕ್ಕೆ 'ಕೈ' ನಡುಕ ! –ಶೀರ್ಷಿಕೆ
'ಆಹಾ !' ಎನ್ನಬಹುದು !

★★★

ಮೋದಿ ಚೀನಾ ಪ್ರವಾಸ –ಸುದ್ದಿ
ಅದು ಪ್ರಯಾಸವಾಗದಿರಲಿ !!

★★★

ವಿಶ್ವ ಕಪ್ ಆತಿಥ್ಯಕ್ಕೆ ರಷ್ಯಾ ಸಜ್ಜು –ಕ್ರೀಡಾ ಸುದ್ದಿ
ಅದೇ ನಮಗೆ ಭಯ !!

★★★

ಗಾಂಧಿ ಹೊರದಬ್ಬಿದ್ದ ರೈಲಿನಲ್ಲಿ ಸುಷ್ಮಾ ಪ್ರಯಾ –ಸುದ್ದಿ
ಚರಿತ್ರೆ ಮರುಕಳಿಸುತ್ತಿದೆ !!

★★★

ಮಲ್ಯ ಗಡಿಪಾರು ಮಾಡಿ –ಬ್ರಿಟನ್ ನ್ಯಾಯಾಲಯ
ಅಂತೂ ಅಪ್'ಜಯ' !!

★★★

ಕನ್ನಡ ರಕ್ಷಣಾ ವೇದಿಕೆ ಏಕೆ ? –ಹೇಳಿಕೆ
ಈ ಪ್ರಶ್ನೆ ನಮ್ಮನ್ನೂ ಕಾಡುತ್ತಿದೆ !!

★★★


ಪಾಪು ಬಾಯಲ್ಲಿ ಬಾಪು ಮಾತು !!
ಆಹಾ ! ಶೀರ್ಷಿಕೆ ಎಂದರೆ ಹೀಗಿರಬೇಕು !

★★★

ಬ್ರಿಟಿಷರ ಕಾಲದ ಆರ್ಥರ್ ರೋಡ್ ಕಾರಾಗೃಹಕ್ಕೆ ಮಲ್ಯ
ಅವರಿಗೆ ಆಹ್ವಾನ !!
ವಿಧಿಯ ವೈ ಚಿತ್ರ ಎಂದು ಅಪರಂಜಿ ನಕ್ಕಳಂತೆ !!

# ಪುಸ್ತಕ ಪರಿಚಯ

ಪರಿಚಯಿಸಿದವರು : **ಶಿವಕುಮಾರ್**




## ‘ಸ್ವಲ್ಪ ನಕ್ಕಿಬಿಡಿ ಪ್ಲೀಸ್’

ನಗೆ ಲೇಖನಗಳು

ಲೇಖಕರು – **ಬೇಲೂರು ರಾಮಮೂರ್ತಿ**

ಪ್ರಕಾಶಕರು – **ಸಪ್ನ**

ನಮ್ಮ ಪತ್ರಿಕೆಯ ಉಪಸಂಪಾದಕರಾದ ಶ್ರೀಯುತ ಬೇಲೂರು ರಾಮಮೂರ್ತಿಯವರ ಹೊಸಪುಸ್ತಕ ‘ಸ್ವಲ್ಪ ನಕ್ಕಿಬಿಡಿ ಪ್ಲೀಸ್’, ಒಂದು ನಗೆ ಬರಹಗಳ ಸಂಕಲನ. ಬೇಲೂರರು ಬರೆದಿರುವ ಪುಸ್ತಕಗಳಲ್ಲಿ ಇದು ತೊಂಭತ್ತೈದನೆಯ ಪುಸ್ತಕ. ಶ್ರೀಯುತರು ರಚಿಸಿರುವ ಇನ್ನೂ ಆರು ಪುಸ್ತಕಗಳು ಅಚ್ಚಿನಲ್ಲಿರುವುದರಿಂದ ಅತಿ ಶೀಘ್ರದಲ್ಲಿಯೇ ಇವರು ನೂರುಪುಸ್ತಕಗಳನ್ನು ರಚಿಸಿರುವ ಬರಹಗಾರರ ಸಾಲಿನಲ್ಲಿ ನಿಲ್ಲುತ್ತಾರೆ ಎಂಬುದು ಸಂತಸದ ಸಂಗತಿ. ನನಗೆ ತಿಳಿದಿರುವ ಮಟ್ಟಿಗೆ ಇಂಗ್ಲೀಷ್ ಲೇಖಕರಲ್ಲಿ ಈ ದಾಖಲೆಯನ್ನು ಮೀರಿರುವವರು ಬಾರ್ಬರಾ ಕಾರ್ಟ್‌ಲೆಂಡ್, ಇನಿಡ್ ಬ್ಲೈಟನ್ ಮತ್ತು ಇಸಾಕ್ ಅಸಿಮೋವ್. ಬೇಲೂರರು ಸೃಷ್ಟಿಸಿರುವ ನಗೆ ದಂಪತಿಗಳಾದ ಸೋಮು ಮತ್ತು ಸೋಮಿ ಇವರುಗಳ ಪರಸ್ಪರ ಸಂವಾದ, ಸಂವಹನಗಳಿಂದ ಹುಟ್ಟುವ ನಗೆಯ ಅಲೆಗಳು ಈ ಪುಸ್ತಕದ ತುಂಬಾ ಕಾಣಸಿಗುತ್ತವೆ. ಬೇಲೂರರ ತಿಳಿ ಹಾಸ್ಯದ ಶೈಲಿ ನಮ್ಮ ಓದುಗರಿಗೆಲ್ಲಾ ಪರಿಚಯವಿರುವಂತಹದೇ.

ಅಚ್ಚರಿಯ ಸಂಗತಿಯೆಂದರೆ, ‘ಮಹಾಕವಿ ಮುದ್ದಣ’, ‘ಶ್ರೀ ಶಂಕರ ಚರಿತಾಮೃತಮ್’ ಮುಂತಾದ ಗಂಭೀರ ಸಾಹಿತ್ಯವನ್ನು ರಚಿಸಿದ ಲೇಖನಿ, ಈ ನಗೆ ಸಂಕಲನದಲ್ಲೂ ಸುಲಲಿತವಾಗಿ ಸಮರ್ಥವಾಗಿ ತಿಳಿಹಾಸ್ಯವನ್ನು ಸೃಷ್ಟಿಸಿರುವುದು. ಹೀಗೆಂದ ಮಾತ್ರಕ್ಕೆ ಈ ಪುಸ್ತಕ ಕೇವಲ ಹಾಸ್ಯ ಲೇಖನಗಳಿಗೆ ಮಾತ್ರ ಸೀಮಿತವಾಗಿಲ್ಲ. ನೂರ ಎಪ್ಪತ್ತೈದು ಪುಟಗಳ ಈ ಹೊತ್ತಗೆಯಲ್ಲಿ ಕೊನೆಯ ಎಪ್ಪತ್ತು ಪುಟಗಳು, ಕನಡ ಸಾಹಿತ್ಯದಲ್ಲಿ ಹಾಸ್ಯ, ಕೆ.ಎಸ್.ನಿಸಾರ್ ಅಹಮದ್ ರವರ ಕೃತಿಗಳಲ್ಲಿ ಹಾಸ್ಯದ ಇಣುಕು ಮತ್ತು ಗೊರೂರರ ಹಾಸ್ಯದ ನೂರೆಂಟು ಮುಖಗಳು, ಮುಂತಾದ ಪ್ರಬುದ್ಧ ಬರವಣಿಗೆಗಳಿಗೆ ಮೀಸಲಾಗಿವೆ. ನಗೆಸಾಹಿತ್ಯದ ಚರಿತ್ರೆಯನ್ನು ತಿಳಿಯಬಯಸುವವರಿಗೆ ಈ ಲೇಖನಗಳು ಆ ವಿಷಯದ ಮೇಲೆ ಉಪಯುಕ್ತ ಬೆಳಕನ್ನು ಚೆಲ್ಲುತ್ತವೆ.

ಈ ಸಂಕಲನದಲ್ಲಿನ ಪ್ರತಿಯೊಂದು ಲೇಖನವನ್ನೂ ವಿವರಿಸಿ ಓದುಗರಿಗೆ


ರಸಭಂಗಮಾಡುವ ಉದ್ದೇಶ ಖಂಡಿತ ನನಗಿಲ್ಲ. ಬಿಡುವಿನ ವೇಳೆಯಲ್ಲಿ ಮನೆಯ ಸೋಫಾದ ಮೇಲೆ ಮುದುಡಿ ಕುಳಿತು, ಹುರಿಗಾಳು ಮೆಲ್ಲುತ್ತಾ ಓದಿ ಆಸ್ವಾದಿಸುವಂತಹ ಬರಹಗಳಿವು. ಇಂತಹ ಒಳ್ಳೆಯ ಸಾಹಿತ್ಯವನ್ನು ರಚಿಸಿದ ಬೇಲೂರರಿಗೆ ಅಪರಂಜಿಯ ಅಭಿನಂದನೆಗಳು.

## 'ಸ್ಕೂಲು ಬಿಡುವ ಸಮಯ'

–ಪ್ರಬಂಧಗಳು

ಲೇಖಕರು – **ಕೆ. ಸತ್ಯನಾರಾಯಣ**

ಪ್ರಕಾಶಕರು – **ಅಭಿನವ**




ಹಿಂದೊಮ್ಮೆ ಗೆಳೆಯ ತೇಜಸ್ವಿಯವರೊಂದಿಗೆ ಮಾತನಾಡುತ್ತಿದ್ದಾಗ ಅವರಾಡಿದ ಮಾತೊಂದು ನೆನಪಿಗೆ ಬರುತ್ತಿದೆ. 'ಒಂದು ಒಳ್ಳೆಯ ಸಾಹಿತ್ಯ ಸೃಷ್ಟಿಯಾಗಬೇಕಾದರೆ, ಮೊದಲಿಗೆ ತನ್ನ ಸುತ್ತಣ ಪರಿಸರದ ಬಗ್ಗೆ ಬರಹಗಾರನ ಗ್ರಹಿಕೆ ನವಿರಾಗಿರಬೇಕು. ಗ್ರಹಿಕೆಯಲ್ಲೇ ಎಡವಟ್ಟಾದರೆ, ಮುಕ್ತ ಮನಸ್ಸಿನ ಬದಲಿಗೆ ಮನಸ್ಸು ಪೂರ್ವಾಗ್ರಹಗಳ ಭಾರದಿಂದ ಜಗ್ಗುತ್ತಿದ್ದರೆ, ಆ ಎಡವಟ್ಟು ಅವನ ಬರಹದಲ್ಲೂ ಕಾಣಿಸಿಕೊಳ್ಳುತ್ತದೆ. ಶ್ರೀಯುತ ಕೆ. ಸತ್ಯನಾರಾಯಣ ಅವರು ಬರೆದಿರುವ ಪ್ರಬಂಧಗಳ ಸಂಕಲನ, 'ಸ್ಕೂಲು ಬಿಡುವ ಸಮಯ'ವನ್ನು ಓದಿದಾಗ ಲೇಖಕರ ಗ್ರಹಿಕೆಯ ಮುಕ್ತತೆಯ ಬಗ್ಗೆ ಯಾವ ಸಂದೇಹವೂ ಉಳಿಯಲಿಲ್ಲ.. ಲಲಿತ ಪ್ರಬಂಧಗಳು ಅಪರಂಜಿಯ ಮೂಲ ಸರಕು. ಹಾಗಾಗಿ ಲಲಿತ ಪ್ರಬಂಧಗಳ ಮಸೂರದಿಂದಲೇ ಇವರ ಪ್ರಬಂಧಗಳ ಓದು ನಡೆಯಿತು. ಅಪರಂಜಿಯ ಓದುಗರಿಗಾಗಿ ಈ ಪುಸ್ತಕವನ್ನು ಪರಿಚಯಿಸಲು ಪ್ರಾರಂಭಿಸಿದಾಗ, ಈ ಪ್ರಬಂಧಗಳ ಲಾಲಿತ್ಯ ಮತ್ತು ಪರಿಪಕ್ವತೆಗಳ ಬಗ್ಗೆ ನನಗಿಂತ ಮುಂಚೆಯೇ ಈ ಕೆಲಸವನ್ನು ವಿ. ಕೃಷ್ಣಮೂರ್ತಿರಾಯರು ತಮ್ಮ 'ಲಾಲಿತ್ಯ ಮತ್ತು ಪರಿಪಕ್ವತೆಯನ್ನು ಪಡೆದ ಪ್ರಬಂಧಗಳು' ಎಂಬ ಶೀರ್ಷಿಕೆಯಡಿ ಮಾಡಿ ನನ್ನ ಕೆಲಸವನ್ನು ಹಗುರಗೊಳಿಸಿರುವ ಅಂಶ ನನ್ನ ಗಮನಕ್ಕೆ ಬಂತು. ಶ್ರೀಯುತ ಕೃಷ್ಣಮೂರ್ತಿರಾಯರ ಮುನ್ನುಡಿ ನಿಜಕ್ಕೂ ಸತ್ವಪೂರ್ಣವಾಗಿದೆ. ಒಳ್ಳೆಯ ಪ್ರಬಂಧಗಳ ಲಕ್ಷಣಗಳ ಬಗ್ಗೆ ಆಸಕ್ತರು ಅಗತ್ಯವಾಗಿ ಓದಲೇಬೇಕಾದ ಮುನ್ನುಡಿ ಇದು. ಮುನ್ನುಡಿಯಲ್ಲಿನ ಪ್ರತಿಯೊಂದು ಮಾತನ್ನೂ ನಾನು ಅನುಮೋದಿಸುತ್ತೇನೆ.

ಒಟ್ಟಿನಲ್ಲಿ ಇದೊಂದು ಉತ್ತಮ ಪ್ರಬಂಧಗಳ ಪುಸ್ತಕ. ಪುಸ್ತಕವನ್ನು ಓದಿ ಮುಗಿಸಿದ ನಂತರವೂ ಅದರಲ್ಲಿ ಸತ್ಯನಾರಾಯಣ ಪ್ರಸ್ತಾಪಿಸಿರುವ ಅನೇಕ ವಿಷಯಗಳು ಮನದಲ್ಲಿ ಇನ್ನೂ ಗುಂಗಿಡುತ್ತಿದ್ದವು. ಒಂದು ಸಂಕಲನದ ಸಾರ್ಥಕತೆಗೆ ಇದಕ್ಕಿಂತ ಇನ್ನೇನು ಬೇಕು ?

ಮುಗಿಸುವ ಮುನ್ನ ಈ ಸಂಕಲನದ 'ನಿಮ್ಮ ಮನೆಯ ವಿಳಾಸ' ಎಂಬ ಪ್ರಬಂಧದಲ್ಲಿನ ಪದ್ಯವೊಂದನ್ನು ಇಲ್ಲಿ ಉದ್ಧರಿಸಿರುವೆ. ಎಂಜಾಯ್ !

ತಮ್ಮ ಮನೆಯ ವಿಳಾಸ ಹೇಳಲು ಲೇಖಕರು ಸಿದ್ಧಪಡಿಸಿರುವ ಆಡಿಯೋ ಕ್ಯಾಸೆಟ್.

ಮುಖ್ಯ ರಸ್ತೆಗೆ ಬಂದಿರಾ.
ಬನ್ನಿ ಸಂತೋಷ.
ಹೋಟೆಲ್ ಕಂಡಿತೇ?
ಎಳನೀರು ಅಂಗಡಿ ಕಾಣಿಸ್ತಾ ?
ಮ್ಯಾಗಜೀನ್ ಅಂಗಡಿ,
ಹೂವಿನ ಅಂಗಡಿ.
ಅಲ್ಲೇ ಮಧ್ಯಕ್ಕೆ ಬನ್ನಿ,
ಕೆಳಕ್ಕೆ ಇಳಿಯಿರಿ.
ಪೂರ್ತಿ ಇಳಿಯಬೇಡಿ
ಸ್ವಲ್ಪ ಇಳಿಯಿರಿ
ಆದರೆ ಮುಂದಕ್ಕೆ ಹೋಗಬೇಡಿ.
ಆದರೆ ಸ್ವಲ್ಪ ಮುಂದೆ ಬನ್ನಿ.
ಬಲಕ್ಕೆ ತಿರುಗಿಕೊಳ್ಳಿ.
ಮತ್ತೆ ಕೆಳಗೆ ಇಳಿಯಿರಿ.
ದೃಷ್ಟಿ ಮಾತ್ರ ಎಡಕ್ಕೇ ಇರಲಿ
ಬನ್ನಿ, ಹಾಗೇ ಬನ್ನಿ.
ಸ್ವಲ್ಪ ತಾಳ್ಮೆ.
ಇಳಿಜಾರಿನ ಕೊನೆಯಲ್ಲಿ ನಿಲ್ಲಿ.
ನಿಂತರೆ ನಾಲ್ಕು ಮನೆಗಳು–
ಕಾಣುತ್ತವೆಯೇ ?
ಇಲ್ಲ ಇನ್ನೂ ಜಾಸ್ತಿ ಮನೆಗಳೇ?
ಹೋಗಲಿ ಬಿಡಿ.
ಕೊಂಚ ಎಡಕ್ಕೆ ತಿರುಗಿ.
ಎಡಕ್ಕೆ ತಿರುಗಲು ಏನೂ ಇಲ್ಲವೇ ?
ನಿಮ್ಮ ಎಡದಿಕ್ಕಿಗೆ ತಿರುಗಬಹುದಿತ್ತಲ್ಲ.
ಸರಿ, ಎಡಕ್ಕೆ ಆದ ಹಾಗೆ
ಸ್ವಲ್ಪ ಎಡಕ್ಕೆ ಆದ ಹಾಗೆ
ನಿಮ್ಮ ವಾಹನ ನಿಲ್ಲಿಸಿಕೊಳ್ಳಿ.
ಟ್ಯಾಕ್ಸಿ ಚಾರ್ಜ್ ನಿಮ್ಮ
ನಿರೀಕ್ಷೆಗಿಂತ ಹೆಚ್ಚೇ ?
Sorry
ಏನಂದ್ರಿ?
ಗೂಗಲ್‌ನಲ್ಲಿ ನಮ್ಮ ಮನೆ ಇಲ್ಲವೇ
ಇಲ್ಲವೆಂದಿರಾ ?
ನಮ್ಮ ಮನೆ ಇಲ್ಲೇ ಇದೆ.
ನಾವು ಇಲ್ಲೇ ಇದ್ದೇವೆ.
ಆರೇಳು ತಲೆಗಳಿಂದ
ಬನ್ನಿ, ನಾವೇ ಇದ್ದೇವಲ್ಲ ಸಾಕ್ಷಿಯಾಗಿ.
ಗೂಗಲ್ ಏನು ಮಹಾ–
ನಿಮಗೆ ಸುಖಾಗಮನ.

# ನಿಸರ್ಗೋಪಚಾರದ ಡಯಟ್ಟು...
# ನಮಗೆ ಯಡವಟ್ಟು!

**- ಆರತಿ ಘಟಿಕಾರ್, ದುಬೈ**

ಆ ಪ್ರಕೃತಿ ಚಿಕಿತ್ಸಾ ಕೇಂದ್ರದಲ್ಲಿ ನಾನು,ಅಮ್ಮ ಹಾಗು ನನ್ನ ಮಗ ದಾಖಲಾಗಿ ಎರೆಡು ದಿನಗಳು ಕಳೆದ್ದಿದ್ದವಷ್ಟೆ, ಅಂದು ಮುಂಜಾನೆ ಮಾಮೂಲಿನಂತೆಕೆಲಸದವರು ನಮ್ಮ ಕೋಣೆಯ ಕಸ ಗುಡಿಸಿ ಹೊರಗಿಟ್ಟ ಕಸದ ಬುಟ್ಟಿಯಲ್ಲಿ ಬಿಸ್ಕೆತ್ ಪೊಟ್ಟಣದ ಖಾಲಿ ಕವರು, ನಮ್ಮ ಗ್ರಹಚಾರಕ್ಕೆ ಅಲ್ಲೇ ಠಳಾಯಿಸುತ್ತಿದ್ದ ಸುಪರ್ವೈಸರ್ ಮೇಡಂ ಕಣ್ಣಿಗ್ಗೇಬೀಳಬೇಕೆ!?..ಅವರು ಕೋರ್ಟ್ಮಾರ್ಶಲ್ ಮಾಡುವ ಗಂಬೀರ ಧನಿಯಲ್ಲಿ ಯಾರಿದು ಹೇಗೆಲ್ಲ ಬಿಸ್ಕೆತ್ ತಿಂದಿರೋದು! ಹಾಗೆ ಹೊರಗಿನ ತಿಂಡಿ ಎಲ್ಲ ಇಲ್ಲಿ ತಿನ್ನಿಕ್ಕಿಲ್ಲ ಎಂದಾಗ ನಾನು ಧಿಗ್ಗನೆ ಎದ್ದು ಬಂದು ಸಾರೀ ಮೇಡಂ! (ಅಲ್ಲೇ ಪವಡಿಸಿದ್ದ ಮಗನ ಕಡೆಗೆ ಕೈ ತೋರಿಸಿ) ಇವನಿಗಾಗಿ ತಂದಿದ್ದು (ತಿಂದಿದ್ದು) ಇಲ್ಲಿ ಊಟಾನೆ ಯಾಕೊ ಸರಿಯಾಗಿ ಮಾಡ್ತಾ ಇಲ್ಲ ಇವ, ಎಂದು ತಡವರಿಸುತ್ತಾ ಹೇಳಿದೆ.. ಆದರಾಕೆ ನಮ್ಮನ್ನು ಸಂಶಯದಿಂದಲೇ ನೋಡಿ ಮಗನನ್ನು ಉದ್ದೇಶಿಸಿ ಮರಿ! ಇಲ್ಲಿಯ ಊಟ, ಗಂಜಿ ಎಲ್ಲ ಆರೋಗ್ಯಕ್ಕೆ ಬಹಳ ಒಳ್ಳೇದು, ಇವೆಲ್ಲ ಹಾಳು - ಮೂಳು ಎಲ್ಲ ತಿನ್ಲಿಕ್ ಹೋಗಬೇಡ ಆಯ್ತಾ ಎಂದು ತಮ್ಮ ಸಲಹೆ ಒಗೆದು ನಿರ್ಗಮಿಸಿದರು.

ನಾವುಗಳು ಸದ್ಯ! ನಮ್ಮ ಕಪಾಟಿನಲ್ಲಿ ಅಡಗಿಸಿಟ್ಟ ಮತ್ತಷ್ಟು ಬಿಸ್ಕತ್ ಪೊಟ್ಟಣಗಳು , ಚುರುಮುರಿ ಅವರ ಕಣ್ಣಿಗೆ ಬಿದ್ದಿಲ್ಲ ಎಂದು ವಿಜಯೋತ್ಸವದ ನಗೆ ಬೀರಿದೆವು.! ಅಲ್ಲೇ ಹಲ್ಕಿರಿಯುತ್ತ ಕುಳಿತ ಮಗ ಅಮ್ಮ! ಬಿಸ್ಕತ್ ಎಲ್ಲ ನೀನೆ ಖಾಲಿ ಮಾಡಿದ್ದು ಎಂದು ಅವರಿಗೆ ಹೇಳಿಬಿಡ್ಲಾ ಎಂದು ನನ್ನನು ರೇಗಿಸಿದಾಗ ಅಯ್ಯೋ ಮೆಲ್ಲಗೆ ಮಾತಾಡೋ ಗೂಬೆ, ನಿನ್ನ ಸಲುವಾಗಿ ತಾನೇ ಇದೆಲ್ಲ ತರಬೇಕಾಯಿತು ಎಂದು ಅವನ ಮೇಲೆಯೇ ಗೂಬೆ ಕೂರಿಸಿ ಸರಸರನೆ ನಮ್ಮ ಕಪಾಟಿಗೆ ಬೀಗ ಜಡಿದು ಅಮ್ಮನೊಂದಿಗೆ ನಮ್ಮ ಮುಂಜಾನೆಯ ಜಲ ಚಿಕೆತ್ಸೆಗಾಗಿ ಟವಲ್ ಹಿಡಿದು ಹೊರ ನಡೆದೆ.

ಈ ಪ್ರಕೃತಿ ಚಿಕಿತ್ಸಾ ಕೇಂದ್ರಕ್ಕೆ ಬರಲೂ ಒಂದು ಕಾರಣ ವಿತ್ತು . ಕಳೆದ ಮೂರು ವರ್ಷಗಳಿಂದ ಕಾಡುತ್ತಿದ್ದ ನನ್ನ ಬೆನ್ನು ನೋವು. ಅದಕ್ಕಾಗಿ ನನ್ನ ಪತಿರಾಯರು ಎಲ್ಲ ತರಹದ ಅಲೋಪತಿ, ಹೋಮಿಯೋಪತಿ ಚಿಕಿತ್ಸೆಗಳನ್ನು ಕೊಡಿಸಿ ನಮ್ಮ ಮನೆದೇವರಾದ ತಿರುಪತಿ ತಿಮ್ಮಪ್ಪ ನನ್ನೇ ನಂಬಿ ಕುಳಿತಾಗ, ನಮ್ಮ ಕುಟುಂಬ ವೈದ್ಯರು ಅಂತಾ ದೊಡ್ಡ ಸಮಸ್ಯೆ ಏನಿಲ್ಲ ...ನೀವು ಸ್ವಲ್ಪ ತೂಕ ಇಳಿಸಿದರೆ ಎಲ್ಲ ಸರಿ ಹೋಗುತ್ತೆ ಎಂದು ಸಲಹೇ ನೀಡಿಲು, ನಾನು ಕೂದಲು ಉದುರುತ್ತೆ ಡಾಕಟ್ರೆ ಎಂದಾಗಲೂ ನಿಮಗೆ ನನ್ನ ತೂಕದ ಮೇಲೆಯೇ ಕಣ್ಣು ಎಂದು ತಮಾಷೆ ಮಾಡಿದರೂ ಅವರ ಸಲಹೆಯನ್ನು ಗಂಭೀರವಾಗಿ ತೆಗೆದುಕೊಳ್ಳದೆ ವಿಧಿಯಿಲ್ಲ ಎಂಬುದು ನನಗೆ ಮನದಟ್ಟಾಯಿತು .

ನಾನು ನನ್ನ ಕೈಲಾದಷ್ಟು (ನನ್ನ ನಾಲಿಗೆ, ಹೊಟ್ಟೆ, ದೇಹತಡೆದಷ್ಟು) ಡಯಟ್, ಪಥ್ಯ, ವ್ಯಾಯಾಮ ಎಲ್ಲ ಶುರುವಿಟ್ಟುಕೊಂಡಾಗ ಮೂರು - ನಾಲ್ಕು ಕೆಜಿ ಇಳಿದಂತಾಗಿ

ಒಮೊಮ್ಮೆ ಪಾರ್ಟಿ, ಪ್ರವಾಸ, ಔಟಿಂಗ್ ಎಂದು ಕೊಂಚ ನಾಲಿಗೆ ಸಡಿಲ ಬಿಟ್ಟರೂ ಡಬಲ್ ತೂಕವೇರಿ ಹಿತ್ತಿಲ ಬಾಗಿಲಿನಿಂದ ಅದ್ಯಾವ ಮಾಯದಲ್ಲೋ ಮತ್ತೆ ಪುನರಾಗಮನಚಾ ಎಂದು ಸೇರಿಕೊಂಡುಬಿಡುತಿತ್ತು. ಹಾಗಾಗಿ ಆರಕ್ಕೆ ಏರದೆ ಮೂರಕ್ಕೆ ಇಳಿಯದ ನನ್ನ ತೂಕದ ಸಮಸ್ಯೆ ಬಿಡೆನು ನಿನ್ನ ಪಾದ (ದೇಹ) ಎಂದು ನನಗಂಟಿಕೊಂಡೆ ಇತ್ತು .

ಇತ್ತೀಚಿಗೆ ಪ್ರಕೃತಿ ಚಿಕಿತ್ಸಾ ಕೇಂದ್ರ ಒಂದರಲ್ಲಿ ತೂಕವಿಳಿಸಿಕೊಂಡು, ಆಗಾಗ ಆರೋಗ್ಯಕರವಾದ ಪಥ್ಯಗಳ ಬಗ್ಗೆ ಸಲಹೆ ನೀಡುತಿದ್ದ ನನ್ನ ಗೆಳತಿಯೊಬ್ಬಳ ಯಶೋಗಾಥೆ ನನ್ನಲ್ಲೂ ನಿಸರ್ಗೋಪಚಾರದ ಅನುಭವ ಪಡೆಯಲು ಸ್ಪೂರ್ತಿ ನೀಡಿತು .ಹಾಗಾಗಿ ನನ್ನ ಬೆನ್ನು ನೋವಿನ ಸಮಸ್ಯೆ ಜೊತೆಗೆ, ಆಗಾಗ ಕಾಡುವ ಮಗರಾಯನ ನೆಗಡಿಯ ಅಲರ್ಜಿ ತೊಂದರೆ, ಹಾಗು ಬಹಳ ವರ್ಷಗಳಿಂದ ಕಾಡುತಿದ್ದ ಅಮ್ಮನ ಮಂಡಿ ನೋವು ಎಲ್ಲದಕ್ಕು ಹೋಲ್ಸೇಲಾಗಿ ಪರಿಹಾರ ಕಂಡುಕೊಳ್ಳುವ ಆಸೆಯಲ್ಲಿ ಬೆಂಗಳೂರಿನ ಹೊರವಲಯದಲ್ಲಿದ್ದ ಒಂದು ಪ್ರಸಿದ್ದವಾದ ನಾಚುರೋಪತಿಚಿಕಿತ್ಸಾ ಕೇಂದ್ರಕ್ಕೆ ಹೋಗುವುದೇ ಸರಿ ಎಂದು ನಿರ್ಧರಿಸಿ ಅಮ್ಮ ಹಾಗು ಮಗನನ್ನು ಜೊತೆಯಲ್ಲಿ ಕರೆದೊಯ್ದೆ..

ಕೇಂದ್ರಕ್ಕೆ ಕಾಲಿಟ್ಟೊಡನೆ ,ಕೂಲಂಕುಷವಾಗಿ ನಮ್ಮ ಆರೋಗ್ಯ ಸಮಸ್ಯೆಗಳಿಗೆ ಸ್ಪಂದಿಸಿ ತಪಾಸಣೆ ನಡೆಸಿದ ವೈದ್ಯರು ಅದಕ್ಕನುಸಾರವಾಗಿಯೆ ನಮ್ಮ ಆಹಾರದ ಪಥ್ಯ ಹಾಗು ಚಿಕಿತ್ಸೆಗಳನ್ನು ಡಯಟ್ಚಾರ್ಟಿನಲ್ಲಿ ನಮೂದಿಸಿ ಕೇಂದ್ರದ ಮುಖ್ಯ ಕಚೇರಿಗೆ ನಮ್ಮನ್ನು ಕಳಸಿಕೊಟ್ಟರು. ಅಲ್ಲಿ ನಮ್ಮೆಲ್ಲರಿಗೂ ದೇವರಪಟವಿರುವ ಒಂದು ನೀಲಿ ಚೀಲದಲ್ಲಿ ತಟ್ಟೆ ,ಲೋಟ,ಫೋರ್ಕು/ ಚಮಚೆಗಳನ್ನು ಹಾಕಿ ನೀವೀಗಡೈನಿಂಗ್ಹಾಲಿನಲ್ಲಿ ನಿಮ್ಮ ಆಹಾರ ಪಡೆಯಬಹುದು ಎಂದು ನಗುತ್ತಲೆ ಕಳಸಿಕೊಟ್ಟಾಗನಮ್ಮ ಆಹಾರ ಏನಿರಬಹುದೆಂಬ ಕೂತೂಹಲದಲ್ಲಿ ಖುಷಿಯಿಂದಲೇಡೈನಿಂಗ್ ಹಾಲಿನತ್ತ ಹೆಜ್ಜೆ ಹಾಕಿದೆವು .

ನಮ್ಮ ಮಾಮೂಲು ದಿನಚರಿಯಲ್ಲಿ ಬೆಳಗಾದೊಡನೆ, ನಾವುಗಳು ಈ ಬಾಡಿಯೆಂಬ ಗಾಡಿ ಹುರುಪಿನಿಂದ ಶುರುವಾಗಲು ಪೆಟ್ರೋಲ್ನಂತೆ ಹಾಕುತ್ತಿದದ್ದು (ಕುಡಿಯುತ್ತಿದ್ದದ್ದು) ಒಂದು ದೊಡ್ಡ ಕಪ್ಪಿನಲ್ಲಿ ಬಿಸೀಬಿಸಿ ಟೀ... ಇನ್ನು ಈ ಕೇಂದ್ರದಲ್ಲಿ ಹೊರಗೆ ಸುರಿಯುತ್ತಿದ್ದ ಮಳೆ, ತಣ್ಣನೆ ಗಾಳಿಗೆ ಕನಿಷ್ಠ ಪಕ್ಷ ಬಿಸಿಬಿಸಿ ಕಷಾಯವನ್ನಾದರೂ ಕುಡಿಯುವ ಆಸೆಯಲಿ ನಮ್ಮ ಡಯಟ್ ಚಾರ್ಟ ಹಿಡಿದು ವಿಶಾಲವಾದ ಊಟದ ಮನೆಯ ಅಂಗಳದಲ್ಲಿ ನಿಂತಾಗ ನನ್ನದು ತಣ್ಣನೆಯ ಸೋರೆಕಾಯಿ ಜೂಸಾದರೆ, ಅಮ್ಮನಿಗೆ ಸಿಕ್ಕಿದ್ದು ಕುಂಬಳಕಾಯಿ ಜೂಸು!. ಇನ್ನು ಜೂಸೆಂದರೆ ಪೆಪ್ಸಿ , ಕೋಕ್ ಎಂದೇ ಅರ್ಥ ಮಾಡಿಕೊಂಡ ಮಗರಾಯನ ಪಾಲಿಗೆ ಬಂದ ನಿಂಬೆ ಜೇನುತುಪ್ಪದ ನೀರನ್ನು ಕಂಡು ನಮ್ಮೆಲ್ಲರ ಸಾಮೂಹಿಕ ಪೆಚ್ಚು ಮೋರೆಗಳಿಗೆ ಪಕ್ಕದಲ್ಲಿದ್ದವರು ನಗುತ್ತ ಎಸಿಡಿಟಿ, ತೂಕ ಕರಗಿಸಲು ಇವೆಲ್ಲ ಭಾರಿ ಒಳ್ಳೆದು.. ಕುಡೀರಿ ಎಂದು ಹುರಿದುಂಬಿಸಿದಾಗ ನನ್ನ ಕೈಯಿಲ್ಲಿದ್ದ ಸೋರೆಕಾಯಿ ಜೂಸನ್ನು ಸೊರ್ರನೆ ಹೀರಿ ತೆಳ್ಳಗೆ(ಸೋರೆಕಾಯಿ) ಬಳ್ಳಿಯಂತಾಗುವ ಕನಸಿನಲ್ಲಿ ತೇಲಾಡಿದೆ !

ಆ ದಿನವೆಲ್ಲಾ ನಮ್ಮ ಅಚ್ಚುಮೆಚ್ಚಿನ ಪೇಯ ಬಿಸಿ ಬಿಸಿ ಟೀ /ಕಾಫಿ ಇಲ್ಲದೆ ನಮ್ಮ ತಲೆ ಸಿಡಿದು ಹೋಳಾಗುವುದೇನೋ ಎಂಬಂತೆ ಅನಿಸಿದಾಗ ಅಲ್ಲಿನ ಸಿಬ್ಬಂದಿ ತಾಜಾ ತುಳಸಿ

ಎಲೆ ಹಾಗೂ ಒಂದು ಹನಿ ನೀಲಗಿರಿ ತೈಲದ ಬಿಸಿ ನೀರಿನ ಹಬೆಯಿಂದಲೆ ನಮ್ಮ ತಲೆಶೂಲೆಯನ್ನು ಶಮನಗೊಳಿಸಿಬಿಟ್ಟರು.!

ಇನ್ನು ಮಧ್ಯಾನದ ಊಟಕ್ಕೆ ಬೀಪೀ, ಸಕ್ಕರೆ ಖಾಯಿಲೆ ಇರುವ ಅಮ್ಮನಿಗೆ ಹಾಗು ನನ್ನ ಬಾಲಂಗೊಚಿಯಾಗಿ ಬಂದ ನನ್ನ ಮಗನಿಗೆ ಕನಿಷ್ಠ ಎಣ್ಣೆ /ಉಪ್ಪು/ ಮಸಾಲೆಯುಕ್ತ ಪೌಷ್ಟಿಕ ಊಟವಾದರೆ ನನ್ನ ಡಯಟ್ ಚಾರ್ಟಿನ ಪ್ರಕಾರ ನನ್ನದು ಮಾತ್ರಾ ಸ್ಪೆಷಲ್ ಊಟ !

ಅಯ್ಯೋ! ಅದೇನಿರಬಹುದೆಂಬ ನಿಮ್ಮ ಕುತೂಹಲವನ್ನು ಈಗಲೇ ತಣಿಸಿಬಿಡುವೆ! ನನ್ನದು 15 ದಿನಗಳ ವರೆಗೂ ಮುಂಜಾನೆ ಹಾಗು ಸಂಜೆ ಹಸಿ ತರಕಾರಿಗಳ ಸಲಾಡ್, ಮೊಳಕೆ ಕಾಳು, ಒಂದು ಕಪ್ಪು ಪಪಾಯ /ಕಲ್ಲಂಗಡಿ ಯಾವುದಾರೂ ಹಣ್ಣು ಹಾಗು ಸೂಪು ಮಿಶ್ರಿತ ಆರೋಗ್ಯಕರ ಪಥ್ಯ. ಹಾಗಾಗಿ ಊಟದ ವಾಸನೆಯೂ ಬಡಿಯದಂತೆ ನನ್ನನ್ನು ರಾಡಯೆಟ್ ಸೆಕ್ಷನ್‌ಗೆ ಬಡ್ತಿ ಮಾಡಿದರು! ಆದರೆ ಈ ಬಡಪಾಯಿ ಅಮ್ಮನ ಮೇಲೆ ಆಗಾಗ ನನ್ನ ಮಗನಿಗೆ ಕರುಣೆಯುಕ್ಕಿ ಅವನಿಗಿಷ್ಟವಿಲ್ಲದ್ದ ಪಪಾಯಾ ಹಾಗು ಸೂಪುಗಳನ್ನು ಮೆಲ್ಲಗೆ ಯಾರಿಗೂ ಗೊತ್ತಾಗದಂತೆ ನನಗೆ ರವಾನಿಸಿ ಅಮ್ಮ! ವೇಸ್ಟ್ ಮಾಡಬೇಡ ಎಂದು ಉಪದೇಶಿಸಿ ಹೋಗುತ್ತಿದ್ದ !

ಆದರೆ ನಮ್ಮ ರಾ ಡಯಟ್ ಸೆಕ್ಷನ್ ನಲ್ಲಿಯೂನನಗೆ ಸಮಾನ ಮನಸ್ಕರು ಜೊತೆಗೆ ಸಮಾನ ತೂಕಸ್ತರ ಪರಿಚಯ/ಗೆಳತನವೂಸಿಕ್ಕಾಗ, ನನ್ನ ಸಂತಸಕ್ಕೆ ಪಾರವೇ ಇರಲ್ಲಿಲ್ಲ! ನಮ್ಮ ಹರಟೆಗಳು ಪ್ರಪಂಚವನ್ನೆಲ್ಲ ಸುತ್ತಿ ಕೊನೆಗೆ ಲ್ಯಾಂಡ್ ಆಗುತ್ತಿದ್ದದ್ದು ನಮ್ಮ ಅಚ್ಚುಮೆಚ್ಚಿನ ತಿಂಡಿ ತಿನಸುಗಳ ವಿಷಯಕ್ಕೇ! ಇನ್ನು ಕೆಲಪಾಕ ಪ್ರವೀಣೆಯರು ತಮ್ಮ ಹೊಸ ರುಚಿಗಳ ಪಟ್ಟಿ ತೆರೆದಿಟ್ಟಾಗ ನನ್ನ ಕನಸಿನಲ್ಲೂ ಮಸಾಲೆ ದೋಸೆ, ಪಾನಿ ಪುರಿ, ಮೆಣಸಿನ ಕಾಯಿ ಬಜ್ಜಿಗಳೇಕಾಡಿ ನನ್ನ ಬಾಯಲ್ಲಿ ನೀರು ಕಾವೇರಿಯಾಗಿ ಹರಿಯುತ್ತಿತ್ತು.!

ನನ್ನ ನಿತ್ಯದ ಪಥ್ಯಾಹಾರಕ್ಕೆ ಅಮ್ಮ ಮಮ್ಮುಲ ಮರುಗಿ ತಮಗಾಗಿ ಕೊಟ್ಟ ಸೇಬನ್ನು ಜೋಪಾನವಾಗಿರಿಸಿ ಅಯ್ಯೋ ಪಾಪ ! ನಿಂಗೆ ಊಟವೆ ಇಲ್ವಲ್ಲೆ.. ಹೋಗಲಿ ಹಣ್ಣಾದರೂ ತಿನ್ನು ಎನ್ನುತ್ತಿದ್ದಾಗ, ನನಗೆ ಸಮತೋಲಿತ ಆಹಾರದ ನಿಸರ್ಗೋಪಾಚಾರವಿದ್ದರೂ ಅಮ್ಮನ ಈ ಉಪಚಾರಕ್ಕೆ ನನ್ನ ಹೊಟ್ಟೆ ಬೇಡ ಎಂದ ದಿನವೇ ಇಲ್ಲ !

ಇನ್ನು ಮುಂಜಾವಿನ ಐದು ಗಂಟೆಗೆ ಸರಿಯಾಗಿ ಬಿತ್ತರವಾಗುತ್ತಿದ್ದ ಭಜನೆಯ ಅಲಾರಾಮು ಸಿಹಿ ನಿದ್ದೆಯಲ್ಲಿದ್ದ ನಮ್ಮನ್ನು ಧನ್ಯತಾ ಭಾವದಲ್ಲಿ ಬಡಿದೆಬ್ಬಿಸುತ್ತಾ, ನಾವುಗಳು ಲಗು ಬೇಗನೆ ಎದ್ದು ಹಲ್ಲುಜ್ಜಿ ಮೂರು ಲೋಟ ನೀರನ್ನು ಬಲವಂತವಾಗಿ ಹೊಟ್ಟೆಗಿಳಿಸಿ ನಮ್ಮ ಯೋಗಾ ಮ್ಯಾಟುಗಳನ್ನು ಹಿಡಿದು (ಕೆಲವರು ನಿದ್ದೆಗಣ್ಣಿನಲ್ಲಿ) ವಿಶಾಲವಾದ ಯೋಗಾ /ವ್ಯಾಯಾಮ ಮಾಡಿಸುತ್ತಿದ್ದ ವಿಶಾಲವಾದ ಹಾಲಿನಲ್ಲಿ ಜಮಾಯಿಸಿಕೊಳ್ಳುತ್ತಿದ್ದೆವು. ಒಮ್ಮೊಮ್ಮೆ ಅಮ್ಮ ನನ್ನ ಯೋಗಾಸನದ ಮ್ಯಾಟ್ ಕೂಡ ಹಾಕಿ ಬಿಡು, ನಾನು ಆಮೇಲೆ ಬಂದು ಸೇರ್ಕೊಳ್ಳುತ್ತೀನಿ ಎಂದು ಮಲಗಿದಲ್ಲಿಯೇ ಆಶ್ವಾಸನೆ ನೀಡಿದಾಗ, ಪಾಪ! ಅವರ ಮ್ಯಾಟು ದಾರಿ ಕಾಯ್ದು ಶವಾಸನದಲ್ಲೇ ಮಾಡುತ್ತಿದ್ದರೆ, ಅಲ್ಲಿ

ಅಮ್ಮ ನಿಧಾನಗತಿಯಲ್ಲಿ ಅನುಲೋಮ ವಿಲೋಮ ಪ್ರಾಣಾಯಾಮಗಳನ್ನು ಮಲಗಿದಲ್ಲಿಯೇ ಮಾಡಿ ಮುಗಿಸುತ್ತಿದ್ದರು! ಆದರೆ ಅವರು ಮಧ್ಯಾನ್ಹದ ಯೋಗವನ್ನು ಮಾತ್ರ ಎಂದಿಗೂ ತಪ್ಪಿಸಿಕೊಳ್ಳುತ್ತಿರಲ್ಲಿಲ್ಲ!. ಯಾಕೆ ಅಂತೀರಾ? ಅದು ಎಲ್ಲರೂ ಆರಾಮಾಗಿ ಅರ್ಧ ಗಂಟೆಗಳ ಕಾಲ ಶವಾಸನದಲ್ಲಿ ಮಲಗಿ ದೇಹದ ಅಂಗಂಗಗಳನು ಹಾಯಾಗಿ ವಿಶ್ರಮಿಸಿ ಯೋಗ ನಿದ್ರೆ ಮಾಡುವ ಕ್ಲಾಸು !.

ಇದರಂತೆ ಮಗರಾಯನೂ ಕೂಡ ತನಗೆ ಮೂಡು ಇದ್ದಾಗ ಇಷ್ಟಪಟ್ಟು ಹೋಗುತ್ತಿದ್ದದ್ದು ಹೆಚ್ಚಾಗ್ಗಿ ಯುವಕರಿಂದಲೆ ತುಂಬಿರುವ ಉಸಿರಾಟವನ್ನು ತೀವ್ರ ಗೊಳಿಸುತ್ತ ತ್ವರಿತ ಗತಿಯಿಂದ ಮಾಡುವ ಡೈನಮಿಕ ಯೋಗ ಕ್ಲಾಸಿಗೆ! ಇಲ್ಲದಿದ್ದರೆ ರೂಮಿನಲ್ಲೆ ಕುಳಿತು ಕೈ ಬೆರಳುಗಳಿಗೆ ಸಾಕಷ್ಟು ವ್ಯಾಯಾಮ ಮಾಡಿಸುವ ವೀಡಿಯೋ ಗೇಮಿನಲ್ಲೆ ಮುಳುಗಿರುತ್ತಿದ್ದ!. ಈ ಆಟದಲ್ಲಿ ಅವನ ಓರಗೆಯ ಹುಡುಗನೊಬ್ಬ ಅವನಿಗಲ್ಲಿ ಅಚಾನಕ್ಕಾಗಿ ಸಿಕ್ಕಿದ್ದು ಇಬ್ಬರೂ ಒಬ್ಬರನೊಬ್ಬರು ಮೀರಿಸುವ ಗೇಮಿಗರಾಗಿ ಮಿಂಚಿದರು! ಅಷ್ಟೆ ಅಲ್ಲದೆ ಪಥ್ಯ ಮಾಡುವುದರಲ್ಲಿ ನನ್ನನ್ನು ಮೀರಿಸುತ್ತ ತಿಂಡಿ ಸಮಯಕ್ಕೆ ದಿನವೂ ಕಡ್ಡಾಯವಾಗಿ ಕೊಡುತ್ತಿದ್ದ (ಲವಣ ರಹಿತ) ರಾಗಿ ಗಂಜಿ , ಜೂಸುಗಳನ್ನೆಲ್ಲ ತ್ಯಜಿಸಿ ಎರೆಡು ಹೊತ್ತಿನ ಊಟವನ್ನು ಮಾತ್ರ ನೆಚ್ಚಿಕೊಂಡು (ಆಟದಲ್ಲೇ ಹೊಟ್ಟೆ ತುಂಬಿಸಿಕೊಳ್ಳುತ್ತಾ) ಹಾಯಾಗಿದ್ದ.

ಅಲ್ಲಿ ನಮ್ಮ ಮುಂಜಾನೆಯ ಚಟುವಟಿಕೆಗಳು ವಿಧವಿಧವಾದ ಜಲ ಚಿಕಿತ್ಸೆ , ಎಣ್ಣೆಮಾಲೀಶುಗಳಿಂದ ಆರಂಭವಾಗುತಿತ್ತು. ರಕ್ತ ಪರಿಚಲನೆಯನ್ನು ಉತ್ತಮ ಗೊಳಿಸಿ ಮೈಮನಗಳನ್ನು ಹಗುರಾಗಿಸಿ ಬೆವರಿನ ಮೂಲಕ ನಮ್ಮ ಟಾಕ್ಸಿನ್ಗಳನು ತೆಗೆಯುವಲ್ಲಿ ಸಹಕಾರಿಯಾದ ಹಬೆಸ್ನಾನ ಆವಿ ಸ್ನಾನ, (ಸ್ಟೀಮ್ ಬಾತ್ , ಸೋನಾ ಬಾತ್), ಟಬ್ ಬಾತ್ ಇತ್ಯಾದಿಗಳು ಇರುತ್ತಿದ್ದವು. ನಮ್ಮ ಟಾಕ್ಸಿನ್ಗಳಂತೆ ನಮ್ಮ sinಗಳಿಗೂ ಯಾವುದಾದರೂ ಸುಲಭೋಪಾಯವಿದ್ದರೆ... ಎಂಬ ತರಲೆ ಯೋಚನೆ ನನ್ನಲ್ಲಿ ಮಿಂಚಿ ನಗು ತರಿಸುತ್ತಿದ್ದದ್ದುಂಟು! ಜಲ ಚಿಕಿತ್ಸೆಗಳನು ಮುಗಿಸಿಕೊಂಡ ಮಂದಿ ಬಿಸಿ ಹಬೆಗೆ ಕೆಂಪಾಗಿ ಜಲಲ ಧಾರೆಯಾದ ಒದ್ದೆಕೂದಲಿಗೆ ಟವಲ್ ಬಿಗಿದುಕೊಂಡು ಓಡಾಡುತ್ತಿದ್ದರೆ, ಮೈಯೆಲ್ಲಾ ಎಣ್ಣೆ ಮಾಲೀಶು ಮಾಡಿಸಿಕೊಂಡ ಹೆಂಗಳೆಯರು ಗಜಗಾಮಿನಿಯರಂತೆ ನಿಧಾನವಾಗಿ ಹೆಜ್ಜೆಯಿಡುತ್ತಾ ಸಾಗುತ್ತಿದ್ದದ್ದು ನಿತ್ಯದ ಸೀನು !.

ಇವೆಲ್ಲ ಮುಗಿದು ಹನ್ನೊಂದರ ಸುಮಾರಿಗೆ ಪ್ರಾರಂಭವಾಗುವ ಊಟದ ಪ್ರಕ್ರಿಯೆ, ನಂತರ ಸಿಗುವ ಅಮೂಲ್ಯವಾದ ವಿರಾಮದ ವೇಳೆಯಲ್ಲಿ ಈ ಸಮಯ.. ಮೊಬೈಲ್ ಸಮಯ ಎಂದು ಹಾಡಿಕೊಳ್ಳುತ್ತ ನಮ್ಮ ಮೊಬೈಲ್ ಫೋನುಗಳು ಎಡೆಬಿಡದೆ ಬ್ಯುಸಿಯಾಗಿ ಬಿಡುತ್ತಿದ್ದವು. ಅಷ್ಟರಲ್ಲೇ ರಸಭಂಗವಾದಂತೆ ಸಹಾಯಕರು ಬಾಗಿಲು ಬಡಿದು ಹೊಟ್ಟೆಯ ಹಾಗು ಕಣ್ಣಿನ ಮೇಲೆ ಮಡ್ ಪ್ಯಾಕ್ ಹಾಕಿ 20 ನಿಮಿಷಗಳ ಕಾಲ ಕಣ್ಣು ಮುಚ್ಚಿಸಿ (ಮಲಗಿಸಿ)ಬಿಡುತ್ತಿದ್ದರು!. ಆದರ ನಂತರ ಶುರುವಾಗುತ್ತಿದದ್ದು ನೋವು ನಿವಾರಕ ಲೇಪನ ಚಿಕಿತ್ಸೆಗಳಾದ ಸಾಸಿವೆ ಪ್ಯಾಕ್, ಕೆರೆ ಮಣ್ಣಿನ ಪ್ಯಾಕ್ (ಮಡ್ಪ್ಯಾಕ್) ಹಾಗು ಅರಿಶಿನ ಗಂಜಿ ಮಿಶ್ರಿತ ಸ್ನಾನ/ಲೇಪನಗಳು. ಹಚ್ಚಿದ ನಂತರ ಸ್ವಲ್ಪ ಉರಿಯುವ ಸಾಸಿವೆ ಪ್ಯಾಕು ಕೀಲು ನೋವುಗಳಿಗೆ ಪರಿಣಾಮಕಾರಿಯಾದರೆ, ಮಡ್ಪ್ಯಾಕುಗಳು ದೇಹದಲ್ಲಿ

ತೇವಾಂಶವನ್ನು ಹೆಚ್ಚಿಸಿ ನೋವು ಹೀರಿಕೊಳ್ಳಲು ಸಹಕಾರಿ.

ಕತ್ತು ನೋವಿನಿಂದ ಹಿಡಿದು ಬೆನ್ನು, ಸೊಂಟ, ಮಂಡಿ ನೋವೆಂದು ಬಳಲುವ ನನ್ನ ಹಲವಾರು ಗೆಳತಿಯರು ನನ್ನನ್ನು ಸೇರಿಸಿ ಇಂಥ ಮಣ್ಣನ್ನು ನೆತ್ತಿಯಿಂದ ಉಂಗುಷ್ಟದವರೆಗೆ ಹಚ್ಚಿಸಿಕೊಂಡು ಬಿಸಿಲಿಗೆ ನಿಂತಾಗ ನಿಜಕ್ಕೂ ಒಬ್ಬರದೊಬ್ಬರ ಗುರುತೇ ಸಿಗದಂತೆ ನಾನಾ ಭಂಗಿಗಳಲ್ಲಿ ನಿಂತ ಶಿಲಾಬಾಲಿಕೆಯರಂತೆ ತೋರುತ್ತಿದದ್ದು (ಈಗಲೂ ನೆನಪಾದರೆ) ನಗು ತರಿಸುವ ಒಂದು ಅಪರೂಪದ ಚಿತ್ರಣವೇ ಸರಿ!.

ಅಂತೂ ನಮ್ಮ ಲೇಪನದ ಚಿಕಿತ್ಸೆಗಳು ಯಾವ ಲೋಪವೂ ಇಲ್ಲದಂತೆ ಮುಗಿದು ಕ್ಯಾರೆಟ್ ಜೂಸು, ಬಾರ್ಲಿ ನೀರುಗಳ ಸಮಾರಾಧನೆಗಳಿಗೆ ಮತ್ತೊಮ್ಮೆ ನಾವೆಲ್ಲ ಒಟ್ಟಿಗೆಸೇರಿ, ನಂತರ ಸಂಜೆಯ ಭಜನೆ ಕಾರ್ಯಕ್ರಮಕ್ಕೆ ಹಾಜರಾಗುತ್ತಿದ್ದೆವು. ನೂರಾರು ಹಾಡು/ ಭಜನೆಗಳನ್ನು ಕಲಿತು ಖುಷಿಯಿಂದ ಹಾಡುವ ಅಮ್ಮನನ್ನು ಆವರಂತೆ ಭಜನೋತ್ಸಾಹಿಗಳ ಗುಂಪಿನೊಂದಿಗೆ ಬಿಟ್ಟು, ಮಳೆಯಿಲ್ಲದ ದಿನವಾದರೆ ಸಂಜೆಯ ಯೋಗಾಸನದ ಕ್ಲಾಸಿನ ಬದಲು ವಿಹಾರಾಸನ (ವಾಕಿಂಗ್) ಮಾಡಲು ಕೇಂದ್ರಕ್ಕೆ ಹೊಂದಿಕೊಂಡಂತೆ ಮರಗಿಡಗಳಿಂದ ಕೂಡಿದ ಪ್ರಶಾಂತವಾದ ಸುಂದರ ಉದ್ಯಾವನಕ್ಕೆ ಗೆಳತಿಯರೊಡನೆ ತೆರಳಿ ಐದಾರು ಸುತ್ತು ಹೊಡೆದು ಸುಸ್ತಾದ ಹಸಿದ ಹೊಟ್ಟೆಗೆ ಹಸಿ ತರಕಾರಿಯ ಡಯಟ್ ಆಪ್ಯಾಯಮಾನವಾಗಿ ತೋರುತಿತ್ತು.

ಇನ್ನು ರಾತ್ರಿ ಎಂಟರ ನಂತರವೂ (ನಮ್ಮ ಪಾಡಿಗಿರಲು ಬಿಡದೆ) ಕೇಂದ್ರದ ಮುಖ್ಯ ವೈದ್ಯರಿಂದ ಪ್ರಕೃತಿ ಚಿಕಿತ್ಸೆಯ ಮಹತ್ವ, ಆರೋಗ್ಯಕರ ಜೀವನ ಶೈಲಿಯ ಉಪಯೋಗಗಳ ಕುರಿತು ಉಪನ್ಯಾಸಗಳಿಗೆ ನಮ್ಮನ್ನೆಲ್ಲಾ ಎಳೆದು ತಂದರೆ.., ಒಂಬತ್ತರ ನಂತರ ಮಹಡಿಯ ಮೇಲಿನ ಮತ್ತೊಂದು ಯೋಗಾ ಹಾಲಿಗೆ ನಮ್ಮನ್ನು ಹತ್ತಿಸಿ, ಏಕಾಗ್ರತೆ ಹೆಚ್ಚಿಸಿಕೊಳ್ಳುವ, ಹಾಗು ಕಣ್ಣುಗಳ ವ್ಯಾಯಾಮವಾದ ತ್ರಾಟಕವನ್ನು ಮಾಡಿಸಿ ಅಂದಿನ ಚಿಕಿತ್ಸೆಗಳಿಗೆ ತೆರೆ ಎಳೆದಾಗ, ಸಿಕ್ಕಾಪಟ್ಟೆ ನಮ್ಮ ಕಣ್ಣೂ ಎಳೆದುನಿದ್ರೆಯ ಗುಂಗಿನಲ್ಲೆ ರೂಮಿನತ್ತ ಹೆಜ್ಜೆ ಹಾಕುತ್ತಿದ್ದೆವು.

ಅಂತೂ ನಮ್ಮ ಹದಿನೈದು ದಿನಗಳ ನಿಸರ್ಗೋಪಚಾರದ ಸುಂದರ ಅನುಭವಗಳನ್ನು ಪಡೆದು ಮೈ ಮನಗಳನ್ನು ಹಗುರಾಗಿಸಿ ಬೆನ್ನು ನೋವು ಸಾಕಷ್ಟು ಗುಣವಾಗಿ ಮರಳಿ ಬರುವ ಹೊತ್ತಿಗೆ ನನ್ನ ತೂಕ ಮೂರುವರಿ ಕೇಜಿ ಇಳಿದಾಗ ನಾನಂತೂ ವೆರಿ ವೆರಿ ಹ್ಯಾಪಿಯಾಗಿದ್ದೆ! ಆದರೆ ನನ್ನ ಮಗ ಹಾಗು ಅಮ್ಮನ ತೂಕ ತಲಾ ನಾಲ್ಕೂವರೆ ಕೇಜಿಯಷ್ಟು ಇಳಿದು ನಾನು ಮಗನನ್ನು (ಕೊಂಚ ಹೊಟ್ಟೆಯುರಿಯಿಂದ) ನೀನು ನನಗಿಂತ ದೊಡ್ಡ ಲೂಸರ್ ಎಂದು ಕಿಚಾಯಿಸಿ ನಕ್ಕರೆ, ಹೊಟ್ಟೆ ತುಂಬಾ ಅವರೆಕಾಯಿ ಉಪ್ಪಿಟ್ಟು ತಿನ್ನುವ ಆಸೆಯಲಿ ಉತ್ಸಾಹದಿಂದ ಬ್ಯಾಗ್ ಹಿಡಿದು ನಿಂತ ಅಮ್ಮನಿಗೆ ಅಬ್ಬಾ! ಮನೆಗೆ ಹೋದ ಮೇಲೆ ಒಂದು ದೊಡ್ಡ ಕಪ್ಪಿನಲ್ಲಿ ಬಿಸಿ ಬಿಸಿ ಟೀ ಕುಡಿಬೇಕು ಅಂತ ಆಸೆಯಾಗ್ತಾ ಇದೆ, ಎಂದು ನಾನು ರಾಗ ಹಾಡಿದಾಗ, ಕೈಯಲ್ಲಿ ಬೆತ್ತ ಹಿಡಿದು ನಿಂತ ಒಳಮನಸು ಸ್ವಲ್ಪ ದಿನವಾದರೂ ಸೋರೆಕಾಯಿ ಜೂಸು ಮುಂದುವರೆಸು ಮಾರಾಯ್ತಿ ಎಂದು ಗದರಿಸಿಯೇ ಬಿಟ್ಟಿತು.

# ಸಂಪಾದಕರಿಗೆ ಇನ್ನೊಂದು ಪತ್ರ

**ಎಚ್. ಆರ್. ಹನುಮಂತರಾವ್**

**"ಬೊಂಬಾಟ್ ಸುದ್ಧಿ" ಪತ್ರಿಕೆಯ ಸಂಪಾದಕರಿಗೆ,**

ಗೊಂದಲಪುರ, ತಂಗಳೂರು ನಗರ.

ನನ್ನ ಅನಂತಾನಂತ ಪ್ರಣಾಮಗಳು. ನಾನು ಈ ಪತ್ರ ಬರೆದ ಉದ್ದೇಶ ತಡಮಾಡದೆ ಹೇಳಿಬಿಡುತ್ತೇನೆ. ಮೊಟ್ಟ ಮೊದಲಿಗೆ ನಿಮ್ಮ ಕ್ಷಮೆ ಕೋರುವೆ. ಕಾರಣ ನಿಮ್ಮ ವೇಳೆ ಅಮೂಲ್ಯ.

1. ನಿಮಗೆ ನಾನು ಕಳುಹಿಸಿದ ನನ್ನ ಬರಹಗಳೆಲ್ಲಾ ಇಷ್ಟೂ ದಿನಗಳು–ದಿನಗಳೇನು ಬಂತು–ವರ್ಷಕ್ಕೂ ಹೆಚ್ಚುಕಾಲ ಯಾವುದೋ ಅಗೋಚರ ಶಕ್ತಿ ನಿಮ್ಮನ್ನ ಪ್ರೇರೇಪಿಸಿ ಕಸದ ಬುಟ್ಟಿಯೆಡೆಗೆ ನನ್ನ ಲೇಖನಗಳನ್ನ ಒಯ್ಯುತ್ತಿದೆಯೆಂಬ ಅನುಮಾನವುಂಟು. ಇರಲಿ, ನಾನು ಯಾವುದೋ ಹಠಕ್ಕೆ ಬಿದ್ದು ಬರೆಯಲು ಪ್ರಯತ್ನಿಸಿದ್ದೇನೋ ನಿಜವೆ. ಆದರೆ ಶಾಲಾ ಬಾಲಕನಾಗಿದ್ದಾಗಲೇ ಆ ಕಾಲದ "ಚಂದ ಮಾಮ, ಬಾಲ ಮಿತ್ರ, ಬಾಲ ಬೋಧೆ, ಚಿಲಿಪಿಲಿ, ನಂದನ ವನ"ಗಳಂಥವನ್ನ ಓದುತ್ತಿದ್ದವನು. ಶಾಲೆಯಲ್ಲಿ ವಿರಾಮದ ವೇಳೆ ಹುಡುಗರಿಗೆ ಆ ಕಥೆಗಳನ್ನ ಇನ್ನಷ್ಟು ಎಳೆದೋ, ಬದಲಾಯಿಸಿಯೋ ಹೇಳುತ್ತಿದ್ದೆ. ನಮ್ಮ ಮೇಷ್ಟರು ಖುಷಿಯಿಂದ 'ನೀನೇ ಇವೆಲ್ಲ ಬರೆದೆಯೋ ಇಲ್ಲ ಯಾರಾದರೂ ಹೇಳಿ ಬರೆಸಿದರೋ' ಎಂದು ಅನೇಕ ಬಾರಿ ಪ್ರಶ್ನಿಸಿದ್ದುಂಟು. ನಾಚಿಕೆಯಿಂದ ತಲೆ ಬಗ್ಗಿಸಿ ಉತ್ತರ ಕೊಡದೆ ಸುಮ್ಮನಿರುತ್ತಿದ್ದೆ. ನನ್ನ ಅಮ್ಮ ಮಾತ್ರ ತನ್ನ ಎಲ್ಲಾ ಬಂಧುಗಳಲ್ಲಿ, ನೆರೆಹೊರೆಯರಲ್ಲಿ ನಾನು ಮುಂದೆ ಅತಿ ಉದ್ಧಾಮ ಪಂಡಿತನೋ, ಸಾಹಿತಿಯೋ ಆಗುವೆನೆಂದು ಬಾಲಿಶ ಬರಹಗಳನ್ನ ತಿದ್ದಿ, ಅದಕ್ಕೆ ತನ್ನದನ್ನೂ ಸ್ವಲ್ಪ ಸೇರಿಸಿ, ಪ್ರೌಢಿಮೆಯನ್ನ ಮೆರೆಸಿ ಬೀಗುತ್ತಿದ್ದುದುಂಟು. ಜನರ ಕೆಟ್ಟ ದೃಷ್ಟಿ ನಿವಾರಿಸಲು ಆಗಾಗ್ಗೆ ಪರಕೆಯ ಸುಟ್ಟು ದೃಷ್ಟಿ ತೆಗೆಯುತ್ತಿದ್ದುಂಟು. ಅವೇ ಬಹುಷ: ನನ್ನ ಬರಹಗಳ ಸಂಖ್ಯೆಯನ್ನ ಮೀರಿಸಿರಬಹುದೇನೋ. ತಪ್ಪೇನು? ಎಲ್ಲ ತಾಯಂದಿರೂ ಆಶಿಸುವುದೂ ಅದೇನೇವೆಯೆ? ಆ ತಾಯಿ ಶಾರದೆ ಇಂದು ಪಂಡಿತರೆನಿಸಿಕೊಳುವವರಿಗೂ ಕಾಣದ ಕೈನಲ್ಲಿ ಹೀಗೆ ಬರೆಸಿರಬೇಕೆಂಬ ಅನುಮಾನವಿದೆ. ಸಾಮುವೆಲ್ ಜಾನ್ಸನ್ ಎಂಬ ಪ್ರಸಿದ್ಧ ಆಂಗ್ಲ ಭಾಷಾ ವಿಶಾರದನ ತಂದೆಯೂ ಇವನ ಬಾಲ್ಯದಲ್ಲಿ ಹೀಗೇ ಮಾಡುತ್ತಿದ್ದರೆಂದು ಯಾರೋ ಹೇಳಿದ್ದು ನನ್ನ ಕಿವಿಗೆ ಬಿದ್ದಿದೆ.

2. ನನ್ನ ಮನಸ್ಸಿನಲ್ಲಿ ಲೇಖಕನಾಗುವ ಬಯಕೆ ಆಗಲೇ ಮೂಡುತ್ತಿತ್ತು ನನಗರಿವಿಲ್ಲದೆಯೆ. ಅದನ್ನೇ ಅಲ್ಲವೆ ಧೀಮಂತ ಶಕ್ತಿ ಎನ್ನುವುದು? ಹೈಸ್ಕೂಲಿನಲ್ಲಿದ್ದಾಗಲೆ ಯಾರಿಗೂ ತಿಳಿಯದಂತೆ ಹೆದರುತ್ತಾ ನನ್ನ ಬರಹವನ್ನ ಸಿನೆಮ ಮಂದಿರದ ಪಕ್ಕಕ್ಕಿದ್ದ ಸುಪ್ರಸಿದ್ದ ಪತ್ರಿಕೆಯ ಸಂಪಾದಕರು–ವೃತ್ತಿಯಲ್ಲಿ ವೈದ್ಯರು–ಅವರ ಜವಾನನ ಕೈಗೆ ಕೊಟ್ಟು ಓಡಿಬಂದಿದ್ದೆ. ನಂತರ ಕಾಲೇಜಿಗೆ ಬರುವ ವೇಳೆಗೆ ಒಂದೆರಡು ಕಥೆಗಳನ್ನ ಬರೆಯುವ ಸಾಹಸ ಮಾಡಿದ್ದುಂಟು. ಸ್ನೇಹಿತರಿಗೆ ತೋರಿಸಿದೆ. ಯಾರೂ ಪ್ರತಿಕ್ರಿಯಸದಿದ್ದರೂ, ಹಲವು ತಲೆಹರಟೆಗಳು

ಲೇವಡಿಮಾಡಿದ್ದರು. ಆದರೂ, ಎಲ್ಲರಿಗೂ ತೋರಿಸಿ ಖುಶಿ ಪಡುತ್ತಿದ್ದೆ, ಅವರಿಗಾಗದ ಕೆಲಸ ನಾನು ಮಾಡಿದ್ದರಿಂದ ಅವರಿಗೆ ಹೊಟ್ಟೆಕಿಚ್ಚೆಂದು ಭಾವಿಸಿದ್ದುಂಟು. ನನ್ನ ಪ್ರಯತ್ನ ನಿಲ್ಲಲಿಲ್ಲ. ಹೀಗಿರುವಾಗ, ನಮ್ಮ ಮನೆಗೆ ಬಂದ ಒಬ್ಬ ವಯಸ್ಸಾದ ನೆಂಟ–ಆತ ಯಾವುದೋ ದೇವಸ್ಥಾನದ ಪೂಜಾರಿ, ಆ ಬಗ್ಗೆ ಏನೋ ಬರೆದಿದ್ದನಂತೆ, ಅದನ್ನ ಯಾವುದೋ ಪತ್ರಿಕೆ 'ಪ್ರಿಂಟಿಸಿದ್ದರಂತೆ' ಜಂಬ ಕೊಚ್ಚಿಕೊಳ್ಳುತ್ತಿದ್ದ. ನಾನು ಆತನ ಸಲಹೆ ಕೇಳಿದೆ, ನಾ ಬರೆದಿದನ್ನ ನೋಡಿದ–ಓದಲಿಲ್ಲ, ಚೆನ್ನಾಗಿದೆ, ಕಳಿಸು ಎಂದು ಬೆನ್ನು ಗುದ್ದಿದ್ದ. ದೇವರ ನೈವೇದ್ಯ ತಿಂದು, ತಿಂದು ಹೊಟ್ಟೆ ಉಬ್ಬಿತ್ತು, ಆದರೂ ಪೈಲ್ವಾನನ ಬಾಡಿ. ನಾ ಆ ಏಟಿಗೆ ಮುಗ್ಗರಿಸಿ ಬಿದ್ದದ್ದು ನೆನಪಿದೆ. ಅದೂ ಒಂದು ದೇವರ ಮಹಿಮೆಯೆಂದೇ ಭಾವಿಸಿದೆ. ಅಲ್ಲಿಂದ ಮುಂದೆ ನನಗೆ ತಡೆಯೇ ಇರಲಿಲ್ಲ, ಬರೆದೆ, ಬರೆದೆ, ನಾ ಬರೆದೆದ್ದೆಲ್ಲ ಅನೇಕ ಪತ್ರಿಕೆಗಳಿಗೆ ರವಾನಿಸಿದೆ, ಎಲ್ಲ ವ್ಯರ್ಥ, ಸಾಕಷ್ಟು ಅಂಚೆ ಸ್ಟಾಂಪು ಹಾಕಿದರೆ ವಾಪಸ್ಸು ಕಳುಹಿಸುತ್ತೇವೆಂದಿದ್ದಕ್ಕೆ ಹಾಗೆ ಮಾಡದೆ ಸುಮ್ಮನಿದ್ದೆ. ಕಾರಣ, ಕೈ ತಪ್ಪಿಯಾದರೂ ಅದು ಅಚ್ಚಿನ ಮನೆ ತಲುಪುವುದೇನೋ ಎಂದು ಆಶಿಸಿ. ಮುಂದೊಂದು ದಿನ ನಾನು ಪ್ರಸಿದ್ಧಿಗೆ ಬಂದಾಗ–ಬಂದೇ ಬರುತ್ತೇನೆಂದು–ನಂಬಿಕೆಯಿದೆ. ಆದರೆ, ಆ ಪತ್ರಿಕೆಯವರು ಯಾಕೋ ಅವೆಲ್ಲ ಒಟ್ಟುಗೂಡಿಸಿ 'ಹಿಂದಕ್ಕೆ ಕಳುಹಿಸಿದೆ" ಎಂದು ಬರೆದು ಹಿಂತಿರುಗಿಸಿದ್ದರು.

3. ನಂತರ ಯಾರೋ ಹೇಳಿದರು, "ಬೊಂಬಾಟ್ ಪತ್ರಿಕೆ"ಗೆ ಹೊಸಬ, ಹಳಬ ಅನ್ನೋದೇನಿಲ್ಲ, ಪ್ರಯತ್ನಮಾಡಿ ಅಂತ. ಹಾಗೇಂತ ನಾನೂ ಮನೇಲಿ ದೇವ್ರ ಮುಂದೆ ಕೂತು ಪೂಜೆ ಸಲ್ಸಿ, ಹರಕೆ ಹೊತ್ತು, ಗಂಟೆಗಟ್ಲೆ ತೋಚಿದೆಲ್ಲಾ ಬರೆದೆ, ಬೇಕಾದವರಿಗೆ ತೋರಿಸಿದೆ, ಆವರ್‍ಯಾರೂ ಓದೆದೇನೆ ಕಳಿಸು, ಕಳಿಸು ಎಂದು ಬೆನ್ನು ತಟ್ಟಿ ನನ್ನಿಂದ ದೂರವೇ ಆದರು, ಯಾಕೋ ಏನೋ. ಒಬ್ಬ ಬಂಧು ಮಾತ್ರ ನನ್ ದಾಕ್ಷಿಣ್ಯಕ್ಕೋ ಏನೋ ಕಟ್ಟಿದ್ದು, ಓದಿ, ಏನೇನೋ ಸಿಕ್ಕಾಪಟ್ಟೆ ಸಲಹೆ ಕೊಟ್ಟಿದ್ದುಂಟು. ಅವನು ಹೇಳಿದ್ದ, ನೀ ಏನೇ ಬರೆದ್ರೂ ಅದನ್ನ ರೆಕೆಮೆಂಡ್ ಮಾಡೋವ್ರು ಇದ್ರೇನೆ ಅವು ಗೆಲ್ಲೋದು, ಅಷ್ಟೂ ಗೊತ್ತಿಲ್ವ– ಇದು ಶಿಪಾರಸ್ ಯುಗ– ಅದೂ ಭಾರತದಲ್ಲಿ, ಸರ್ಕಾರೀ ಕಛೇರಿಗಳಲ್ಲದೆ, ಈಚೆಗೆ ಎಲ್ಲಾ ಸಂಸ್ಥೆಗಳಲ್ಲೂ ಒಬ್ಬ ಜವಾನನ ನೌಕರಿಗೂ ಶಿಫಾರಸ್ಸು ಬೇಕೆಂಬ ಸುದ್ದಿ ವ್ಯಾಪಕವಾಗಿದೆ. ಅಲ್ದೆ ಒಬ್ಬ ಸುಪ್ರೀಮ್ ಕೋರ್ಟ ಜಡ್ಜನ ಆಯ್ಕೆ ಮಾಡಬೇಕಾದ್ರೆ ಕಮಿಟೀಲಿ ಮೆಜಾರಿಟಿ ಬರಬೇಕಂತೆ, ಅಲ್ಲಿಗೆ ಎಲ್ಲೆಲ್ಲೂ ಶಿಫಾರಸು ಪತ್ರ ಇರಬೇಕೇನೋ. ಅದು ಗೊತ್ತಿಲ್ಲದ ಸಮಾಚಾರ. ಅದಕ್ಕೇ, ಏನಿಲ್ಲಾಂದ್ರೂ ಕನಿಷ್ಟ ನೀನು ಆ ಪತ್ರಿಕೆ ಕಛೇರಿ ಗೇಟ್ನಲ್ಲಿರೋ ಕಾವಲ್ನವ್ನಾದ್ರೂ ಪರಿಚಯ ಮಾಡ್ಕೋ, ಹಾಗೇ ಸ್ನೇಹಿತನ್ನ ಮಾಡಿಕೋ, ಆಮೇಲ್ನೋಡು ನಿನ್ಸಮಾಚಾರ, ಊರ್‍ಗೆಲ್ಲಾ ನೀನೇ ಸೋದರಮಾವ ಎಂದೆಲ್ಲ ವಿವರ್ಸಿ ಹೋದ ಮುತ್ಠಾಳ. ಅದೂ ಮಾಡಿದ್ನಿಜ. ಸಾಲದ್ದಕ್ಕೆ, ನಮ್ಮನೇ ದಾರೀಲಿರೋ ಪೈಲ್ವಾನ್ ಮುಸ್ತಫ ಖಾನ್ ಗರಡಿಮನೆ ಪಕ್ಕದಲ್ಲಿರೋ ಜ್ಯೋತಿಷಿ ಏನೋ ಮಂತ್ರಿಸಿಕೊಟ್ಟು–ಇದನ್ನ ಪೋಸ್ಟ್ ಡಬ್ಬಾದಲ್ಲಿ ಹಾಕೋವಾಗ–ಈಗೀಗ ಮಿಂಚಂಚೇಲಿ ಕಳ್ಸೋದ, ಇರ್ಲಿ, ಅದರಲ್ಲಿ ಇದನ್ನ ಹಾಕು, ಆಮೇಲ್ನೋಡು ನನ್ನರಾಮತ್ನ ಅಂತ, ಹಾಗೇ ಮಾಡಿದ್ದುಂಟು, ಆ ಪೆಟ್ಟಿಗೆಗೂ ಹೂವು ಮುಡಿಸಿ, ಕೈ ಮುಗಿದು.

4. ನಮ್ಮನೆ ದೇವರು ಆ ವೆಂಕಟರಮಣನಿಗೆ – ಅವ ನಿಜವಾಗಿ

ಸುಂಕದ ರಮಣನೋ, ಸಂಕಟ ರಮಣನೋ– ಎಷ್ಟೋ ಬಾರಿ ಮುಡಿ ಕೊಡುವ ಸಂಕಲ್ಪ ಮಾಡಿದ್ದೂ ಆಯ್ತು, ನೀವು ಎಲ್ಲ ಲೇಖನಗಳನ್ನ ಅದು ಹೇಗೆ ಪಕ್ಕಕ್ಕೆ ತಳ್ಳುತ್ತಿದರೋ ಏನೋ ಆ ವೆಂಕಟನಿಗೇ ಗೊತ್ತು, ಸ್ವಲ್ಪನಾದರೂ ಆತನಿಗಿರಲಿ, ಆತನಿಂದಾದರೂ ನಿಮ್ಮ ಮನಸ್ಸು ಬದಲಾವಣೆಯಾಗೋದು ಬೇಡ್ವ? ಹಗಲು ದರೋಡೆ ಮಾಡಿದವರ ಹಣಾನೂ ಹುಂಡಿಗೇ ಹಾಕ್ಕೊಂಡು ಅವ್ರಗೆಲ್ಲಾ ಜೈಲಿಗೆ ಹೋಗೋದನ್ನ ತಪ್ಸಿ, ವಜ್ರದ ಕಿರೀಟ ಕೊಟ್ರೆ ದೇಶಾನೇ ಕೊಡ್ಸೋವ್ನಾದ್ರೆ ಆ ದೇವು ನನ್ನಬಗ್ಗೆ ಸ್ವಲ್ಪನಾದ್ರೂ ಕನಿಕರ ಬೇಡ್ವ? ಲಂಚ ಕೊಡೋವ್ರಗೆ ಮಾತ್ರ ಅಯ್ಯೋ ಅನ್ನೋದ್ ಸರೀನಾ? ಸಿನೆಮಾವೊಂದ್ರಲ್ಲಿ ಉದಯಕುಮಾರ ಹಾಡಿದ್ದು ಜ್ಞಾಪಕ ಬರ್ತಿದೆ 'ಓ, ಭಗವಂತ, ಪರರಿಗುಪಕರಿಸಿ, ಎನಗಪಕರಿಸೋ ಭಗವಂತಾ ನೀನೇನಾ'ಅಂತ. ನೀವೇನಾರ ಹೇಳಿ, ಅಂದಿನಿಂದ ಈ ಹಲವಾರು ಹೆಂಡತೀರ್ನ ಇಟ್ಕೊಂಡವ್ರ ಗತೀನೇ ಇಷ್ಟು,' ಬುದ್ಧಿ ಒಂದೇ ತರಾ ಇರಲ್ಲ ಮಂಕು ಕವ್ದಿರುತ್ತೆ ಇಲ್ಲ ತುಕ್ಕು ಹಿಡ್ದಿರುತ್ತೆ' ಅನ್ನೋದು ಹೆಂಡ್ತೀರಿರೋವರೆಲ್ಲಾರ ಯೂನಿವರ್ಸಲ್ ಅನುಭವ ಅಂತ ತಿಳಕಂಡು ಹೆಂಡ್ರಿರೋ ದೇವ್ರನ ಬಿಟ್ಟೆ. ಇದೀಗ ಆ ಡೊಳ್ಳು ಹೊಟ್ಟೆ, ಮೋದಕ ಪ್ರಿಯ ಗಣೇಶನ್ನ ಮನಸ್ಸಿನಲ್ಲಿ ಇಟಕಂಡು ಬರೆಯೋದನ್ನ ನಿಲ್ಸದೆ ಪತ್ರಿಕೆಗಳಿಗೆ ಕಳಸೋದು ಅಂತ ತೀರ್ಮಾನಿಸಿದೀನಿ. ನಾನು ಕನ್ನಡ ಓರಾಟಗಾರರಂತೆ ಛಲಗಾರ, ಏನೇ ಬರಲಿ ಕನ್ನಡಕ್ಕೆ ಜಯವಿರಲಿ, ನನ್ನ ಲೇಖನಗಳನ್ನ ಪ್ರಿಂಟ್ಸೋ ಎದೆಗಾರ ಸಂಪಾದಕರನ್ನ ಹಿಡಿದೇ ಹಿಡತೀನಿ ಅಂತ ಆವನ ಮುಂದೆ ಕಡಬು ಕೈಲ್ಲಿ ಹಿಡ್ದು ಪ್ರಮಾಣ ಮಾಡಿದ್ದೇನೆ. ಎಷ್ಟಾದ್ರೂ, ಈತ ಏನ ಕಮ್ಮಿ ಕಷ್ಟ ಪಟ್ಟಿದಾನ್ಯೆ? ಆ ವ್ಯಾಸ ಋಷಿಯ ಕಾವ್ಯ ರೂಪದ ರನ್ನಿಂಗ್ ಕಾಮೆಂಟರೀನ ಟನ್ ಗಟ್ಲೆ–ಇಪ್ಪತ್ನಾಕು ಸಾವ್ರಕ್ಕೂ ಹೆಚ್ಚು ಪದ್ಯಗಳನ್ನ–ಅಷ್ಟೇ ಕಂಪ್ಯೂಟರ್ ಸ್ಪೀಡ್ನಲ್ಲಿ ಬರೆದನಂತೆ,'– ಹಾಗಂತ ನಮ್ಮನೆ ಹತ್ರ ಇರೋ ಪಾಡುರಂಗ ದೇವಸ್ಥಾನದ ಹರಿಕಥೆ ಆಚಾರ್ರು ಹೇಳಿದ್ರು–ನಿಮಗೂ ತಿಳಿದಿರಬಹುದು, ಆತ ಹೆಣ್ಣಿನ ಸೌಂದರ್ಯ ವರ್ಣಿಸೋವಾಗ–ಆತನ ಕಣ್ಣೊಂದು ಸ್ವಲ್ಪ ಓರೆ–ಕಿಚಾಯ್ಸೋ ಹುಡ್ರು 'ಹೋತನ್ಕಣ್ಣು ಹೋರಿ ಮ್ಯಾಗೇ, ಆಚಾರೀ ಕಣ್ ಸೀರೆನ್ಮ್ಯಾಗೆ– ಅಂತ ಆಡ್ಕೊಳ್ತಿದ್ದರು. ನಂತರ ಕಾಲೇಜಿಗೆ ಬರೋ ವೇಳೆಗೆ ಒಂದೆರಡು ಕಥೆಗಳನ್ನ ಬರೆಯುವ ಸಾಹಸ ಮಾಡಿದ್ದುಂಟು. ಅಂದ್ಮೇಲೆ ನನ್ನ ಲೇಖನಗಳ ಬಗ್ಗೆ ಕುಬ್ಜನಿಗೆ 'ಅಯ್ಯೋ ಪಾಪ' ಅನ್ಸೊದಿಲ್ವೆ ಗೌರವ ಸಂಪಾದಕ್ರೇ? ನಿಮಗೂ ಬಿಸಿ ತಟ್ಟಲೇಬೇಕಾ?

5. ಈ ಮಧ್ಯೆ, ನನಗೊಬ್ಬ ಉದ್ದಾಮ ಸಾಹಿತಿಗಳ ಪರಿಚಯವಾಯ್ತು. ಅವ್ರು ನನ್ನ ಪರಿಸ್ಥಿತಿಯನ್ನ ತಿಳಿದು ಸಲಹೆ ಕೊಟ್ಟರು. "ನೋಡು, ಒಂದಷ್ಟ್ ದಿನ ಬರಯೋದ ನಿಲ್ಸು, ಬರೆಯೋದನ್ನ ನಿಲ್ಲಿಸದಿದ್ರೂವೆ ಸಾಕಷ್ಟು ಪುಸ್ತಕಗಳನ್ನ ಓದಿಯಾದ್ರೂ, ಮಹಾಭಾರತ, ರಾಮಾಯಣ, ಪಂಪ, ರತ್ನಾಕರ, ಲಕ್ಷ್ಮೀಶ, ಕುವೆಂಪು, ಮಾಸ್ತಿ, ಗುಂಡಪ್ಪ, ಅಡಿಗ, ಕಾರಂತ–ಇಂತಹವರ ಕೃತಿಗಳ ಓದಿ ಹೇಗೆ ಬರೆಯೋದು ಅಂತ ಕಲಿ; ನಂತರ ಒಳ್ಳೆಯ ಸಾಹಿತಿಗಳಿಗೆ ತೋರಿಸು" ಎಂದಿದ್ದರು. ಒಳ್ಳೆಯ ಸಲಹೆ ಎಂದು ನಾನು ಮೊದಲಿಗೆ ಬಾಲ ಭಾರತ, ಎಳೆಯರಿಗೆ ರಾಮಾಯಣ, ಅಮರ ಚಿತ್ರ ಕಥಾ ಇಂಥಹವನ್ನೋದಿದೆ. ನನಗೆ ಹೆಚ್ಚಿನ ಸ್ಫೂರ್ತಿ ಬಂದಿದ್ದು ನಿಜ. ಇನ್ನಷ್ಟು ಬರೆದು ನಿಮಗೆ ಕಳಿಸಿದ್ದುಂಟು, ಅದನ್ನೆಲ್ಲ ನೀವು ನೋಡಿಯೋ, ನೋಡದೆಯೋ–ಕ್ಷಮಿಸಿ ಈ ಮಾತಿಗೆ–ಹಳೇ

ದಾರಿ ತೋರಿಸಿಬಿಟ್ಟಿರಲ್ಲವೆ? ಹೌದು, ನಿಮಗೆ ಗೊತ್ತಿರಲೇಬೇಕು. ನಿಮ್ಮ ತಪ್ಪಲ್ಲ, 'ಅಯ್ಯೋ' ಎನ್ನದ ವೆಂಕಟನೇ ಕಾರಣ. ನನ್ನ ಲೇಖನಗಳ ಬಗ್ಗೆ ಕುಬ್ಜನಿಗೇನಾದರೂ 'ಅಯ್ಯೋ' ಅನಿಸಿದ್ದರೆ ಹೆಚ್ಚೇನಿಲ್ಲ. ಕಾರಣ–ಆತನಿಗೆ ಗೊತ್ತಿಲ್ಲದ್ದು ಏನಿದೆ?–'ತ್ವಮೇವಂ ಜ್ಞಾನ ಮಯೋಸಿ, ತ್ವಮೇವಮಂ ಬ್ರಹ್ಮ ಮಯೋಸಿ' ಎಂದು ನಾವು ಪಠಿಸುವದಿಲ್ಲವೆ?

6. ನಿಮಗೊಂದು ಮಾತು ಹೇಳಲೇಬೇಕು. ಎಲ್ಲಿಯೋ ಓದಿದ ನೆನಪು–'ಎಳೆಗರುಂ ಎತ್ತಾಗದೆ?'–ಅಂದಮೇಲೆ, ನಾನು ಹಿಂದೆಲ್ಲಾ ಬರೆದುದು ಬಾಲಿಷವಾಗಿಯೋ, ಅರ್ಥವಿಲ್ಲದಾಗಿಯೋ ಕಂಡಿರಬಹುದು. ಆದರೆ, ಇಷ್ಟೆಲ್ಲ ಬರೆದುದಾದ ಮೇಲೆ ಕೈ ಕುದುರುವುದಿಲ್ಲವೆ? ಸಾಕಷ್ಟು ಕುದಿಸಿದ ಮೇಲೆ ಅಕ್ಕಿ ಅನ್ನವಾಗದೆ ಇರುತ್ತದೆಯೆ? 'ಎಳೆಗರುಂ' ಕಾಲಕ್ರಮದಲ್ಲಿ ಹಸುವೋ, ಎತ್ತೋ ಆಗಲೇ ಬೇಕಲ್ಲವೆ, ವಿಧಿ ನಿಯಮ ತಪ್ಪಿಸುವರ್ಯ್ಯಾರು? ಅಲ್ಲದೆ ಮತ್ತೇನು ಕತ್ತೆಯಾಗಬಲ್ಲದೆ? ಹಲವು ಸಲ, ಅಂದು ಏನು ತಪ್ಪೆಂದು ತಿಳಿದಿದ್ದೆವೋ ಇಂದು ಅದೇ ಸರಿ ಎನ್ನುವ ಅನೇಕ ಅನುಭವಗಳು ವಿಜ್ಞಾನದಿಂದಲೂ ಕಾಣಬರುತ್ತದೆ. ಸುಪ್ರಸಿದ್ಧ ವಿಜ್ಞಾನಿ ನ್ಯೂಟನ್ ತಲೆಯ ಮೇಲೆ ಹಣ್ಣು ಬೀಳದಿದ್ದರೆ ಗುರುತ್ವಾಕರ್ಷಣೆಯ ಬಗ್ಗೆ ಏನು ಹೇಳುತ್ತಿದ್ದ? ಆ ಕೀರ್ತಿ ಮತ್ಯಾರಿಗೋ ಸಲ್ಲುತ್ತಿತ್ತಲ್ಲವೆ? ಸೂರ್ಯನು ಭೂಮಿಯ ಸುತ್ತ ಗಿರ್ಕಿ ಹೊಡೆಯುವದೆಂದು ಖಗೋಳ ವಿಜ್ಞಾನಿ ಟಾಲ್ಮಿಯ ಮಾತನ್ನೇ ನಂಬಿದ್ದರು ಧರ್ಮಪಾಲಕರು ಅಂದು. ಅದಕ್ಕೆ ವ್ಯತಿರಿಕ್ತವಾಗಿ ಕೊಪರ್ನಿಕಸ್ ಸಂಶೋಧನೆಯಿಂದ ಸೂರ್ಯನ ಸುತ್ತ ಭೂಮಿ ಸುತ್ತುತ್ತದೆಯೋ ಹೊರತು ಅದಕ್ಕೆ ತದ್ವಿರುದ್ಧವಾಗಿಯಲ್ಲ ಎಂದು ತಿಳಿದಿದ್ದರೂದರೂ ಧೈರ್ಯ ಸಾಲದೆ, ಕೊನೆಗೆ ಅದನ್ನೇ ಎತ್ತಿಹಿಡಿದ ಬ್ರೂನೋ ಪ್ರಕಟಿಸಿಬಿಟ್ಟ. ಕೋಪಕ್ಕೆ ಆತನನ್ನ ಹಾಗೂ ಅದೇ ಸರಿಯೆಂದ ಗೆಲಿಲಿಯೋಗೆ ಶಿಕ್ಷೆ ಕೊಟ್ಟದು ಚರಿತ್ರೆಯಿಂದ ತಿಳಿದಿಲ್ಲವೋ?

7. ಒಂದು ದಿನ, ಕೆಟ್ಟ ಗಳಿಗೆ. ನನ್ನ ಹೆಂಡತಿ–ಒಂದು ದಿನ ಯಾವ್ದೋ ಕೆಟ್ಟ ಕೋಪಕ್ಕೋ, ಗೊತ್ತಿಲ್ಲದೆಯೇ ರದ್ದಿ ಪೇಪರಂಗಡಿಗೆ ಹಳೇ ಪೇಪೇರುಗಳನ್ನ ಕಳಿಸುವಾಗ, ನನ್ನ ಎಲ್ಲಾ ವಾಪಸ್ಸು ಬಂದ ಬರೆದ ಕಟ್ಟುಗಳನ್ನ ಸೇರಿಸಿ ಕಳಿಸಿಬಿಟ್ಟಿದ್ದಳು. ಅದು ನನಗೆ ಗೊತ್ತಾಗಿದ್ದು ಬಹಳ ತಡವಾಗಿಯೇ. ಕೇಳಿದರೆ, ತನಗೆ ಆ ವಿಷಯವೇ ಗೊತ್ತಿಲ್ಲವೆಂಬಂತೆ ಜಾರಿಕೊಂಡಿದ್ದಳು. ನಾನು ರೇಗಿ ಏನು ಪ್ರಯೋಜನ? ಅಲುಮೇಲು ಮಂಗಾಪುರದಲ್ಲಿ ತನ್ನ ಪತ್ನಿ ಹೋಗಿ ನಿಂತ ಮೇಲೆ, ತಿರುಮಲದಲ್ಲಿ ನೆಲಸಿದ ಆ ವೆಂಕಟರಮಣನೇ ಸಂಕಟದಲ್ಲಿರುವಾಗ ನಾನ್ಯಾವ ಲೆಕ್ಕ? ಹೆಂಡತಿಯ ಮೇಲೆ ಸಿಟ್ಟು ಗಾಳಿ ಗುದ್ದಿ ಮೈ ನೋವಿಸಿಕೊಂಡಷ್ಟೇ ಪ್ರಯೋಜನ, ಅಲ್ಲವೆ? ನಿಮ್ಮ ಅನುಭವವೆಂತೋ?

ಆದರೆ ಮರೆಯದಿರಿ, ನಾನು ಓರಾಟಗಾರರಂತೆ ಛಲವಾದಿ. ನಾನು ಬರೆದೇ ಬರೆಯುವೆ, ನಾನೂ ಅವರಂತೆ ಮೆಜಸ್ಟಿಕ್ ಸರ್ಕಲ್ ಬಳಿಯೋ, ಮೈಸೂರು ಬ್ಯಾಂಕ್ ಬಳಿಯೋ ಎಲ್ಲಾದರೂ ಸರಿ, ಅವಕ್ಕೆ ಪ್ರಚಾರಮಾಡಿ, ದಾರಿ ಕಾಣಿಸುವೆ–ಮರೆಯದಿರಿ–ಎಳೆಗರುಂ ಏನಾಗಬಲ್ಲದು? ಜೈ ಭುವನೇಶ್ವರಿ, ಜೈ ಕನ್ನಡ ಮಾತೆ, ಸಿರಿಗನ್ನಡಂ ಗೆಲ್ಗೆ

# ಬೂಮರಾಂಗ್ (ಅಜ್ಜ ಅಜ್ಜಿ ಕಥೆ)

– ಶಂಸ ಐತಾಳ

ಅವರು ಮನಮೋಹನ ರಾವು, ಇವರು ಮನೋನ್ಮಣಿಯಮ್ಮ ಇಬ್ಬರಿಗೂ ಎಪ್ಪತ್ತರ ಆಸುಪಾಸಿನ ಎರಡನೆಯ ಹರೆಯ. ಅವರಿಗೆ ಇಬ್ಬರು ಗಂಡುಮಕ್ಕಳು. ಇಬ್ಬರೂ ಬೆಂಗಳೂರಿಗೆ ವಲಸೆಹೋಗಿ ಹಲವು ವರ್ಷಗಳೇ ಕಳೆದಿವೆ. ಒಬ್ಬ ಖಾಸಗಿ ಆಸ್ಪತ್ರೆಯಲ್ಲಿ ಡಾಕ್ಟರ್ ಆಗಿ, ಇನ್ನೊಬ್ಬ ಮಲ್ಟಿನ್ಯಾಷನಲ್ ಕಂಪನಿಯಲ್ಲಿ ಸಾಫ್ಟ್‌ವೇರ್ ಇಂಜನಿಯರ್ ಆಗಿ ಹಗಲಿರುಳೂ ಬೆವರು ಸುರಿಸಿಕೊಳ್ಳುತ್ತಿದ್ದಾರೆ. ಅವರ ಮಡದಿಯರೂ ವರ್ಕಿಂಗ್ ವಿಮೆನ್ನೇ. ಇಬ್ಬರು ಗಂಡುಮಕ್ಕಳಿಗೂ ಎರಡೆರಡು ಗಂಡುಮಕ್ಕಳು. ಇಬ್ಬರ ಮನೆಗಳಲ್ಲಿಯೂ ಅಡಿಗೆ ಕೆಲಸಕ್ಕೆ ಮತ್ತು ಕಸಮುಸುರೆ ಕೆಲಸಕ್ಕೆ ಇಬ್ಬಿಬ್ಬರು ಕೆಲಸದ ಹೆಂಗಸರಿದ್ದರು. ಮನೆಗಳ ಸಕಲ ಆಡಳಿತವೂ ಆ ಇಬ್ಬರು ಮಹಿಳಾಮಣಿಗಳ ದೋಸ್ತಿ ಸರ್ಕಾರಕ್ಕೇ ಸೇರಿತ್ತು. ಹೀಗೆ ಇಬ್ಬರದೂ ಹೊರಗಿನವರ ದೃಷ್ಟಿಯಲ್ಲಿ ಆದರ್ಶ ಹಾಗೂ ಸುಖೀ ಸಂಸಾರಗಳಾಗಿದ್ದವು.

'ನಿಮ್ಮಲ್ಲಿ ಯಾರಾದರೂ ಒಬ್ಬರು ನಮ್ಮ ಮನೆಗೆ ಬನ್ನಿ' ಎಂದು ಇಬ್ಬರೂ ಒತ್ತಾಯ ಮಾಡುತ್ತಿದ್ದರು. 'ನೀವಿಬ್ಬರೂ ನಮ್ಮ ಮನೆಗೆ ಬಂದು ಇರಿ' ಎಂದು ಯಾವ ಮಗರಾಯನೂ ಒತ್ತಾಯಿಸುತ್ತಿರಲಿಲ್ಲ. ಅಲ್ಲದೆ ಒಬ್ಬರನ್ನೊಬ್ಬರು ಬಿಟ್ಟಿರಲು ಮನಮೋಹನ ರಾವು ಮತ್ತು ಮನೋನ್ಮಣಿಯಮ್ಮ – ಇಬ್ಬರೂ ತಯಾರಿರಲಿಲ್ಲ.

ಹಿರಿಯ ದಂಪತಿಗಳಿಬ್ಬರಿಗೂ ಮಾತುಕಥೆ, ಜಗಳ, ಹರಟೆ ಜಟಾಪಟಿಬೇಕು. ಮಡದಿಗಾದರೂ ಮಾತನಾಡಲು ಬೆಳಿಗ್ಗೆ ಹಾಲುತಂದುಕೊಡುವ ಹುಡುಗಿ, ಪೇಪರ್ ಎಸೆದು ಹೋಗುವ ಹುಡುಗ ಅಥವಾ ಮುಂಜಾನೆಯ ಮಬ್ಬು ಬೆಳಕಿನಲ್ಲಿಯೇ '...ಲ್ಗೇ ರೋಸೂ ನ್ಕಾಂಬ್ಯೋವ್, '...ಮ್ಯಾಟೋ ರುಳ್ಳೀ ಸೊಪ್ಪಾವ್' ಎಂದು ಮುಂತಾಗಿ ಬೀದಿಯ ಎರಡೂ ಬದಿಯ ಎಲ್ಲ ಮನೆಗಳವರಿಗೂ ಕೇಳಿಸುವಂತೆ ಕಿರುಚುತ್ತಾ ತಳ್ಳುಗಾಡಿಯಲ್ಲಿ ಹೂವು ಹಣ್ಣು ತರಕಾರಿಗಳನ್ನು ಮಾರಾಟ ಮಾಡಲು ಒಬ್ಬರ ಹಿಂದೊಬ್ಬರಂತೆ ಬರುವ ಚಿಲ್ಲರೆ ವ್ಯಾಪಾರಿಗಳು – ಹೀಗೆ ಯಾರಾದರೂ ಸಿಗುತ್ತಾರೆ. ಆದರೆ ಗಂಡನಿಗೆ ಮಾತನಾಡಲು ಕಿವಿಗಳು ಸಿಗದೆ ಅವರು ಸದಾ ಮೌನಿಯಾಗಿರಬೇಕಾಗುತ್ತದೆ. ಅವರಿಗೆ ಮಾತಿನ ಹಸಿವೆಯನ್ನು ನೀಗಿಸಿಕೊಳ್ಳಲು ಹೆಂಡತಿಯೇ ಏಕೈಕ ಗತಿ. ಆದರೆ ಆ ಹೆಂಡತಿಗೆ ಗಂಡನ ಮಾತು ಬೇಕಿಲ್ಲ. ರಾಯರು ಮಾತನಾಡಲು ಶುರುಮಾಡಿದೊಡನೆ ಹೇಳಿದ್ದನ್ನೇ ಎಷ್ಟು ಸಲ ಹೇಳುತ್ತೀರಿ? ಯಾರಿಗೆ ಬೇಕು ನಿಮ್ಮ ಹರಿ ಕಥೆ? ಬಾಯಿ ಮುಚ್ಚಿ ಕುಳಿತುಕೊಳ್ಳಿ' ಎಂಬ ಸುಗ್ರೀವಾಜ್ಞೆ ಹೊರಡಿಸುತ್ತಾಳೆ. ಆದರೆ ರಾಯರು ಮಾತು ಬಿಡಲಾರರು. ಹೀಗಾಗಿ ಮನೆಯಲ್ಲಿ ಗಂಡಹೆಂಡಿರ ನಿರಂತರ ಜಗಳ ಇವರ 'ಪ್ರಣಯ ಕಲಹ'ವನ್ನು ಕಂಡುಕೇಳುವ ಅಕ್ಕಪಕ್ಕದ ಮನೆಯವರಿಗೆಲ್ಲ ಪುಕ್ಕಟೆ ಮನರಂಜನೆ.

ಇಂತಿರುವಾಗ ಒಂದು ಅಶುಭದಿನ....

ಮಡದಿಯ ಕಿರಿಕ್ ಸಹಿಸಲಾರದೆ ಕೋಪಗೊಂಡ ಮನಮೋಹನ ರಾವು 'ನಿನ್ನೊಂದಿಗೆ ಇನ್ನೊಂದು ಕ್ಷಣವೂ ನಾನಿರಲಾರೆ' ಎಂದು ಘೋಷಿಸಿ ಹಿರಿಯ ಮಗನ ಮನೆಗೆ ಹೋಗುವ ತಯಾರಿ ನಡೆಸಿದರು. ಮನೋನ್ಮಣಿಯಮ್ಮನೇನು ಕಮ್ಮಿಯೇ? ಅವರೂ ಕಿರಿಯ ಮಗನ ಮನೆಗೆ ಹೋಗಲು ತೀರ್ಮಾನಿಸಿ, ಸೂಟ್‌ಕೇಸ್ ರೆಡಿ ಮಾಡತೊಡಗಿದರು.

ಮನೆಗೆ ಬೀಗ ಹಾಕಿದ ದಂಪತಿಗಳು ಒಂದೊಂದು ಬೀಗದ ಕೈಹಿಡಿದುಕೊಂಡು

ಬಸ್-ಸ್ಟ್ಯಾಂಡಿನತ್ತ ಹೊರಟಾಗ, ವೃದ್ಧದಂಪತಿಗಳು ಎರಡನೆಯ ಇನ್ನಿಂಗ್ಸ್ ಪ್ರಾರಂಭಿಸಿ ಹನಿಮೂನ್‌ಗೆ ಹೊರಟಿರಬೇಕೆಂದೇ ಅಕ್ಕಪಕ್ಕದ ಮನೆಯವರು ಭಾವಿಸಿದರು.

ಹಸಿರು ಉದ್ಯಾನನಗರಿಯಿಂದ ಕಾಂಕ್ರೀಟ್ ಅರಣ್ಯಕ್ಕೆ ಬಂದಂತೆ ಎರಡೇ ದಿನಗಳಲ್ಲಿ ರಾಯರಿಗನಿಸಿತು. ಎಂಟು ಮಹಡಿಗಳ ದೊಡ್ಡ ಅಪಾರ್ಟ್‌ಮೆಂಟಿನಲ್ಲಿ ಕಿಕ್ಕಿರಿದು ತುಂಬಿಕೊಂಡ ಬೆಂಕಿ ಪೊಟ್ಟಣದಂತಹ ಒಂದು ಗೂಡಿನಲ್ಲಿ ಅವರು ಬಂದಿಗಳಾದರು. ಹಳ್ಳಿಯಲ್ಲಾದರೆ ಎಷ್ಟು ಸಲಬೇಕಾದರೂ ಮುಖ್ಯವಾಗಿ ಹೆಂಡತಿ ವಿನಾಕಾರಣವಾಗಿ ಬಯ್ಯಲಾರಂಭಿಸಿದಾಗ, ವಾಕಿಂಗ್ ಹೋಗ ಬಹುದಾಗಿತ್ತು. ಸಂಜೆ ದೇವಾಲಯದ ಮುಂದಿರುವ ಹರಟೆ ಕಟ್ಟೆಯಲ್ಲಿ ಸಮಾನಮನಸ್ಕರೊಂದಿಗೆ ಕಷ್ಟ ಹಂಚಿಕೊಳ್ಳಬಹುದಾಗಿತ್ತು. ಆದರೆ ಇಲ್ಲಿ? ಬೆಳಿಗ್ಗೆ ಬೇಗ ವಾಕಿಂಗ್ ಮುಗಿಸಿ ಬರುತ್ತೇನೆ ಎಂದರೂ ಮಗರಾಯ ಬಿಡುವುದಿಲ್ಲ. ಬೆಳಿಗ್ಗೆ ಯಾವ ಡ್ರೈವರ್‌ಗಳೂ ಟ್ರ್ಯಾಫಿಕ್ ರೂಲ್ಸ್ ಫಾಲೋ ಮಾಡುವುದಿಲ್ಲ. ಫುಟ್‌ಪಾತ್‌ಗಳನ್ನು ಬಿಡದೆ ಎಲ್ಲೆಂದರಲ್ಲಿ ನುಗ್ಗುತ್ತಾರೆ. ನಿಮಗೋ ಮೊದಲೇ ಸರಿಯಾಗಿ ಕಣ್ಣು ಕಾಣಿಸುವುದಿಲ್ಲ ಎಂದು ತಡೆಯುತ್ತಾನೆ. ಸಂಜೆ ವಾಕಿಂಗ್ ಹೋಗೋಣವೆಂದರೆ ವಿಪರೀತ ಟ್ರಾಫಿಕ್ ಜ್ಯಾಮ್. ರಸ್ತೆ ಕ್ರಾಸ್ ಮಾಡಲೂ ಹತ್ತು ಹದಿನೈದು ನಿಮಿಷ ಕಾಯಬೇಕಾಗುತ್ತದೆ. ಮಾತನಾಡಲು ಅಥವಾ ಜಗಳವಾಡಲು ಮಗ, ಸೊಸೆ, ಮೊಮ್ಮಕ್ಕಳು ಯಾರು ಸಿಗುವುದಿಲ್ಲ. ಅಡುಗೆಯ ಅಥವಾ ಕಸಮುಸುರೆಯ ಹೆಂಗಸರೊಂದಿಗೆ ಒಂದೆರಡು ಉಭಯ ಕುಶಲೋಪರಿ ಮಾತನಾಡಲೂ ಹಿಂಜರಿಕೆ ಏಕೆಂದರೆ ಪ್ರತಿದಿನ ಪತ್ರಿಕೆಯಲ್ಲಿ ಬರುವ ಲೈಂಗಿಕ ಹಗರಣಗಳ ವಿರುದ್ಧ ಮಹಿಳೆಯರು ಮಾಡುವ ದೂರುಗಳನ್ನು ಅವರು ಓದುತ್ತಿದ್ದಾರಲ್ಲ! ಹೀಗಾಗಿ ಒಂದು ವಾರ ಕಳೆಯುವಷ್ಟರಲ್ಲಿಯೇ ಬೆಂಗಳೂರು ಮಹಾ ಬೋರಾಗಿ ಅವರು ಅದಷ್ಟು ಬೇಗ ಟಿಕೆಟ್ ಮಾಡಿ ಊರಿಗೆ ಕಳಿಸು ಎಂದು ಮಗನನ್ನು ಬೇಡತೊಡಗಿದರು.

ಕಿರಿಯ ಮಗನ ಮನೆಯಲ್ಲಿ ಮನೋನ್ಮಣಿಯಮ್ಮನಿಗಾದದ್ದೂ ಇದೇ ಅನುಭವ ಸುಮ್ಮನೆ ಕುಳಿತ ಕಾಲವನ್ನು ಕೊಲ್ಲಬೇಕು ಅಡುಗೆ ಮಾಡೋಣವೆಂದರೆ ಬಾಣಸಿಗಳೇ ಇದ್ದಾಳಲ್ಲ! ಅಲ್ಲದೆ ಅಡಿಗೆ ಮಾಡುವ ಆಧುನಿಕ ವಿಧಾನಗಳು ಮತ್ತು ಹೊಸ ಹೊಸ ಉಪಕರಣಗಳ ಬಗೆಗಿನ ತಿಳಿವಳಿಕೆಯೂ ಅವರಿಗಿರಲಿಲ್ಲ. ಫ್ರೆಷ್ ಆಹಾರ ಪದಾರ್ಥಗಳ ರುಚಿನೋಡಿದ್ದ ಅವರ ನಾಲಗೆಗೆ ಫ್ರಿಜ್‌ನಲ್ಲಿಟ್ಟ ತಿಂಡಿತಿನಿಸುಗಳೆಂದರೆ ಅಷ್ಟಕ್ಕಷ್ಟೆ! ಮೊಮ್ಮಕ್ಕಳಿಗೆ ಕಥೆ ಹೇಳೋಣವೆಂದರೆ 'ಗುಡುಗುಡು ಗುಮ್ಮಟರಾಯ' ಅಥವಾ 'ತೋಳ ಬಂತು ತೋಳ'ಗಳಂತಹ ಅಜ್ಜಿ ಕಥೆಗಳೂ ರಾಮಾಯಣ - ಮಹಾಭಾರತಗಳ ಕಥಾಪ್ರಸಂಗಗಳೂ ಅವುಗಳಿಗೆ ಇಷ್ಟವಾಗುವುದಿಲ್ಲ. ಅಲ್ಲದೆ ಅವುಗಳಿಗೆ ಇಷ್ಟವಾಗುವಂತಹ ಹಾರರ್, ಟೆರರ್ ಅಥವಾ ಕ್ರೈಮ್ ಕಥೆಗಳು ಇವರಿಗೆ ತಿಳಿದಿಲ್ಲ. ಹೋಮ್ ವರ್ಕ್ ಹಾಗೂ ಕರಾಟೆ, ಸ್ವಿಮ್ಮಿಂಗ್, ಸಂಗೀತಗಳಂತಹ ವಿಶೇಷ ತರಗತಿಗಳಿಗೇ ಅವುಗಳಿಗೆ ಸಮಯ ಸಾಕಾಗುವುದಿಲ್ಲ. ಅದೃಷ್ಟವಶಾತ್ ಅಲ್ಪಸ್ವಲ್ಪ ಸಮಯ ಸಿಕ್ಕಿದರೂ ಆಗ ಅವು ಸ್ಮಾರ್ಟ್ ಫೋನ್‌ಗಳಲ್ಲಿ ಮುಳುಗಿಕೊಳ್ಳುತ್ತವೆ. ಹರಟೆ ಹೊಡೆಯಲು ಹಾಲಿನ ಹುಡುಗಿ, ಪೇಪರ್ ಹುಡುಗ ಅಥವಾ ತಳ್ಳುಗಾಡಿಗಳ ಚಿಲ್ಲರೆ ವ್ಯಾಪಾರಿಗಳೂ ಇಲ್ಲಿಲ್ಲ. ಆದುದರಿಂದ ಒಂದು ವಾರ ಕಳೆಯುವಷ್ಟರಲ್ಲಿಯೇ ಬೆಂಗಳೂರು ಮಹಾ ಬೋರಾಗಿ ಅವರು 'ಆದಷ್ಟುಬೇಗ ಟಿಕೆಟ್ ಮಾಡಿ ಊರಿಗೆ ಕಳಿಸು' ಎಂದು ಮಗನನ್ನು ಕಾಡತೊಡಗಿದರು.

ವಾರದಿಂದ ನಾಪತ್ತೆಯಾಗಿದ್ದ ಮನಮೋಹನರಾವು ಮತ್ತು ಮನೋನ್ಮಣಿಯಮ್ಮರನ್ನು ಮತ್ತೆನೋಡಿದ ಅಕ್ಕಪಕ್ಕದ ಮನೆಯವರು 'ವೃದ್ಧ ದಂಪತಿಗಳ ಹನಿಮೂನ್ ಮುಗಿದಿರಬೇಕು' ಎಂದು ಭಾವಿಸಿದರು.

# ಹೀಗೊಂದು ಅತಿಥಿ ಸತ್ಕಾರ...

**– ನಳಿನಿ. ಟಿ. ಭೀಮಪ್ಪ**

'ಅಯ್ಯೋ, ಬೆಂಗಳೂರಿನಲ್ಲಿ ಸುರೇಶನ ಮನೆಯಲ್ಲಿ ಇಳಿದುಕೊಳ್ಳುತ್ತಿದ್ದೀರಾ?, ಸ್ವಲ್ಪ ತಿಂಡಿ, ಗಿಂಡಿ ಕಟ್ಟಿಕೊಂಡು ಹೋಗಿ ಹಸಿವಾದಾಗ ಬೇಕಾಗಬಹುದು ಎಂದು ಎಂದು ನಮ್ಮ ಚಿಕ್ಕಪ್ಪ ಛೇಡಿಸಿದಾಗ ಆಶ್ಚರ್ಯವಾಗಿತ್ತು.

'ಯಾಕೆ ಹಾಗೆ ಹೇಳುತ್ತಿದ್ದೀರಾ' ಎಂದು ಕೇಳಿದೆ.

ಏನಿಲ್ಲಮ್ಮ ಈಗೊಂದು ಎಂಟು ಹತ್ತು ವರ್ಷದ ಕೆಳಗೆ ಯಾರಿಗೋ ಹುಷಾರಿಲ್ಲ ಎಂದು ಬೆಂಗಳೂರಿಗೆ ನೋಡಲು ನಮ್ಮ ಭಾವಮೈದ ರಘು ಜೊತೆ ಹೋಗಿದ್ದೆ. ಆಸ್ಪತ್ರೆ ಎಲ್ಲಿ ಬರುತ್ತದೆ ಎಂದು ಕೇಳಲು ಸುರೇಶನಿಗೆ ಫೋನಾಯಿಸಿದ್ದೆ. ಆಗ ಸುರೇಶ ತನ್ನ ಮನೆಗೆ ಟಿಫಿನ್ನಿಗೆ ಬರಲೇಬೇಕು ಎಂದು ಫೋನು ಮಾಡಿ ಒತ್ತಾಯ ಮಾಡಿದ್ದ. ಅವನ ಹೆಂಡತಿ ಸ್ವಲ್ಪ ಕೈಬಿಗಿ ಅಂತಾ ಕೇಳಿದ್ದೆ. ಹೇಗಿದ್ದರೂ ಅವರ ಮನೆಯಿಂದ ಆಸ್ಪತ್ರೆ ಹತ್ತಿರ ಆಗುತ್ತದೆ, ಹಾಗಾಗಿ ಸರಿ, ಕರೆದಿದ್ದಾರಲ್ಲ ಅಲ್ಲೇ ನಾಷ್ಟಾ ಮಾಡಿ ಹೋದರಾಯಿತು ಎಂದು ಬಸ್ಸು ಇಳಿಯುತ್ತಿದ್ದ ಹಾಗೆ ಸೀದಾ ಅವರ ಮನೆಗೆ ಹೋದೆವು. ಎಂಥಹ ದೊಡ್ಡ ಮನೆ ನಮ್ಮ ಸುರೇಶನದು, ಅದೆಷ್ಟು ಚೆನ್ನಾಗಿ ದುಬಾರಿ ವಸ್ತುಗಳಿಂದ ಅಲಂಕರಿಸಿದ್ದರು, ಚಿಕ್ಕ ವಯಸ್ಸಿನಲ್ಲೇ ಅದೆಷ್ಟು ದುಡಿದಿದ್ದಾನೆ, ನೋಡಿ ತುಂಬಾ ಖುಷಿಯಾಗಿತ್ತು.

ಕೈಕಾಲು ತೊಳೆದುಕೊಂಡು ಟಿಫಿನ್ನಿಗೆ ಕುಳಿತುಕೊಂಡೆವು. ಸುರೇಶನ ಇಬ್ಬರು ಮಕ್ಕಳು, ಹಾಗೂ ನಾವಿಬ್ಬರು ಸೇರಿ ಒಟ್ಟು ಐದು ಜನ ಡೈನಿಂಗ್ ಟೇಬಲ್ಲಿಗೆ ಕುಳಿತುಕೊಂಡೆವು. ಎಲ್ಲರಿಗೂ ತಟ್ಟೆಗಳಲ್ಲಿ ಹಬೆಯಾಡುತ್ತಿದ್ದ ಬಿಸಿ ಬಿಸಿ ಉಪ್ಪಿಟ್ಟು ಬಂತು. ಒಂದು ಸಣ್ಣ ಜಾಮೂನು ಬಟ್ಟಲಿನಲ್ಲಿ ಉಪ್ಪಿಟ್ಟನ್ನು ತುಂಬಿ ದುಂಡಾಗಿ ಬೋರಲು ಹಾಕಿ ಅದರ ಮೇಲೆ ತೆಂಗಿನ ತುರಿ, ಕೊತ್ತಂಬರಿ ಸೊಪ್ಪು, ಸೇವು ಹಾಕಿ ತುಂಬಾ ಆಕರ್ಷಣೀಯವಾಗಿ ಅಲಂಕರಿಸಿ ತಂದಿಟ್ಟರು. ಮಕ್ಕಳು ಚಿಕ್ಕವರಲ್ವಾ, ಅದಕ್ಕೆ ಹೀಗೆ ಚಿಕ್ಕ ಚಿಕ್ಕ ಬಟ್ಟಲು ಇಟ್ಟಿರಬೇಕು ಅಂದುಕೊಂಡೆವು. ಅದನ್ನು ನೋಡಿ ನಮ್ಮ ಮನೆಯಲ್ಲೂ ಹೀಗೇ ನಾಜೂಕಾಗಿ ಬಡಿಸುವುದನ್ನು ಕಲಿ ಅಂತಾ ನಿಮ್ಮ ಚಿಕ್ಕಮ್ಮನಿಗೆ ಹೇಳಬೇಕು, ಒಳ್ಳೆ ಛತ್ರದಲ್ಲಿ ಬಡಿಸಿದ ಹಾಗೆ ತಟ್ಟೆ ತುಂಬಾ ಒಟ್ಟಿರುತ್ತಾಳೆ. ಬೇಕೆಂದರೆ ಮತ್ತೆ ಮತ್ತೆ ಕೇಳಿ ಇನ್ನೊಂದು ನಾಲ್ಕೈದು ಬಟ್ಟಲು ಹಾಕಬಹುದು ಎಂದು ಯೋಚಿಸುತ್ತಾ ಏಳೆಂಟು ಗುಕ್ಕಿಗೆ ಉಪ್ಪಿಟ್ಟು ಮುಗಿಸಿ ಮತ್ತೆ ತರುವುದನ್ನೇ ಕಾಯುತ್ತಾ ಕುಳಿತಿದ್ದೆವು. ಮತ್ತೊಂದು ಸಣ್ಣ ಜಾಮೂನಿನ ಬಟ್ಟಲಿನಲ್ಲಿ ಉಪ್ಪಿಟ್ಟು ಜೊತೆಗೆ ಸಣ್ಣ ಟೀ ಚಮಚೆ ಇಟ್ಟುಕೊಂಡು ಬಂದ ಆತನ ಹೆಂಡತಿ ಇನ್ನು ಸ್ವಲ್ಪ ಹಾಕಿಸಿಕೊಳ್ಳಿ ಅಂತಾ ಕೇಳುತ್ತಾ ಬಂದಳು. ಅವರ ಕುಟುಂಬದ ಎಲ್ಲರೂ ಬೇಡವೇ ಬೇಡ ಎಂದು ಎಲ್ಲರೂ ಕೈ ಅಡ್ಡಗಟ್ಟಿದರು. ನಮ್ಮ ಸುರೇಶನೂ ಕೈ ಅಡ್ಡಗಟ್ಟಿದಾಗ ನಮ್ಮ ಮನೆಯಲ್ಲಿ ಎರಡು ತಟ್ಟೆ ತುಂಬಾ ಉಪ್ಪಿಟ್ಟು ಹಾಕಿಸಿಕೊಂಡು, ಗಟ್ಟಿ ಮೊಸರು ಕೇಳಿ ಲೊಟ್ಟೆ ಹೊಡೆಯುತ್ತ ತಿನ್ನುವ ಸುರೇಶ ಇವನೇನಾ ಎನ್ನಿಸಿತು. ನಮಗೆ ನೋಡಿದರೆ ಆನೆ ಹೊಟ್ಟೆಗೆ ಆರುಕಾಸಿನ ಮಜ್ಜಿಗೆ ಎಂಬಂತಾಗಿತ್ತು. ನಮಗೂ ಸಹ ಸ್ವಲ್ಪ

ಹಾಕಿಸಿಕೊಳ್ಳಿ ಮಾವನವರೇ ಅಂತಾ ಹೇಳಿದಾಗ ಅಂತಹ ಆರೇಳು ಬಟ್ಟಲಾದರೂ ಕತ್ತರಿಸುವಷ್ಟು ಹಸಿವಾಗಿತ್ತು. ಹಾಕಮ್ಮ ಎಂದಾಗ ಇಬ್ಬರಿಗೂ ಒಂದೊಂದು ಸ್ಪೂನು ಹಾಕಿ ಒಳಗೆ ಹೋದರು. ನಾನು, ರಘು ಮುಖ ಮುಖ ನೋಡುತ್ತ ತಿಂದು ಎದ್ದು ಕೈತೊಳೆದು ಆಸ್ಪತ್ರೆಗೆ ಹೊರಡುತ್ತೇವೆ ಎಂದು ಹೇಳಿ ಹೊರಟೆವು. ಮಧ್ಯಾಹ್ನ ಊಟಕ್ಕೆ ಇಲ್ಲಿಗೇ ಬನ್ನಿ ಎಂದಾಗ, ಸಧ್ಯ ಈ ಅರೆಹೊಟ್ಟೆ ತಿನ್ನಲು ನೂರು ರೂಪಾಯಿ ಆಟೋಚಾರ್ಜ್ ಕೊಟ್ಟು ಬರುವ ಬದಲು ಅದೇ ನೂರು ರೂಪಾಯಿಗೆ ಯಾವುದಾದರೂ ಹೋಟೆಲ್ಲಿನಲ್ಲಿ ಹೊಟ್ಟೆ ತುಂಬ ಇಬ್ಬರೂ ಊಟಮಾಡಬಹುದು ಎಂದು ಏನೋ ಒಂದು ಸಬೂಬು ಹೇಳಿ ಹೊರಟೆವು.

ಸೀದಾ ಹೊಟೆಲ್ಲಿಗೆ ಹೋಗಿ ಎರಡೆರಡು ಮಸಾಲೆದೋಸೆ ತಿಂದು, ಸ್ಟ್ರಾಂಗಾದ ಫಿಲ್ಟರ್ ಕಾಫಿ ಕುಡಿದ ಮೇಲೆಯೇ ಹೊಟ್ಟೆ ತಣ್ಣಗಾಗಿದ್ದು. ಇನ್ನು ಮೇಲೆ ಅವರ ಮನೆಗೆ ಊಟಕ್ಕೆ ಆಹ್ವಾನಿಸಿದರೆ ಮನೆಯಲ್ಲೇ ಪಟ್ಟಾಗಿ ಹೊಡೆದು ಶಾಸ್ತ್ರಕ್ಕೆ ಒಂದು ತುತ್ತು ತಿನ್ನಲು ಹೋಗಬೇಕು ಅಂದುಕೊಂಡಿದ್ದೇವೆ ಎಂದರು.

ನನಗೆ ನಂಬಲಾಗಲಿಲ್ಲ 'ಹೋಗಿ ಚಿಕ್ಕಪ್ಪ, ಇದು ನಡೆದು ಹತ್ತು ವರ್ಷವಾದರೂ ಆಗಿರಬೇಕು, ಈಗ ಬದಲಾಗಿರಬಹುದು' ಎಂದೆ.

'ಹೋಗಿ ನೋಡಿ, ನಿಮ್ಮ ಪುಣ್ಯ' ಎಂದರು.

ನನಗಂತೂ ಚಿಕ್ಕಪ್ಪನ ಮಾತು ನಂಬುವುದಕ್ಕೇ ಕಷ್ಟವಾಯಿತು. ಸುರೇಶ್ ತನ್ನ ಕುಟುಂಬದೊಡನೆ ಬೆಂಗಳೂರಿನಿಂದ ವರ್ಷಕ್ಕೆ ಒಂದೆರಡು ಬಾರಿಯಾದರೂ ಚಿತ್ರದುರ್ಗದಲ್ಲಿರುವ ತಮ್ಮ ಅಣ್ಣನ ಮನೆಗೆ ಬರುತ್ತಿದ್ದರು. ಹಾಗೆ ಬಂದಾಗ ಮರೆಯದೆ ನಮ್ಮ ಯಜಮಾನರಿಗೆ ಫೋನು ಮಾಡಿ ತಿಳಿಸುತ್ತಿದ್ದರು. ಒಂದು ಹೊತ್ತಾದರೂ ನಮ್ಮ ಮನೆಯಲ್ಲಿ ಊಟಕ್ಕೋ, ತಿಂಡಿಗೋ ಆಹ್ವಾನಿಸಿಯೇ ಇರುತ್ತಿದ್ದೆವು. ನಮ್ಮ ಯಜಮಾನರು ಹಾಗೂ ಸುರೇಶ್ ಚಿಕ್ಕಂದಿನಿಂದಲೂ ಗೆಳೆಯರಿದ್ದುದರಿಂದ ಇಬ್ಬರ ನಡುವೆ ತುಂಬಾ ದೋಸ್ತಿ ಇತ್ತು, ಜೊತೆಗೆ ಸಂಬಂಧಿಕರೂ ಆಗಿದ್ದರಿಂದ ಸಲಿಗೆ ಹೆಚ್ಚಿತ್ತು. ಮದುವೆಯ ನಂತರ ಅವರು ಬೆಂಗಳೂರಿನಲ್ಲೇ ಸೆಟಲ್ ಆದರು, ನಾವು ಚಿತ್ರದುರ್ಗದಲ್ಲಿ. ಊಟಕ್ಕೆ ಬಂದಾಗಲೆಲ್ಲ ಅದೆಷ್ಟು ಪ್ರೀತಿಯಿಂದ 'ನಿಮ್ಮ ಕೈರುಚಿಯೇ ರುಚಿ ಅತ್ತಿಗೆ, ಇನ್ನೂ ಸ್ವಲ್ಪ ಬಡಿಸಿ, ಅಂತಾ ಮೂರ್ನಾಲ್ಕು ಚಪಾತಿ, ಅನ್ನ-ಸಾರು, ಅನ್ನ-ಮೊಸರು, ಸ್ವೀಟು ಎಲ್ಲ ಅಚ್ಚುಕಟ್ಟಾಗಿ ತಿಂದು ಕೈತೊಳೆಯುತ್ತಿದ್ದರು. ಅವರ ಹೆಂಡತಿ ಮಕ್ಕಳೂ ಸಹ ಯಾವುದೇ ಸಂಕೋಚಪಡದೆ ನಮ್ಮ ಮನೆ ಸದಸ್ಯರ ಹಾಗೆ ಕೇಳಿ ಬಡಿಸಿಕೊಂಡು ಊಟಮಾಡುತ್ತಿದ್ದರು. ಆ ಸಲಿಗೆ ನಮಗೆ ತುಂಬಾ ಹಿಡಿಸುತ್ತಿತ್ತು. ಕೆಲವೊಮ್ಮೆ ಇಷ್ಟಪಟ್ಟ ಕರ್ಜಿಕಾಯನ್ನೋ, ಚಕ್ಕುಲಿಯನ್ನೋ ಅವರಿಗೆ ಸ್ವಲ್ಪ ಕವರಿನಲ್ಲಿ ಹಾಕಿ ಕಳಿಸುತ್ತಿದ್ದೆವು. ಪ್ರತೀಸಲ ಹೊರಡುವಾಗಲೂ, ಬರೀ ನಾವೇ ನಿಮ್ಮೂರಿಗೆ ಬರುವುದು ಆಯಿತು, ನಿಮ್ಮ ಮನೆಯಲ್ಲಿ ಪದೇ ಪದೇ ಊಟಕ್ಕೆ ಬರಲು ನಾಚಿಕೆಯಾಗುತ್ತದೆ. ಈಸಲ ರಜಕ್ಕಾದರೂ ನೀವು ಬೆಂಗಳೂರಿಗೆ ಬರಲೇಬೇಕು, ನಮ್ಮ ಮನೆಯಲ್ಲಿ ಉಳಿಯಲೇ ಬೇಕು ಎಂದು ತುಂಬಾ ಪ್ರೀತಿಯಿಂದ ಒತ್ತಾಯಿಸುತ್ತಿದ್ದರು.

ಈಸಲ ಬೆಂಗಳೂರಿನಲ್ಲಿ ಒಂದು ಮದುವೆಯ ಆಮಂತ್ರಣವಿತ್ತು.

ಸುರೇಶನ ಕುಟುಂಬದವರಿಗೂ ಆಹ್ವಾನವಿದ್ದುದ್ದರಿಂದ ಅವರ ಮನೆಯಲ್ಲೇ ಉಳಿದುಕೊಂಡು ಎಲ್ಲರೂ ಸೇರಿ ಮದುವೆಗೆ ಹೋಗಬಹುದೆಂದು ಯೋಚಿಸಿದೆವು. ಅವರು ಜಿಪುಣರೆಂಬ ಚಿಕ್ಕಪ್ಪನ ಮಾತು ಕೇಳಿ ಅದೇನು ಸುಳ್ಳೋ, ನಿಜವೋ ಪರೀಕ್ಷಿಸಲೇಬೇಕೆಂಬ ಕುತೂಹಲ ಗರಿಗೆದರಿತು. ಫೋನು ಮಾಡಿ ಬರುವ ದಿನ, ಟ್ರೈನಿನ ಸಮಯ ಎಲ್ಲಾ ತಿಳಿಸಿದೆವು. ಅವರು ತುಂಬಾ ಸಂತೋಷದಿಂದ ಆಯಿತು ಬನ್ನಿ, ಈಗಲಾದರೂ ನಮ್ಮ ಮನೆಗೆ ಬರುವ ಮಹೂರ್ತ ಕೂಡಿ ಬಂತಲ್ಲಾ, ಸ್ಟೇಷನ್ನಿಗೆ ಕಾರು ತಂದಿರುತ್ತೇನೆ ಎಂದರು. ಅದನ್ನು ಚಿಕ್ಕಪ್ಪನಿಗೆ ಹೇಳಿದಾಗ ಸುಮ್ಮನೆ ನಸು ನಕ್ಕರು.

ಹೇಳಿದ ದಿನ ಬೆಂಗಳೂರನ್ನು ಸಂಜೆ ಐದು ಗಂಟೆಗೆ ತಲುಪಿದೆವು. ನಮ್ಮ ಯಜಮಾನರು ಫೋನು ಮಾಡಿ 'ಬೆಂಗಳೂರು ತಲುಪಿದ್ದೇವೋ ಸುರೇಶ, ನಿನ್ನ ಕಾರು ಎಲ್ಲಿದೆ, ಯಾವ ಕಡೆ ಬರಬೇಕು ಎಂದು ಕೇಳಿದರು.

'ಅಯ್ಯೋ ಇವತ್ತು ತುಂಬಾ ಕೆಲಸ ಇತ್ತು ಕಣೋ, ಹಾಗಾಗಿ ಬರಲಾಗಲಿಲ್ಲ. ಅಲ್ಲೇ ಹತ್ತಿರ ಬಸ್‌ಸ್ಟ್ಯಾಂಡ್ ಇದೆ 320ರ ಬಸ್ ಹತ್ತಿಬಿಡಿ, ಇಲ್ಲವಾದರೆ ಕ್ಯಾಬ್ ಬುಕ್ ಮಾಡಿ ಅಥವಾ ಆಟೋದಲ್ಲಿ ಬಂದುಬಿಡಿ, ಹದಿನೈದು ಇಪ್ಪತ್ತು ನಿಮಿಷದಲ್ಲಿ ಆರಾಮವಾಗಿ ಬರಬಹುದು ಎಂದರು.

ನಮ್ಮ ಯಜಮಾನರು ಗೆಳೆಯನ ಬಿಟ್ಟುಕೊಡದೆ, ನಗುತ್ತಿದ್ದ ನನ್ನನ್ನು ನೋಡಿ 'ಏನೋ ಕೆಲಸ ಇರಬೇಕು ಬಿಡೆ, ನಮ್ಮ ಸುರೇಶ ಅಂಥವನಲ್ಲ' ಎಂದು ಅವರ ಪರ ವಹಿಸಿದರು. ಕ್ಯಾಬ್‌ಗೆ ಬುಕ್ ಮಾಡಿ 300ರೂ ತೆತ್ತು ಅವರ ಮನೆ ತಲುಪುವ ಹೊತ್ತಿಗೆ ಆರು ಗಂಟೆಯಾಗಿತ್ತು. ಕೈಕಾಲು ಮುಖ ತೊಳೆದು ಕುಳಿತೆವು.

ಅವರ ಅರಮನೆಯಂತಹ ಮನೆಯ ಅಂದ ಚಂದ ನೋಡುತ್ತಾ ಕುಳಿತಾಗ 'ಮಂಡಕ್ಕಿ ತಿನ್ನಿ' ಎಂದು ಅವರ ಹೆಂಡತಿ ಒಂದು ಸಣ್ಣ ಅಂಗೈಯಷ್ಟು ಸಣ್ಣ ತಟ್ಟೆಗಳಲ್ಲಿ ಹುರಿದ ಮಂಡಕ್ಕಿ, ಅದರ ಮೇಲೆ ಹಸಿ ಈರುಳ್ಳಿ, ಟೊಮೆಟೋ, ಕೊತಂಬರಿ ಹಾಕಿ ತಂದಿಟ್ಟಾಗ ನಮ್ಮ ಮನೆಯವರ ಮುಖ ನೋಡಿದೆ.

'ಇನ್ನೇನು ಇನ್ನೊಂದು ಗಂಟೆಗೆ ಊಟದ ಟೈಮೇ ಆಯಿತು, ಇದನ್ನೆಲ್ಲಾ ಯಾಕೆ ಹಚ್ಚಿಕೊಳ್ಳಲು ಹೋದಿರಿ' ಎಂದು ಹೇಳುತ್ತ ನನ್ನ ಕಣ್ತಪ್ಪಿಸಿದರು. ನನ್ನ ಮಕ್ಕಳು ಆಡುವ ಮೂಡಿನಲ್ಲಿದ್ದುದ್ದರಿಂದ ಯಾಕೋ ಇನ್ನು ಸ್ವಲ್ಪ ಅಂತ ಕೇಳಲಿಲ್ಲ, ಕೊಟ್ಟಷ್ಟನ್ನು ತಿಂದು ಅವರ ಮಕ್ಕಳೊಡನೆ ಆಡತೊಡಗಿದರು. ಇಲ್ಲದಿದ್ದರೆ ಒಂದು ಬೋಗಾಣಿ ಮಂಡಕ್ಕಿ ಒಂದೇ ಸಲ ಮುಗಿಸುವ ಕುಲದವರು ಅವರು. ನಾವುಗಳು ಇರುವ ನಾಲ್ಕು ಗುಕ್ಕನ್ನು ತಿಂದು, ಚಿಕ್ಕ ನಾಜೂಕು ಕಪ್ ಸಾಸರ್ ಲೋಟದಲ್ಲಿ ತಂದಿಟ್ಟ ಅರ್ಧ ಕಪ್ ಕಾಫಿ ಹೀರಿದೆವು.

ರಾತ್ರಿ ಊಟದ ತಯಾರಿಗೆ ಏನಾದರೂ ಸಹಾಯ ಮಾಡಲೇ? ಎಂದು ಆಕೆಗೆ ಕೇಳಿದೆ.

'ಅದೆಲ್ಲಾ ಏನೂ ಬೇಡ, ನೀವು ಮಾತನಾಡುತ್ತಾ ಕುಳಿತುಕೊಳ್ಳಿ, ಒಂದು ಗಂಟೆಯಲ್ಲಿ ಅಡುಗೆ ಮಾಡಿ ಮುಗಿಸುತ್ತೇನೆ' ಎಂದು ಅಡುಗೆ ಮನೆಗೆ ಹೊರಟ ಆಕೆಯನ್ನು ಹಿಂಬಾಲಿಸಿದೆ. ನನಗೊಂದು ಸ್ಟೂಲು ಕೊಟ್ಟು 'ಕುಳಿತುಕೊಳ್ಳಿ' ಎಂದಳು.

ಆಧುನಿಕ, ಸುಸಜ್ಜಿತವಾದ ವಿಶಾಲವಾದ ಅಡುಗೆ ಮನೆಯನ್ನು ನೋಡಿ ತುಂಬಾ ಮೆಚ್ಚುಗೆಯಿಂದ 'ಚೆನ್ನಾಗಿ ಕಟ್ಟಿಸಿದ್ದೀರಾ' ಎಂದೆ.

'ಥ್ಯಾಂಕ್ಸ್, ಅಡುಗೆ ಮನೆ ಪ್ಲಾನೆಲ್ಲಾ ನನ್ನದೇ' ಎಂದಳು.

ಚಪಾತಿ ಹಿಟ್ಟನ್ನು ಬೋಗಾಣಿಗೆ ಹಾಕುವಾಗ, 'ಕೊಡಿ ನಾನು ಹಿಟ್ಟು ಕಲೆಸುತ್ತೇನೆ' ಎಂದು ಬಲವಂತವಾಗಿ ಆಕೆಯಿಂದ ತೆಗೆದುಕೊಂಡೆ.

ಅದರಲ್ಲಿ ಎಂಟು ಹತ್ತು ಚಪಾತಿಗೆ ಸಾಕಾಗುವಷ್ಟು ಹಿಟ್ಟು ಇತ್ತು. ನನಗೆ ಅನುಮಾನವಾಯಿತು. ನಾವು ನಾಲ್ಕು ಜನ, ಹಾಗೂ ಅವರು ನಾಲ್ಕು ಜನ ಸೇರಿ ಎಂಟು ಜನಕ್ಕೆ ಈ ಹಿಟ್ಟು ಸಾಲುವುದೇ ಎಂದು ಯೋಚಿಸಿ, ಕೇಳುವುದು ಹೇಗೆಂದು ತಿಳಿಯದೆ 'ಹಿಟ್ಟು ಕಲೆಸಲೇ' ಎಂದೆ.

'ಹಾಂ, ಕಲೆಸಿ' ಎಂದಳು.

ನನ್ನ ಪಾಡಿಗೆ ನಾನು ಹಿಟ್ಟು ಕಲೆಸಿ ಆಕೆಯ ಕೆಲಸ ನೋಡುತ್ತಾ ಕುಳಿತಿದ್ದೆ. ಒಳ್ಳೆ ಜಿಂಕೆ ಮರಿಯ ಹಾಗೆ ಆಕೆ ಚಕಚಕನೆ ಕಾಲು ಕೇಜಿಯಷ್ಟು ಬೀನ್ಸ ಕತ್ತರಿಸಿ ಪಲ್ಯಕ್ಕೆ ಒಗ್ಗರಣೆ ಹಾಕಿದಳು. ನಮ್ಮ ಮನೆಯಲ್ಲಿ ನಾಲ್ಕು ಜನಕ್ಕೆ ಅರ್ಧ ಕೆಜಿ ಮಾಡುತ್ತಿದ್ದೆ, ಇಷ್ಟನ್ನು ಹೇಗೆ ಅಷ್ಟು ಜನಕ್ಕೆ ಬಡಿಸಬಹುದು ಸಾಲಬಹುದು ಎಂದು ಯೋಚಿಸತೊಡಗಿದೆ. ಹಾಗೇ ಒಂದ್ನಾಲ್ಕು ಬೀನ್ಸ್, ಎರಡು ಕ್ಯಾರಟ್, ಸ್ವಲ್ಪ ಬಟಾಣಿ, ಹೂಕೋಸು ಒಗ್ಗರಣೆಗೆ ಹಾಕಿ ಒಂದು ಪಾವಿನಷ್ಟು ಪಲಾವು ಮಾಡಿದಳು.

ಚಪಾತಿಗಳು ನಮ್ಮ ಪೂರಿಗಿಂತ ಸ್ವಲ್ಪ ದೊಡ್ಡವಿದ್ದವು ಅಷ್ಟೆ. ಸರಿಯಾಗಿ ಹತ್ತು ಚಪಾತಿಗಳನ್ನು ಉದ್ದಿ ಒಂದರ ಮೇಲೊಂದು ಇಟ್ಟು ಒಂದು ಚಾಕು ತೆಗೆದುಕೊಂಡು ಪ್ಲಸ್ ಆಕಾರದಲ್ಲಿ ನಾಲ್ಕು ಭಾಗ ಆಗುವಂತೆ ಕತ್ತರಿಸಿದಳು. ಒಂದೊಂದು ತಟ್ಟೆಯಲ್ಲೂ ಎರಡೆರಡು ತುಂಡುಗಳನ್ನು(ಅಂದರೆ ಅರ್ಧ ಚಪಾತಿ) ಹಾಕಿ ಜೊತೆಗೆ ಒಂದು ಸ್ಪೂನಿನಷ್ಟು ಪಲ್ಯ, ಒಂದು ಸ್ಪೂನು ಕೋಸಂಬರಿ, ಒಂದು ಸ್ಪೂನು ಚಟ್ನಿ ಎಲ್ಲರ ತಟ್ಟೆಗೆ ಬಡಿಸಿ ಊಟಕ್ಕೆ ಕರೆದಳು. ಸುರೇಶ ಹಾಗೂ ಅವರ ಎರಡು ಮಕ್ಕಳು, ನಮ್ಮವರು ಹಾಗೂ ನಮ್ಮ ಎರಡು ಮಕ್ಕಳು ಒಟ್ಟು ಆರು ಜನ ಡೈನಿಂಗ್ ಟೇಬಲ್ಲಿಗೆ ಕುಳಿತರು.

ಬಡಿಸಿದ್ದನ್ನು ನನ್ನ ಮಕ್ಕಳು ಚಕಚಕನೆ ತಿಂದು 'ಆಂಟೀ ಇನ್ನೊಂದು ಚಪಾತಿ' ಎಂದು ಕೂಗಿದರು. ಆಕೆ ಕಾಲು ಭಾಗದ ತುಂಡುಗಳನ್ನು ಇಟ್ಟುಕೊಂಡು ಒಂದೊಂಡು ತುಂಡು ಹಾಕಿ ಮತ್ತೆ ಸೈಡ್ಸ್‌ಗಳನ್ನು ಒಂದೊಂದು ಸ್ಪೂನು ಹಾಕಿದಳು. ಮತ್ತೊಮ್ಮೆ ಚಪಾತಿ ಅಂತಾ ಕೂಗಿದವು. ಆಕೆ ಮತ್ತೆ ಒಂದೊಂದು ತುಂಡು ಹಾಕಿ ಬಂದಳು. ಎಲ್ಲಾ ಸೇರಿದರೂ ಒಂದು ಪೂರ್ಣ ಚಪಾತಿ ತಿಂದಂತಾಯಿತು. ಮೂರನೆಯ ಬಾರಿಗೆ ಅವಕ್ಕೆ ಕೇಳಲು ಏಕೋ ಸಂಕೋಚಪಟ್ಟುಕೊಂಡವು. ನನಗಂತೂ ಒಳಗೊಳಗೆ ನಗು ಉಕ್ಕಿ ಉಕ್ಕಿ ಬರುತ್ತಿತ್ತು. ನಮ್ಮ ಯಜಮಾನರು ಪಾಪ! ಅವರಿಗೂ ಮತ್ತೊಮ್ಮೆ, ಮಗದೊಮ್ಮೆ ಒಂದೊಂದೇ ಕಾಲು ಭಾಗ ಚಪಾತಿ ಎಷ್ಟು ಸಲ ಕೇಳುವುದು ಎಂದು ಸುಮ್ಮನಾಗಿಬಿಟ್ಟರು.

ಇನ್ನು ಸಣ್ಣ ಬಟ್ಟಲಿನಲ್ಲಿ ಪಲಾವು ಹಾಕಿಕೊಂಡು, ಚಿಕ್ಕ ಸ್ಪೂನು

ಹಿಡಿದು(ಸೌಟು ಎನ್ನುವ ಪದ ಅವರ ಮನೆಯಲ್ಲಿ ಉಪಯೋಗಿಸಲು ಸಾಧ್ಯವೇ ಇರಲಿಲ್ಲ ಬಿಡಿ) ಬಡಿಸಲು ಹೊರಟಳು. ಎಲ್ಲರಿಗೂ ಎರಡೆರಡು ಸ್ಪೂನು ಹಾಕಿ ಬಂದಳು. ಮತ್ತೆ 'ಇನ್ನೂ ಸ್ವಲ್ಪ ಪಲಾವ್' ಅಂತಾ ನನ್ನ ಮಕ್ಕಳು ಕೂಗಿದವು. ನನಗೆ ಆಶ್ಚರ್ಯ ಏನೆಂದರೆ ಸುರೇಶ್ ಹಾಗೂ ಅವರ ಮಕ್ಕಳು 'ಇನ್ನು ಸ್ವಲ್ಪ ಬಡಿಸು' ಅಂತಾ ಕೇಳುತ್ತಲೇ ಇರಲಿಲ್ಲ.

ನನ್ನ ಮಕ್ಕಳಿಗೆ ಅದೇನು ಪಲಾವು ರುಚಿ ಸಿಕ್ಕಿತ್ತೋ, 'ಇನ್ನೂ ಸ್ವಲ್ಪ, ಇನ್ನೂ ಸ್ವಲ್ಪ' ಅಂತಾ ಮೂರ್‍ನಾಲ್ಕು ಬಾರಿ ಹಾಕಿಸಿಕೊಂಡವು. ಹಾಗಾಗಿ ನಮ್ಮ ಯಜಮಾನರಿಗೂ ಅರ್ಧ ಹೊಟ್ಟೆಯಾದರೂ ತುಂಬಿರಬಹುದು ಎಂದು ಸಮಾಧಾನವಾಯಿತು.

ಇನ್ನು ಕೊನೆಗೆ ನಾನೂ ಆಕೆ ಊಟಕ್ಕೆ ಕುಳಿತುಕೊಂಡೆವು. ನಮ್ಮಿಬ್ಬರ ತಟ್ಟೆಗೂ ಎರಡೆರಡು ಚಪಾತಿ ತುಂಡು ಬಡಿಸಿ, ಚೂರು ಚೂರು ಪಲ್ಯ ಹಾಕಿದಳು. ಪಲಾವ್ ಅಂತೂ ಕುಕ್ಕರಿನ ತಳಭಾಗಕ್ಕೆ ಹತ್ತಿತ್ತು. ಅದನ್ನು ಕೆರೆದು ಕೆರೆದು ಬಡಿಸುವಾಗ ಮಾತ್ರ ಏಕೋ ಅವಳ ಮುಖ ಸಪ್ಪಗಾಯಿತು.

'ಸ್ವಲ್ಪ ಅನ್ನಕ್ಕೆ ಇಡಲೇ' ಎಂದಳು.

'ಇರಲಿ ಬಿಡಿ ಇದ್ದುದ್ದರಲ್ಲೇ ಅಡ್ಜಸ್ಟ್ ಮಾಡಿಕೊಳ್ಳೋಣ' ಎಂದಾಗ ಆಕೆ ಮರುಮಾತಾಡಲಿಲ್ಲ.

ರಾತ್ರಿ ಎಲ್ಲರೂ ಮಲಗಿದ ಮೇಲೆ ನಮ್ಮೆಜಮಾನರು ಮಾತು ತೆಗೆದರು. 'ನಿಮ್ಮ ಚಿಕ್ಕಪ್ಪ ಹೇಳಿದ್ದು ಸರಿಯಾಗಿದೆ ಕಣೆ, ನಮ್ಮ ಸುರೇಶನ ಹೆಂಡತಿ ಹೀಗೆ ಎಂದು ಗೊತ್ತಿರಲಿಲ್ಲ, ಪಾಪ ಸುರೇಶ ಅದಕ್ಕೇ ಊರಿಗೆ ಬಂದಾಗ ಎಲ್ಲರ ಮನೆಯಲ್ಲಿ ಸರಿಯಾಗಿ ಕವಳ ಕತ್ತರಿಸುತ್ತಾನೆ, ಸಧ್ಯಕ್ಕೆ ನನಗಂತೂ ಹೊಟ್ಟೆ ತುಂಬಾ ಹಸಿಯುತ್ತಿದೆ' ಎಂದರು.

ಮುಂದಾಲೋಚನೆಯಿಂದ ನಾನು ಕಟ್ಟಿಕೊಂಡು ಬಂದಿದ್ದ ಬೇಸನ್ ಲಾಡು ಹಾಗೂ ಚೂಡಾ ಜೊತೆಗೆ ತಂದಿದ್ದ ಹಣ್ಣುಗಳನ್ನು ತಿನ್ನಲು ಕೊಟ್ಟೆ. ಮರುಮಾತಾಡದೆ ತಿಂದು ಮುಗಿಸಿದರು.

ಮರುದಿನ ಬೆಳಿಗ್ಗೆ ಬೇಗ ಎದ್ದು ಎಲ್ಲರೂ ಸ್ನಾನ ಮುಗಿಸಿ ರೆಡಿಯಾದೆವು. ಸುರೇಶನ ಹೆಂಡತಿ 'ಟಿಫಿನ್ ಮಾಡುತ್ತೇನೆ' ಎಂದಾಗ ನಮ್ಮ ಯಜಮಾನರು 'ಅಯ್ಯೋ, ಬೇಡಮ್ಮ, ಮತ್ಯಾಕೆ ತೊಂದರೆ ತೆಗೆದುಕೊಳ್ಳುತ್ತೀರಾ, ಎಲ್ಲರೂ ಮದುವೆ ಮನೆಯಲ್ಲೇ ಮಾಡಿದರಾಯಿತು' ಎಂದಾಗ ನಾನಂತೂ ಮುಸಿ ಮುಸಿ ನಗುತ್ತಿದ್ದೆ. ಎಲ್ಲರೂ ಸೀದ ಮದುವೆ ಮಂಟಪಕ್ಕೇ ಹೋಗಿ ಹೊಟ್ಟೆ ತುಂಬಾ ಹಾಕಿಸಿಕೊಂಡು ಪಟ್ಟಾಗಿ ಹೊಡೆದದ್ದಾಯಿತು.

'ಮತ್ತೊಮ್ಮೆ ಬೆಂಗಳೂರಿಗೆ ಬಂದರೆ ಯಾವುದಾದರೂ ಲಾಡ್ಜ್‌ನಲ್ಲಿ ಉಳಿದುಕೊಳ್ಳೋಣ' ಎಂದು ಯಜಮಾನರು ಬಸ್ಸಿನಲ್ಲಿ ಬರುವಾಗ ಕಿವಿಯಲ್ಲಿ ಉಸಿರಿದರು. ಚಿಕ್ಕಪ್ಪನ ಮಾತುಗಳು ಕಿವಿಯಲ್ಲಿ ರಿಂಗಣಿಸತೊಡಗಿದವು. ಅದಕ್ಕೇ ಹಿರಿಯರು ಹೇಳಿದ್ದಾರೇನೋ, 'ಬಡವರ ಮನೆ ಊಟ ಚಂದ, ಶ್ರೀಮಂತರ ಮನೆ ನೋಟ ಚಂದ' ಎಂದು ಮನ ಆಲೋಚಿಸುತ್ತಾ ನಿದ್ದೆಗೆ ಜಾರಿತು.

RAMAIAH
Indic Specialty Ayurveda

RESTORATION HOSPITAL

## Ramaiah Ayurveda

- General Medicine
- Pain Clinic
- Dermatology
- Ophthalmology
- Gynaecology & Obstetrics
- Paediatrics
- Geriatrics
- Preventive Medicine (Wellness, Well - Being)
- Yoga
- Ayurvedic Para-Surgical Procedures

**Proud to Announce**
**NABH Accrediation**



Under the Leadership of
**Prof. Dr. G.G. Gangadharan**

## World Renowned Doctors



First Franchise
Bannerghatta



First Joint Venture
Penang, Malaysia



First Branch
Yelahanka New Town

24/7 Emergency Healthcare
Attached to Memorial Hospital
Spacious in Patient Facility

Free Telephonic Consultation
**080 22183456, 80 99 95 95 95**

New BEL Road, M S Ramaiah Nagar, Bengaluru - 560 054, www.msricaim.com

# ಭಾರತದ ಮೊಟ್ಟಮೊದಲ ಸಾರ್ವಜನಿಕ ಔಷಧ ಪ್ರಯೋಗಾಲಯ ಸಂಸ್ಥೆ



















- ನೀವು ಕುಡಿಯುವ ನೀರು ಶುದ್ಧವೇ?
- ನಿಮ್ಮ ಮಕ್ಕಳ ತಿನಿಸುಗಳಲ್ಲಿ ಹಾನಿಕಾರಕ ಅಂಶಗಳಿವೆಯೇ?
- ನಿಮ್ಮ ಮನೆಯ ಅಂಗಳದಲ್ಲಿ ಅಥವಾ ಹೊಲದ ಮಣ್ಣಿನಲ್ಲಿ ವಿಷಕಾರಿ ಅಂಶವಿದೆಯೇ?
- ನೀವು ಸೇವಿಸುವ ಗಿಡಮೂಲಿಕೆ ಔಷಧಿಗಳಲ್ಲಿ ಹಾನಿಕಾರಕ ಅಂಶವಿದೆಯೇ?
- ಹಾಳಾದ ಅಥವಾ ಕಲಬೆರಕೆ ತಿನಿಸುಗಳ ಭಯವೇ?
- ಮೂತ್ರ, ರಕ್ತದಲ್ಲಿ ವಿಷಕಾರಿ ಅಥವಾ ಖನಿಜಾಂಶಗಳ ಪರೀಕ್ಷೆ ಮಾಡಿಸಬೇಕೆ?

ಈ ಎಲ್ಲಾ ಸಂದೇಹಗಳಿಗೆ ಶೀಘ್ರದಲ್ಲಿ ಉತ್ತರ ಪಡೆಯಲು ಹಾಗೂ ನೀವು ಆರೋಗ್ಯಕರ ಪದಾರ್ಥಗಳನ್ನು ಸೇವಿಸುವಂತಾಗಲು ನೀರು, ಆಹಾರ, ಮಣ್ಣು ಹಾಗೂ ಔಷಧಿಗಳನ್ನು ಪರೀಕ್ಷೆ ಮಾಡಿಸಿ.

RAMAIAH

## RAMAIAH ADVANCED TESTING LAB
## RAMAIAH ADVANCED TRAINING CENTRE

**CERTIFICATE TRAINING PROGRAMS * PROJECTS * P.G. DIPLOMA ON MODERN METHODS OF ANALYSIS FOR FOOD / DRUG / ENVIRONMENT FOR GRADUATES & POST-GRADUATES IN SCIENCE, ENGG, PHARMACY, BIO-CHEMISTRY, BIO-TECHNOLOGY**

Opp. Ramaiah Hospital, 80 Ft Road, New BEL Road,Bengaluru – 560 054
Call 9844163329; 080 4091 8017,
E – mail: msrdtl@gmail.com or just drop in!

**- ದಂನಆ**

- ✓ ನೀವು ತೆರಿಗೆ ಕಟ್ಟುವುದಿಲ್ಲ, ಅವರು ಕಟ್ಟಿಸಿಕೊಳ್ಳುತ್ತಾರೆ.
- ✓ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ಅಥ್ಲೀಟ್‌ಗಳಿಗೆ ಅದು ನಾಲ್ಕು ವರ್ಷಕ್ಕೊಮ್ಮೆ ನಡೆಯುವ ಕೂಟವಲ್ಲ, ಪ್ರತಿದಿನವೂ ನಡೆಯುವಂತಹದ್ದು.
- ✓ ನಿಮಗೆ ಹೃದಯವಿದ್ದರೆ ಯಾರಿಗೆ ಬೇಕಾದರೂ ಸಹಾಯ ಮಾಡುವಿರಿ.
- ✓ ಲಾಯಲ್ಟಿ ಈಸ್ ಮೋರ್ ಇಂಪಾರ್ಟೆಂಟ್ ದ್ಯಾನ್ ರಾಯಲ್ಟಿ.
- ✓ ದೊಡ್ಡ ಹುದ್ದೆಯಲ್ಲಿರುವ ಅನೇಕರು ಸಣ್ಣ ಕೆಲಸ ಮಾಡುತ್ತಾರೆ.
- ✓ ಜಾಣ್ಮೆ ಇದ್ದರೆ ಸಾಲದು ತಾಳ್ಮೆ ಇರಬೇಕು.
- ✓ ಆಪರ್ಚುನಿಟಿ ಡ್ಯಾನ್ಸ್‌ಸ್ ವಿತ್ ದೋಸ್ ಹು ಆರ್ ಆಲ್‌ರೆಡಿ ಆನ್ ದಿ ಡ್ಯಾನ್ಸ್ ಫ್ಲೋರ್.
- ✓ ಗುಣವಾಚಕಗಳನ್ನೆಲ್ಲಾ ತೆಗೆದುಹಾಕಿ ಆಗ ನಿಮಗೆ ನೈಜ ಸಂಗತಿ ತಿಳಿಯುತ್ತದೆ.
- ✓ ಸದ್ದು ಮಾಡುವ ಗಾಲಿಗೆ ಮೊದಲು ಎಣ್ಣೆ ಸಿಗಬಹುದು ಆದರೆ ಮೊದಲು ತೆಗೆದು ಹಾಕುವುದು ಅದನ್ನೇ.
- ✓ ನಿಮ್ಮ ಹೆಂಡತಿಯ ತಪ್ಪುಗಳನ್ನು ಹುಡುಕಬೇಡಿ. ಆಕೆ ತಪ್ಪೇ ಮಾಡಬಲ್ಲದವಳಾಗಿದ್ದರೆ ನಿಮಗಿಂತ ಒಳ್ಳೆಯ ಗಂಡನನ್ನು ಹುಡುಕಿಕೊಳ್ಳುತ್ತಿದ್ದಳು.
- ✓ ಕಚ್ಚಲಾಗದಿದ್ದರೆ ಹಲ್ಲಿನ ಪ್ರದರ್ಶನ ಮಾಡಬೇಡಿ.
- ✓ ದಿ ಮೋರ್ ಐ ಲೈಕ್ ಮಿ ದಿ ಲೆಸ್ ಐ ವಾಂಟ್ ಟು ಪ್ರಿಟೆಂಡ್ ಟು ಬಿ ಅದರ್ ಪೀಪಲ್.
- ✓ ನಮಗೆ ನಾವೇ ಹೇಳಿಕೊಳ್ಳುವ ಸುಳ್ಳು ಅಪಾಯಕಾರಿ.
- ✓ ಷೇರು ಮಾರುಕಟ್ಟೆ ಪರಿಣಿತರು ಅಷ್ಟು ಪರಿಣಿತರಾಗಿದ್ದರೆ ಅವರು ಸಲಹೆಗಳನ್ನು ಬಿಕರಿ ಮಾಡುವ ಬದಲು ಷೇರುಗಳನ್ನ ಖರೀದಿಸುತ್ತಾ ಕೂಡುತ್ತಿರಲಿಲ್ಲವೆ?
- ✓ ಬ್ಯೂಟಿಫುಲ್ ಥಿಂಗ್ಸ್ ಆರ್ ನಾಟ್ ಆಲ್ವೇಸ್ ಗುಡ್. ಬಟ್ ಗುಡ್ ಥಿಂಗ್ಸ್ ಆರ್ ಆಲ್ವೇಸ್ ಬ್ಯೂಟಿಫುಲ್.
- ✓ ಅಡಿಗೆ ಮನೆ ಅತ್ಯಾಧುನಿಕವಾಗಿದ್ದರೆ ರುಚಿ ಚೆನ್ನಾಗಿರುತ್ತದೆ ಎಂದೇನಿಲ್ಲ.
- ✓ ಮೊದಲನೆ ಅವಕಾಶವನ್ನು ಕಳೆದುಕೊಳ್ಳಬೇಡಿ. ಏಕೆಂದರೆ ಎರಡನೆ ಅವಕಾಶ ಮೊದಲನೆಯದಕ್ಕಿಂತ ಕಠಿಣವಾಗಿರುತ್ತದೆ.
- ✓ ಪೋಲೀಸರ ಅಂಗೀಕಾರ ಇರುವ ಸ್ನೇಹಕ್ಕೆ ಮದುವೆ ಎನ್ನುತ್ತಾರೆ.
- ✓ ಶ್ರದ್ಧಾಂಜಲಿ: ಅವನು ಪ್ರಾಮಾಣಿಕ, ದಕ್ಷ, ನಂಬಿಕೆಗೆ ಅರ್ಹ, ವಿಶ್ವಾಸಿ, ಉತ್ತಮ ಕೆಲಸಗಾರ – ಎಲ್ಲವೂ ಸಹ, ಅವನು ನಿಜವಾಗಿಯೂ ನಿಧನವಾಗಿದ್ದರೆ.

# ಅಯ್ಯೋ, ಮರ್ತೆ ಹೋಗಿತ್ತು ರೀ........

- ವೈ. ಎನ್. ಗುಂಡೂರಾವ್

ಧಾರಾವಾಹಿ ದಮಯಂತಿ ಅನ್ನುವಷ್ಟರ ಮಟ್ಟಿಗೆ ದಮಯಂತಿ ಆ ವಠಾರದಲ್ಲಿ ಫೇಮಸ್ಸಾಗಿಬಿಟ್ಟಿದ್ದಳು. ವಠಾರದಲ್ಲಿದ್ದವರಲ್ಲಿ ಯಾರಾದರೂ ಒಂದು ನಾಲ್ಕು ದಿವಸ ಊರಿಗೆ ಹೋಗಿಯೋ, ಖಾಯಿಲೆ-ಕಸಾಲೆಯಾಗಿ ಮಲಗಿಯೋ ತಮ್ಮಿಷ್ಟದ ಧಾರಾವಾಹಿಯನ್ನು ನೋಡಿರದಿದ್ದರೆ ಅದಕ್ಕಾಗಿ ವ್ಯಥೆ ಪಡುತ್ತಿರಲಿಲ್ಲ. ಊರಿಂದ ಬಂದ ತಕ್ಷಣ ಅಥವಾ ಖಾಯಿಲೆಯಿಂದ ಎದ್ದ ತಕ್ಷಣ ಆಸ್ಪತ್ರೆಗೆ ಹೋಗುವುದಕ್ಕಿಂತ ಹೆಚ್ಚಾಗಿ ದಮಯಂತಿಯನ್ನು ನೋಡಲು ಬಂದು ಬಿಡುತ್ತಿದ್ದರು. ಹೀಗೆಂದಾಕ್ಷಣ ತಮ್ಮ ಸಮಸ್ಯೆ ಪರಿಹಾರವಾಯಿತೆಂದು ಹೇಳಿಕೊಳ್ಳಲೋ ಏನೋ ಎಂದು ನೀವೇನೂ ಚಿಂತಿಸಬೇಡಿ. ತಪ್ಪಿ ಹೋಗಿದ್ದ ನಾಲ್ಕಾರು ದಿವಸಗಳಲ್ಲಿ ನಡೆದಿರಬಹುದಾದ ಧಾರಾವಾಹಿಯ ಕಥೆಯನ್ನು ಅಪ್‌ಡೇಟ್ ಮಾಡಿಕೊಳ್ಳಲು.

ಹೀಗೆ ದಮಯಂತಿ ಆ ವಠಾರದ ಎಂತಹ ಸಂಪನ್ಮೂಲ ವ್ಯಕ್ತಿಯಾಗಿ ಬಿಟ್ಟಿದ್ದಳೆಂದರೆ, ಧಾರಾವಾಹಿಯಲ್ಲಿ ನಡೆದು ಹೋಗಿರುವ ಕಥೆಯನ್ನು ನೋಡಲು ಮಿಸ್ ಮಾಡಿಕೊಂಡವರಿಗೆ ಅಪ್‌ಡೇಟ್ ಮಾಡುತ್ತಿದ್ದುದಷ್ಟೇ ಅಲ್ಲ, ಯಾವ ಧಾರಾವಾಹಿ ತೆಗೆದುಕೊಂಡರೂ ಮುಂದೆ ಏನಾಗಬಹುದೆಂಬುದರ ಸುಳಿವು ಕೊಡುವಷ್ಟು ಚಾಣಾಕ್ಷಳಾಗಿದ್ದಳು. ಸದ್ಯ, ಯಾವ ನಿರ್ದೇಶಕರು ಅವಳನ್ನು ಕಾಂಟ್ಯಾಕ್ಟ್ ಮಾಡಿರಲಿಲ್ಲ.

ಈಗ ನಿಮಗೆ ಸಂದೇಹ ಬಂದಿರಬಹುದು ಒಂದು ಚಾನಲ್‌ನ ಧಾರಾವಾಹಿ ವೀಕ್ಷಿಸುತ್ತಿರುವಾಗ, ಇನ್ನೊಂದು ಚಾನಲ್‌ನಲ್ಲಿ ಮತ್ತೊಂದು ಧಾರಾವಾಹಿ ಪ್ರಸಾರವಾಗುತ್ತಿದ್ದು ಒಂದೇ ಕಾಲದಲ್ಲಿ ಎರಡು ಧಾರಾವಾಹಿಯನ್ನು ಹೇಗಪ್ಪಾ ನೋಡ್ತಾಳೆ ಅಂತ.

ಇಂತಹ ವಿಷಯದಲ್ಲಿ ದಮಯಂತಿ ಬಹು ಬುದ್ಧಿವಂತೆ, ಒಂದು ದಿನ ಈ ಧಾರಾವಾಹಿಯನ್ನು ನೋಡಿದರೆ ನಾಳೆಯ ದಿನ ಅದೇ ವೇಳೆಗೆ ಬೇರೆ ಧಾರಾವಾಹಿ. ಅದೇನು ನೀವ್ ಅಂದ್ಕೊಂಡ ಹಾಗೆ ಪ್ರತಿದಿನ ಮುಂದ್ ಮುಂದಕ್ಕೆ ಹೋಗುತ್ತಾ? ಎಂಟು ದಿವಸ ಯಾಕೆ, ಒಂದ್ ತಿಂಗ್ಳು ನೋಡ್ದಿದ್ರೂ ಅಲ್ಲೇ ಇರುತ್ವೆ! ಹೀಗೆ ಪ್ರತಿಯೊಂದನ್ನು ವೀಕ್ಷಿಸಿ ಅಗಾಧವಾದ ಬುದ್ಧಿವಂತಿಕೆಯನ್ನು ರೂಢಿಸಿಕೊಂಡಿದ್ಲು.

ಹೀಗಿರುವಾಗ ದಮಯಂತಿ ಮನೆಕೆಲ್ಸ ಹೇಗಪ್ಪಾ ಮಾಡ್ತಿದ್ಲು ಅಂತ ಇನ್ನೊಂದು ಸಣ್ಣ ಸಂಶಯ ನಿಮ್ಗೆ ಬಂದಿರಬೇಕಲ್ವಾ? ಕರೆಕ್ಟ್, ಅವಳೇನು ದಿಗಡ್‌ದಿಮ್ಮಿ ದಮಯಂತಿ ಅಂತಾ ತಿಳ್ಕೊಂಡ್ರಾ? ಹುಡುಗರಿಬ್ಬರು ಸ್ಕೂಲಿಗೆ ಹೋದನಂತರ, ಗಂಡನನ್ನು ಆಫೀಸಿಗೆ ಅಟ್ಟಿದನಂತರ ಟಿವಿ ಮುಂದೆ ಕುಳಿತುಬಿಟ್ಟರೆ ಕಾಲಿಂಗ್‌ಬೆಲ್ ಸದ್ದುಕೂಡಾ ಎಷ್ಟೋಸಾರಿ ಕೇಳಿಸ್ತಿರಲಿಲ್ಲ. ಇನ್ನೂ ಮನೇ ಕೆಲ್ಸ ಮಾಡೋದೆಲ್ಲಿಂದ ಬಂತು?

ಗಂಡ ಆಫೀಸಿಗೆ ಹೋಗುವಾಗ ವಾಟರ್‌ಬಿಲ್ ಕಟ್ಟುಬಿಟ್ಟು ಬಾ ಎಂದು ಟಿವಿ ಟೇಬಲ್ ಮೇಲೆ ಬಿಲ್ಲು, ಹಣ ಇಟ್ಟುಹೋಗುವ. ಸಂಜೆ ಬಂದಾಗ್ಲೂ ಅದು ಅಲ್ಲೇ. ಯಾವ ಗಂಡತಾನೆ ಸುಮ್ನಿರ್ತಾನೆ? ''ನೋಡು ದಮ್ಮೂ ಹೀಗೆ ಧಾರಾವಾಹಿ ನೋಡ್ಕೊಂಡ್ ಕೂತ್ರೆ ಮನೆಕೆಲ್ಸ ಸಾಗಿದ ಹಾಗೇ'' ಎಂದು ಹೇಳಿದರೆ 'ಅಯ್ಯೋ, ಮರ್ತೆ ಹೋಯ್ತು ರೀ.....' ಎಂದು ರಾಗ ಎಳೆಯುವಳು.

ಸರಿ, ಇನ್ನೊಂದು ದಿವಸ ಕರೆಂಟ್‌ಬಿಲ್ ಕಟ್ಟಲು ಎಲ್ಲಾ ರೆಡಿ ಮಾಡಿಟ್ಟು ಹೋದ. ಸಂಜೆ ಬಂದಾಗ್ಲೂ ಯಥಾ ಪ್ರಕಾರ ಬಿಲ್ಲು- ಹಣ ಟಿವಿ ಟೇಬಲ್ ಮೇಲೆ!

''ಏನ್ ದಮ್ಮೂ, ಹೀಗ್ ಮಾಡ್ತಿಯಾ. ನಾನೆಷ್ಟೊಂತಾ ಅನುಸರಿಸಿಕೊಂಡು ಹೋಗ್ಲಿ. ಒಂದರ್ಧಗಂಟೆ ಬಿಡುವು ಮಾಡ್ಕೊಂಡು ಕಟ್ಟಿ ಬರೋದಲ್ವಾ'' ಎಂದು ರೇಗಿದರೆ, ಯಥಾ ಪ್ರಕಾರದ ಉತ್ತರ 'ಅಯ್ಯೋ, ಮರ್ತೆ ಹೋಗಿತ್ತು ರೀ..... ಇವತ್ತು ಕಟ್ಟಿ ಬಿಡೋಣ ಅಂತಾ ಟಿವಿ ಮುಂದೆ ಕೂತಿದ್ನಾ. ಹಾಳಾದ್ದು 'ಲೋಕ ವಲ್ಲಭ' ಸೀರಿಯಲ್‌ನಲ್ಲಿ ಅವರಿಬ್ಬರ ಮದುವೆ ಆಗುತ್ತೋ ಇಲ್ವೋ ಅನ್ನೋ ಭಯಂಕರ ಕ್ಯೂರಿಯಾಸಿಟಿಗೆ ಬಂದು ನಿಂತು ಬಿಡ್ತು. ನಾನೆಷ್ಟೇ ತಲೆಕೆರ್ಕೊಂಡ್ರೂ ಹಾಳಾದ್ದು ಮುಂದೆ ಏನಾಗಬಹುದೂಂತ ಯೋಚಿಸಕ್ಕೆ ಆಗ್ಲಿಲ್ಲಾರೀ. ಇಂತಹ ಸಂದಿಗ್ಧ ಪರಿಸ್ಥಿತೀಲಿ ನಾನೇ ಸಿಕ್ಕೊಂಡಿರೋವಾಗ ಕರೆಂಟ್ ಬಿಲ್ ಯಾರಿಗೆತಾನೆ ಜ್ಞಾಪಕಕ್ಕೆ ಬರುತ್ತೇರಿ.'

ಅದೂ ಅಲ್ದೆ ಕೊನೆಮನೆ ಕನಕಮ್ಮ ಹದಿನೈದು ದಿವಸದಿಂದ 'ಯಾರಸಾಕ್ಷಿ' ಸೀರಿಯಲ್ ನೋಡಿರಲಿಲ್ವಂತೆ. ಅಲ್ಲಿ ಮದುವೆಯಾಗಿದ್ರೂ ಅದೇನೋ ಪ್ರಪೋಸ್ ಮಾಡೋದಂತೆ. ಮದುವೆಗೆ ಮುಂಚೆ ಪ್ರಪೋಸ್ ಮಾಡೋದನ್ನು ಕಂಡಿದೀವಿ. ಮದುವೆ ಆದಮೇಲೂ ಅಥೆಂತಹ ಪ್ರಪೋಸ್‌ರೀ? ಹಾಳಾದ್ದು ಏನ್ ಮಾಡ್ತಾರೋ ತಿಳ್ಕೊಂಡ್ ಬಿಡೋಣಾಂತ ಕೂತ್ಕೊಂಡ್ ನೋಡಿ ಕನಕಮ್ಮಂಗೆ ಹೇಳಿ ಕಳಿಸ್ದೆ.

ಅಷ್ಟರಲ್ಲಿ ಹಿಂದಿನ ಮನೆ ರೂಪಮ್ಮ ಬಂದ್ರಾ. ರೂಪ 'ಒಂದ್ ಕೇಡು' ಅನ್ನೋ ಸೀರಿಯಲ್‌ನಲ್ಲಿ ಇಬ್ಬರಿಗೂ ರೂಪವಂತೂ ಇಲ್ದಿದ್ರೂ ಮಗುವಂತೂ ಆಗಿಬಿಟ್ಟಿದೆ. ರೂಪಕ್ಕೂ ಮಗು ಆಗೋಕೂ ಏನೇ ಸಂಬಂಧ ಅಂದ ಗಂಡ. ಅಲ್ಲೇ ಇರೋದು ರೀ ಪಾಯಿಂಟು. ಅದು ಅವರದ್ದಲ್ಲೇ ಅಲ್ವಂತೆ ಆ ಮಗು! ಸರಿ ಯಾರ್ದಾದ್ರೆ ನಿಂಗೇನೂ ದಮ್ಮೂ... ಮನೆಕೆಲ್ಸ ಮಾಡೋದು ಬಿಟ್ಟು.'

'ರೀ ರೀ ರೀ..... ನಾನು ನೋಡಿ ಹೇಳಿದ ಮೇಲೆ ರೂಪಮ್ಮ ಎಷ್ಟು ಸಂತೋಷದಿಂದ ಮನೆಗೆ ಹೋದ್ರುಗೊತ್ತಾ? ಇನ್ನು ಎಂಟು ದಿವಸ ಊರಲ್ಲಿರೋದಿಲ್ವಂತೆ. ಆ ಸೀರಿಯಲ್ ನೋಡ್ಲೇಬೇಕು. ನೀವು ಯಾವ ಕೆಲ್ಸಾನೂ ನನ್ತಲೆಗೆ ಹಚ್ಬೇಡಿ. ಪಾಪ, ಅವರಿಗೆ ಸೀರಿಯಲ್ ಮಿಸ್ ಆಗೋದ್ರೆ ಯಾರ್ರೀ ಇದ್ದಾರೆ ಕಥೆ ಹೇಳೋಕೆ?'

''ಉದ್ಧಾರವಾದ ಹಾಗೆ''

ದಮಯಂತಿ ಗಂಡ ಅವತ್ತು ಮಳೇಲಿ ನೆನ್ಕೊಂಡು, ರೇನ್‌ಕೋಟ್ ಹಾಕ್ಕೊಂಡು ಬಂದ. ಕರೆಂಟು ಹೋಗಿತ್ತು. ಬೆಲ್ ಮಾಡೋಕೆ ಕರೆಂಟ್ ಇಲ್ದೆ ಬಾಗಿಲು ಬಡಿದ. ಬಾಗಿಲು ತೆಗೆದ ದಮಯಂತಿಗೆ ಸೀರಿಯಲ್ ನೋಡಲಾಗದ ಚಡಪಡಿಕೆ, ಕರೆಂಟ್ ಇಲ್ಲಾಂತ ಅಸಾಧ್ಯ ಕೋಪ. ಬಂದ ಕೋಪದಲ್ಲಿ ''ಯಾರ್ರೀ ಅದು..... ಮಳೆ ಬರ್ತಿದ್ರೆ ಪೋರ್ಟಿಕೋದಲ್ಲಿ ನಿಂತ್ಕೊಳ್ಳಿ. ಮನೆ ಒಳ್ಗೆ ಬಂದ್ರೆ ಹೇಗೆ?'' ದಬಾಯಿಸಿದಳು.

''ಲೇ ಲೇ ಲೇ..... ನಾನು ಕಣೆ ನಿನ್ನಗಂಡ !''

''ಅಯ್ಯೋ ಹೌದಲ್ಲ, ಧಾರಾವಾಹಿ ಮಿಸ್ ಆಯ್ತಲ್ಲ ಅನ್ನೋ ಬೇಜಾರಿನಲ್ಲಿ ನೀವು ಮನೇಗೇ ಬಂದಿಲ್ಲ ಅನ್ನೋದು'' ಮರ್ತೆ ಹೋಗಿತ್ತು ರೀ.......''

ಗಂಡ ಪೋರ್ಟಿಕೋದಲ್ಲಿ ಕುಸಿದು ಕುಳಿತ.

TEMPLE
OF
KNOWLEDGE

DISTANCE EDUCATION
(Govt. & UGC Recognised Universities)

# BEECHI VIDYA KENDRA

## ADMISSION OPEN - APPLY NOW

## CENTER OF DISTANCE LEARNING

**MBA WITH 6 SPECIALIZATIONS, MA, M.COM, MCA, MSc-BT, PGDCS, BA & B.COM - AGE BASIS**

Email : admin@beechi.in Web : www.becchi.in
Mob. 9035302302, 9035007003

## PLACEMENT SERVICES FOR :

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

TEMPLE
OF
KNOWLEDGE

Email : admin@beechi.in
Web : www.becchi.in
Mob. 9740968677

# ಹೊಸ ವರ್ಷದ ಆಶೋತ್ತರಗಳು

**– ಬೇಲೂರು ರಾಮಮೂರ್ತಿ**

ಹೊಸ ವರ್ಷ ಬಂತೆಂದರೆ ಜನರ ಆಶೋತ್ತರಗಳು ವಿಶೇಷವಾಗಿರುತ್ತವೆ. ಅವುಗಳು ಈಡೇರುತ್ತವೋ ಇಲ್ಲವೋ ಎನ್ನುವುದು ಬೇರೆ ವಿಷಯ. ಆದರೆ ಮನದಲ್ಲಿ ಇಂತಹದೊಂದು ಕೋರಿಕೆ ಬಂದಿರಬಹುದೇ?

ಹೊಸ ಲೇಖಕ – ಈ ವರ್ಷ ನನಗೆ ಪೈಪೋಟಿ ನೀಡುತ್ತಿರುವ ಲೇಖಕರ ಯಾವ ಲೇಖನಗಳನ್ನೂ ಯಾವ ಪತ್ರಿಕೆಯೂ ಪ್ರಕಟಿಸದಿರಲಿ

ಜಗಳಗಂಟಿ ಗಂಡ – ಈ ವರ್ಷವೂ ನನ್ನ ಹೆಂಡತಿಯ ಜಗಳ ವಿಪರೀತಕ್ಕೇರಿ ಅವಳು ನನ್ನನ್ನು ಬಿಟ್ಟು ತವರಿಗೆ ಹೋಗಿ ಅಲ್ಲಿಂದನೇ ವಿಚ್ಛೇದನ ಕೋರಲಿ

ಕುಡುಕ – ಈ ವರ್ಷ ನಮಗೆ ಪುಕ್ಕಟ್ಟೆಯಾಗಿ ಮತ್ತು ಸಖತ್ತಾಗಿ ಕುಡಿಯುವ ಅವಕಾಶಗಳು ಸಿಗಲಿ. ನಾನು ಕುಡಿಯುವ ಬ್ರಾಂಡ್ ಬಿಟ್ಟು ಮಿಕ್ಕೆಲ್ಲ ಬ್ರಾಂಡ್‌ಗಳ ದರಗಳೂ ಯದ್ರಾಬಿದ್ರಿ ಏರಿಕೆಯಾಗಲಿ

ಟ್ರಾಫಿಕ್ ಪೋಲೀಸ್ – ಈ ವರ್ಷ ಹೆಚ್ಚು ಹೆಚ್ಚು ಜನ ಹೆಚ್ಚು ಹೆಚ್ಚು ಕುಡಿಯಲಿ, ಕುಡಿದು ರಾತ್ರಿ ಹೊತ್ತು ಗಾಡಿ ಓಡಿಸಿ ನನ್ನ ಕೈಗೆ ಸಿಕ್ಕಿಕೊಳ್ಳಲಿ

ಹೊಸ ಸಿನಿಮಾ ನಟಿ – ನನಗೆ ಬರುತ್ತಿರುವ ಅವಕಾಶಗಳನ್ನೆಲ್ಲಾ ಕಿತ್ಕೊಂಡು ಹೊಟ್ಟೆ ಉರಿಸುತ್ತಿರುವ ನಟಿಯ ಯಾವುದೇ ಚಿತ್ರವೂ ಈ ವರ್ಷ ತೆರೆ ಕಾಣದಿರಲಿ. ಒಂದು ವೇಳೆ ತೆರೆ ಕಂಡರೂ ಅವು ತೋಪೆದ್ದು ಹೋಗಲಿ

ಮನೆ ಮಾಲೀಕ – ನಮ್ಮ ಪಕ್ಕದ ಸೈಟಿನಲ್ಲಿ 20 x 30 ಅಳತೆಯ ನಿವೇಶನದಲ್ಲಿ ಕಟ್ಟುತ್ತಿರುವ ಆರು ಅಂತಸ್ತಿನ ಕಟ್ಟಡ ಯಾವುದಾದರೂ ಕಾರಣಕ್ಕೆ ಕುಸಿದು ಬೀಳಲಿ

ಪೋಲೀಸ್ ಪೇದೆ – ಎರಡು ವರ್ಷಗಳಿಂದ ನನ್ನ ವರ್ಗಕ್ಕೆ ಕಲ್ಲು ಹಾಕುತ್ತಿರುವ ಆಫೀಸರ್ ಈ ವರ್ಷ ಅವರೇ ಬೇರೆ ಊರಿಗೆ ವರ್ಗವಾಗಿ ತೊಲಗಿಹೋಗಲಿ

ದೊಡ್ಡಾಸ್ಪತ್ರೆ ಮಾಲೀಕ – ಈ ವರ್ಷ ಹೇಗೋ ಏನೋ ಒಟ್ಟಿನಲ್ಲಿ ನಮ್ಮ ಆಸ್ಪತ್ರೆ ಮತ್ತು ಐ.ಸಿ.ಯು. ಸದಾ ರೋಗಿಗಳಿಂದ ತುಂಬಿರಲಿ

| | | |
|---|---|---|
| ಪತ್ರಿಕೆಯ ಮಾಲೀಕ | – | ನಮ್ಮ ಪೈಪೋಟಿ ಪತ್ರಿಕೆಗಳ ಪ್ರಸಾರ ಗಣನೀಯವಾಗಿ ಇಳಿಯಲಿ ಮತ್ತು ಓದುಗರು ನಮ್ಮ ಪತ್ರಿಕೆಯತ್ತ ವಾಲಲಿ |
| ಸಾಲಗಾರ | – | ನನಗೆ ಸಾಲ ಕೊಟ್ಟಿರುವವರೆಲ್ಲರೂ ಮರೆವಿನ ಕಾಯಿಲೆಯಿಂದ ಬಳಲಿ ನನಗೆ ಕೊಟ್ಟಿರುವ ಸಾಲವನ್ನು ಸಂಪೂರ್ಣವಾಗಿ ಮರೆತುಹೋಗಲಿ |
| ಭಾಷಣಕಾರ | – | ನನ್ನ ಭಾಷಣದ ಅವಕಾಶಗಳನ್ನೆಲ್ಲಾ ಕಸಿದುಕೊಳ್ಳುತ್ತಿರುವ ಇನ್ನಿತರ ಎಲ್ಲಾ ಭಾಷಣಕಾರರೂ ಗಂಟಲು ಬೇನೆಯಿಂದ ಬಳಲಿ ಅವರು ಎಂದಿನಂತೆ ಭಾಷಣ ಮಾಡಲು ಅಸಮರ್ಥರಾಗಲಿ. ಸಂಘ ಸಂಸ್ಥೆಗಳು ಅವರ ಬದಲಿಗೆ ಭಾಷಣಕ್ಕೆ ನನ್ನನ್ನೇ ಕರೆಯಲಿ |
| ಆಶಾವಾದಿ | – | ಈ ವರ್ಷ ಜನ ಸಿಕ್ಕಾಪಟ್ಟೆ ಸತ್ಯ, ನ್ಯಾಯದ ಹಾದಿ ತುಳಿಯಲಿ. ಲಂಚ ಮುಟ್ಟದೇ ಕೆಲಸ ಮಾಡಿಕೊಡುವವರ ಸಂಖ್ಯೆ ಹೆಚ್ಚಲಿ. ಸುಳ್ಳು ಹೇಳಲು ಹೊರಟರೂ ಸತ್ಯವೇ ಹೊರಬರಲಿ. ಅನ್ಯಾಯ ಮಾಡಲು ಹೊರಟರೂ ನ್ಯಾಯವನ್ನೇ ಮಾಡುವಂತಾಗಲಿ. ಯಾವುದೇ ಪದಾರ್ಥಗಳ ಬೆಲೆ ಏರುವ ಬದಲಿಗೆ ಇಳಿಮುಖವಾಗಲಿ |
| ಹಿರಿಯಜ್ಜಿ | – | ನನ್ನ ಮೊಮ್ಮಕ್ಕಳು ಮತ್ತು ಮೊಮ್ಮಕ್ಕಳ ವಯಸ್ಸಿನ ಎಲ್ಲಾ ಮಕ್ಕಳೂ ಈ ವರ್ಷವಾದರೂ ತಮ್ಮ ಮೊಬೈಲ್, ಲ್ಯಾಪ್‌ಟಾಪ್‌ಗೆ ಅಂಟಿಕೊಳ್ಳುವುದು ಬಿಟ್ಟು, ಮನೆಯಲ್ಲಿ ತಂದೆ ತಾಯಿಯರೊಂದಿಗೆ, ಗುರುಹಿರಿಯರೊಂದಿಗೆ ಬಾಯಿ ತುಂಬಿ ಮಾತಾಡಲಿ. |
| ಹಿರಿಯಜ್ಜ | – | ಯಾವುದಾದರೂ ಕಾರಣಕ್ಕೆ ತಮ್ಮ ತಂದೆ ತಾಯಿಯರನ್ನು ವೃದ್ಧಾಶ್ರಮಕ್ಕೆ ಸೇರಿಸಿರುವ ಮಕ್ಕಳು ತಮ್ಮ ಮನಸು ಬದಲಿಸಿ ತಮ್ಮ ಹಿರಿಯರನ್ನು ಮತ್ತೆ ಮನೆಗೆ ಕರೆಸಿಕೊಂಡು ಆದಷ್ಟೂ ಚನ್ನಾಗಿ ನೋಡಿಕೊಳ್ಳಲಿ |

.... ಸಾಕು ಮಾಡು, ಆಶೋತ್ತರಗಳ ಕನಸಿನ ಗೋಪುರ ಬಾಲಂಗೋಚಿಯಂತೆ ಬೆಳೆಯುತ್ತಿವೆ ಅಂತ ಅಪರಂಜಿ ಮೂತಿ ತಿವಿದಿದ್ದರಿಂದ ಇದನ್ನು ಇಲ್ಲಿಗೇ ಸಾಕು ಮಾಡುತ್ತಿದ್ದೇನೆ.

# ವಿವಾಹೋತ್ಸವ ವಿನೋದಾವಳಿಗಳು

**– ನಂನಾಗ್ರಾಜ್**

ದಕ್ಷಿಣ ಭಾರತದ ಹಿಂದು ಸಾಂಪ್ರದಾಯಿಕ ಸುದೀರ್ಘ ವಿವಾಹಗಳಲ್ಲಿ ಅನೇಕಾನೇಕ ಶಾಸ್ತ್ರ, ಚಟುವಟಿಕೆಗಳು ರಂಜಿಸುತ್ತವೆ. ಇಂದಿನ ಕಾಲಕ್ಕೆ ಅವುಗಳಲ್ಲಿ ಬಹಳಷ್ಟು ಪ್ರಸ್ತುತೆಯನ್ನು ಕಳೆದುಕೊಂಡಿದ್ದರೂ ಹಲವೆಡೆ ಅವುಗಳನ್ನು ಮುಂದುವರೆಸಿಕೊಂಡು ಬರಲಾಗಿದೆ. ಅಂತಹ ಶಾಸ್ತ್ರ, ಚಟುವಟಿಕೆಗಳು ಹಾಸ್ಯಾಸ್ಪದವಾಗಿ ಕಂಡುಬರುತ್ತವೆ. ಅವುಗಳಲ್ಲಿ ಹಲವನ್ನು ಗಮನಿಸೋಣ.

**ಕಾಶಿಯಾತ್ರೆ**

ಈ ಸಂದರ್ಭದಲ್ಲಿ ಮದುಮಗ ನನಗೆ ಮದುವೆ ಬೇಡ ನಾನು ಕಾಶಿಗೆ ಹೊರಟು ಹೋಗುತ್ತೇನೆ ಎಂದು ಬೆದರಿಸುತ್ತಾನೆ. ಆಗ ಶುರುವಾಗುತ್ತೆ ಭಾವಿ ಮಾವನವರಿಂದ ಮಾನೋಲಾಗ್ (ಶಾಸ್ತ್ರಿಗಳ ಸ್ಕ್ರಿಪ್ಟ್ ಪ್ರಕಾರ).

ಕಾಶಿಯಾತ್ರೆ ಬಹಳ ಪ್ರಯಾಸದ ಪ್ರಯಾಣ ಕಣಪ್ಪಾ ದುರ್ಗಮ ಪ್ರದೇಶ, ಕಾಡು, ಮೇಡು, ಕಲ್ಲು, ಮುಳ್ಳು, ಕಳ್ಳಕಾಕರು, ದುಷ್ಟಮೃಗಗಳು ಹೀಗೆಲ್ಲ. ಇಷ್ಟೆಲ್ಲ ಕಷ್ಟ ಅನುಭವಿಸುವುದಕ್ಕೆ ನೀನು ಕಾಶಿಗೆ ಏಕಪ್ಪಾ ಹೋಗಬೇಕೂ? ಇಲ್ಲೇ ಇರು ನನ್ನ ಮಗಳನ್ನು ನಿನಗೆ ಕೊಟ್ಟು ಮದುವೆ ಮಾಡುತ್ತೇನೆ!

ಮದುಮಗನಿಗೆ ಇದರ ಸೂಕ್ಷ್ಮ ಅರ್ಥವಾಗುವುದಿಲ್ಲ, ಪಾಪ ಒಪ್ಪಿಕೊಳ್ಳುತ್ತಾನೆ!

ಇದೇ ಸಂದರ್ಭದಲ್ಲಿ ಮದುಮಗನಿಗೆ ಪೇಟ, ಛತ್ರಿ, ವಾಕಿಂಗ್ ಸ್ಟಿಕ್ ಹಾಗೂ ಹೊಸ ಚಪ್ಪಲಿ ಕೊಡಲಾಗುತ್ತೆ. ಇವೆಲ್ಲದರ ಸಂಕೇತ ಬೇರೆ ಏನೇ ಇರಬಹುದು, ಅದರೆ ನನಗನ್ನಿಸುವುದು :

**ಪೇಟ :** ಇದು ಮತ್ತೇನಲ್ಲ, ಭಾವಿ ಮಾವನವರು ಭಾವಿ ಅಳಿಯನಿಗೆ ಟೋಪಿ ಹಾಕ್ತಾರೆ. ಸರಿಯಾಗಿದೆ ತಾನೆ?

**ಛತ್ರಿ :** ಬಿಸಿಲು ಮಳೆಯಿಂದ ರಕ್ಷಣೆಗಾಗಿ ಅಲ್ಲ ಕಣ್ರೀ. ಹಿಂದಿನ ಸಂಜೆಯ ಅದ್ದೂರಿ ವರೋಪಚಾರದಿಂದ ನೊಂದಿದ್ದ ವಧುವಿನ ತಂದೆ ಭಾವಿ ಅಳಿಯನನ್ನು ಕುರಿತು ಮನಸ್ಸಿನಲ್ಲಿ ಅಂದುಕೊಳ್ತಿರ್ತಾರೆ “ನೀನೊಬ್ಬ ಸರಿಯಾದ ಛತ್ರಿ”!

**ವಾಕಿಂಗ್ ಸ್ಟಿಕ್ :** ಮಾವನವರ ಸ್ವಗತ; ನಡೆಯಲು ನಿನಗೆ ಸಧ್ಯದಲ್ಲಿ ಇದರ ಅಗತ್ಯವಿಲ್ಲವೆಂದು ನನಗೆ ಗೊತ್ತು, ಅಲ್ಲಿಯವರೆಗೆ ಇದು ನಿನ್ನ ಸ್ವಯಂರಕ್ಷಣೆಗಾಗಿ!

**ಚಪ್ಪಲಿ :** ಬಿಂದಾಸಾದ ಬ್ರಹ್ಮಚರ್ಯ ಬಿಟ್ಟು ಭರದಿಂದ ಮದುವೆಯಾಗಲು ಹೊರಟಿದ್ದೀಯಲ್ಲವೆ? ಈವತ್ತಿನ ನಿನ್ನ ಈ ನಿರ್ಧಾರಕ್ಕೆ ನೀನು ಮುಂದೆ ಮಾಡಿಕೊಳ್ಳುವ ಪ್ರಾಯಶ್ಚಿತ್ತಕ್ಕೆ ಅತಿಸೂಕ್ತ ವಸ್ತು, ಜೋಪಾನವಾಗಿಟ್ಟುಕೊಳ್ಳಪ್ಪಾ!

**ಅಂತರ್ಪಟ :** ಅಂದಿನ ಕಾಲದಲ್ಲಿ ಹೆಣ್ಣು, ಗಂಡು ಮದುವೆಗೆ ಮುಂಚೆ

ಒಬ್ಬರನ್ನೊಬ್ಬರು ನೋಡಿರುತ್ತಿರಲಿಲ್ಲ. ಗುರು ಹಿರಿಯರು (!) ಮಾತ್ರ ನೋಡಿ ನಿಶ್ಚಯಿಸುತ್ತಿದ್ದರು. ಈಗ ವಿಷಯ ಬೇರೆಯೇ ವಿವರಣೆ ಬೇಕಿಲ್ಲ.

ಹೆಣ್ಣು ಗಂಡುಗಳ ನಡುವೆ ಅಡ್ಡವಾಗಿ ಈ ಅಂತರ್ಪಟವನ್ನು ಹಿಡಿದುಕೊಳ್ಳುತ್ತಾರೆ. ನಾನು ನೋಡಿರುವ ಹಾಗೆ ಇದು ತೆಳ್ಳಗಿದ್ದು ಪಾರದರ್ಶಕವಾಗಿರುತ್ತೆ! ಇದು ಹಾಗಿರಲಿ, ಶಾಸ್ತ್ರಿಗಳು ಸಂಬಂಧಿತ ಮಂತ್ರ ಹೇಳಿದ ಕೂಡಲೇ ಈ ಅಂತರ್ಪಟವನ್ನು ಸರಿಸಲಾಗುವುದು ಆ ಕೂಡಲೇ ಹೆಣ್ಣು, ಗಂಡು ಪರಸ್ಪರ ಜೀರಿಗೆ, ಬೆಲ್ಲವನ್ನು ತಲೆಯ ಮೇಲೆ ಹಾಕಬೇಕು. ಒಂದು ನಂಬಿಕೆಯ ಪ್ರಕಾರ ಮೊದಲು ಯಾರು ಜೀರಿಗೆ ಬೆಲ್ಲವನ್ನು ಭಾವಿ ಸಂಗಾತಿಯ ಮೇಲೆ ಹಾಕುತ್ತಾರೋ ಅವರದೇ ವೈವಾಹಿಕ ಜೀವನದುದ್ದ ಮೇಲುಗೈ! ಹೀಗಾಗಿ ಬಹಳಷ್ಟು ಬಾರಿ ಮಂತ್ರ ಮುಗಿಯುವ ಮುನ್ನವೇ ಈ ಎರಚಾಟ ಮುಗಿದು ಹೋಗಿರುತ್ತೆ! (ಜಂಪಿಂಗ್ ದಿ ಗನ್!) ಕೆಲವೊಮ್ಮೆ ಶಾಸ್ತ್ರಿಗಳು ಶಾಮೀಲಾಗಿ "ಮ್ಯಾಚ್ ಫಿಕ್ಸಿಂಗ್" ಆಗುವುದೂ ಉಂಟು!

**ಊಂಜಲ್ (ಉಯ್ಯಾಲೆ) :** ಅಲಂಕರಿಸಿದ ಒಂದು ಸಣ್ಣ ಉಯ್ಯಾಲೆ ಅಂದಿನ ದಿನಗಳಲ್ಲಿ ಮದುವೆಗಳು ಅತಿ ಸಣ್ಣ ವಯಸ್ಸಿನಲ್ಲಿ ನೆರವೇರುತ್ತಿದ್ದರಿಂದ ಗಂಡು, ಹೆಣ್ಣಿಗೆ ಈ ಕಾರ್ಯಕ್ರಮ ಖುಷಿ ತರುತ್ತಿತ್ತು. ಈಗೆಲ್ಲ ಬೆಳೆದು, ಬಲಿತು ರೋಲರ್ ಕೋಸ್ಟರ್‌ಗಳಲ್ಲಿ ಮಜ ತೆಗೆದುಕೊಂಡಿರುವವರಿಗೆ ಇದು ಫನ್ನಿ ಎನ್ನಿಸುವುದು.

**ಚೆಂಡಾಟ :** ವಧು ವರರು ಎದುರು ಬದುರು ಕುಳಿತು ಅಲಂಕರಿಸಿದ ಒಂದು ಚೆಂಡನ್ನು ಪರಸ್ಪರ ಎಸೆದು ಹಿಡಿಯುವುದು. ನಕ್ಕು ನಕ್ಕು ಹೊಟ್ಟೆ ಹಿಡಿದುಕೊಳ್ಳುವಷ್ಟು ತಮಾಷೆಯಾಗಿರುತ್ತೆ ಈ ದೃಶ್ಯ! 'ಹ್ಯಾವಿಂಗ್ ಎ ಬಾಲ್' ಅಂದರೆ ಇದೇನಾ?!

**ವಧುವನ್ನು ಮದುವೆ ಮಂಟಪಕ್ಕೆ ಕರೆತರುವುದು**

ಇದು ವಧುವಿನ ಸೋದರ ಮಾವನಿಗೆ ಮೀಸಲಾದ ಜವಾಬ್ದಾರಿ. ಆಗಿನ ಕಾಲದಲ್ಲಿ ಪುಟಾಣಿ ವಧುವನ್ನು ಹೆಗಲ ಮೇಲೆ ಎತ್ತಿಕೊಂಡು ಬರುತ್ತಿದ್ದರು. ಈಗಲೂ ಅದೇ ನಿರೀಕ್ಷೆ! ಮೇಲಾಗಿ ಸೋದರ ಮಾವ ಪೀಚಾಗಿದ್ದು ವಧು ಧಡೂತಿಯಾಗಿದ್ದರೆ ಸಮಸ್ಯೆಯಾಗುತ್ತೆ. ಮಂಟಪಕ್ಕೆ ಬರುವ ದಾರಿಯಲ್ಲೋ ಅಥವಾ ಮಂಟಪದ ಹತ್ತಿರವೋ ಬೆವರಿ ಬಸವಳಿದು ವಧುವನ್ನು ಬೀಳಿಸಿಬಿಡುವ ಸಾಧ್ಯತೆ.

**ಸಂಬಂಧ ಮಾಲೆ :** ಅವರವರ ಪಾರ್ಟಿಯ ಸದಸ್ಯನ ಹೆಗಲಮೇಲೆ ಕುಳಿತು ವಧು ವರರು ಪರಸ್ಪರ ಹಾರ ಬದಲಾಯಿಸಿಕೊಳ್ಳುವ ಕಾರ್ಯಕ್ರಮ. ಹಾರ ಹಾಕುವುದಕ್ಕಾಗದಿರುವ ಹಾಗೆ ಎರಡೂ ಪಾರ್ಟಿಯವರಿಂದ ಓಲಾಟ, ಮೋಜಿಗಾಗಿ! ನಾದಸ್ವರದ ಡೋಲಿನವನೂ ಇದರಲ್ಲಿ ಶಾಮೀಲಾಗಿ ಅವನ ತಾಳಕ್ಕೆ ತಕ್ಕ ಹಾಗೆ ಸ್ಟೆಪ್ ಹಾಕುವರು! ವಧುವಿನ ಕಡೆಯ ಸದಸ್ಯ ಎತ್ತರವಾಗಿದ್ದರೆ ಮತ್ತೂ ಮಜ ಹಾಗೂ ಅಭಾಸ. ಬ್ಯಾಸ್ಕೆಟ್ ಬಾಲ್ ಆಟದಲ್ಲಿನಂತೆ ದೂರದಿಂಲೇ ಹಾರ ಹಾಕುವ ಪ್ರಮೇಯ.

**ತಿನ್ನಿಸುವುದು :** ಊಟದ ಮನೆಯಲ್ಲಿ ತಂದೆ, ತಾಯಿ, ಅತ್ತೆ, ಮಾವ ಹಾಗೂ ಹತ್ತಿರದ ಸಂಬಂಧಿಗಳು, ಹಾಗೂ ಗೆಳೆಯರೊಡನೆ ವಧು, ವರರ ಊಟದ

ಕಾರ್ಯಕ್ರಮ ಭಕ್ಷಗಳನ್ನು ಭುಜಬಳಸಿ ಪರಸ್ಪರ ತಿನ್ನಿಸಬೇಕು. ಸಾಮೀಪ್ಯದ ಅನುಭವ ಅಗಲಿ ಎಂಬ ಉದ್ದೇಶ. ಪೆಟಿಂಗ್, ನೆಕಿಂಗ್, ಹಗಿಂಗ್‌ಗಳ ಅನುಭವವಾಗಿರುವ ಇಂದಿನ ದಿನಗಳಲ್ಲಿ ಈ ಚಟುವಟಿಕೆ ತಮಾಷೆಯಾಗಿ ಕಾಣುತ್ತೆ.

**ಹೆಸರು ಹೇಳಿಸುವುದು :** ಅಂದಿನ ದಿನಗಳಲ್ಲಿ ಹೆಂಡತಿಯರು ಗಂಡಂದಿರ ಹೆಸರನ್ನು ಹೇಳುತ್ತಿರಲಿಲ್ಲ. ವೈವಾಹಿಕ ಜೀವನದಲ್ಲಿ ಹೆಂಡತಿಯ ಪಾಲಿಗೆ ಗಂಡ **'ಇವರು'** ಆಗಿಬಿಡುತ್ತಿದ್ದರು!

ವಿವಾಹದ ಗೃಹಪ್ರವೇಶದ ಸಮಯದಲ್ಲಿ ಗಂಡು ಹೆಣ್ಣನ್ನು ಬಾಗಿಲಲ್ಲಿ ಅಡ್ಡಕಟ್ಟಿ ಸಮೀಪದ ಬಂಧುಗಳು, ಗೆಳೆಯರು ವಧುವನ್ನು ಗಂಡಿನ ಹೆಸರು ಹೇಳಲು ಪೀಡಿಸುತ್ತಾರೆ. ಅಂದಿನ ದಿನಗಳಲ್ಲಿ ವಧು ಗಂಡನ ಹೆಸರನ್ನು ನೇರವಾಗಿ ಹೇಳದೆ ಜಾಣ್ಮೆಯಿಂದ ಒಗಟಿನ ರೂಪದಲ್ಲಿ ಸುತ್ತಿ ಬಳಸಿ ಹೇಳುತ್ತಿದ್ದಳು. ಈಗ ಹೆಸರಷ್ಟೇ ಏಕೆ ಪರಸ್ಪರ ಪ್ರೀತಿಯ ಹಾಗೂ ಪೀಡಿಸುವ ಅಡ್ಡ ಹೆಸರುಗಳು ಫಿಕ್ಸ್ ಆಗಿರುತ್ತವೆ. ಹಾಗೂ ಹುಸಿ ಜಗಳಗಳ ಸಮಯಗಳಲ್ಲಿ, ಈ ಮೇಲ್ ಎಸ್.ಎಂ.ಎಸ್.ಗಳಲ್ಲಿ ಕೂಡ ಕತ್ತೆ, ಕೋತಿ ಎಂದೆಲ್ಲ ಪರಸ್ಪರ ಗುರುತಿಸಿಕೊಂಡಿರುತ್ತಾರೆ!

ಈ ಲೇಖನವನ್ನು ನಾನು ಇನ್ನೂ ಎಳೆಯುತ್ತಾ ಹೋದರೆ ನೀವುಗಳು ನನಗೆ ಒಂದು ಒಳ್ಳೆಯ (?!) ಹೆಸರನ್ನು ಇಡುವುದರಲ್ಲಿ ಸಂಶಯವಿಲ್ಲ.

ನನ್ನನ್ನು ಮನುಷ್ಯನನ್ನಾಗಿ ಮಾಡಿದ್ದೇ ನನ್ನ ಹೆಂಡತಿ ಎಂದು ಗಂಡ ಅವರಿವರ ಬಳಿ ಹೇಳಿಕೊಳ್ಳುತ್ತಿದ್ದ. ಅದು ಹೆಂಡತಿಗೂ ಸಂತಸ ತರುವ ವಿಷಯವಾಗಿತ್ತು. ಆದರೆ ಗಂಡ ತನ್ನ ಬಗ್ಗೆ ಏನೆಂದುಕೊಳ್ಳುತ್ತಿರಬಹುದು ಅಂತ ಹೆಂಡತಿಗೆ ಕುತೂಹಲ ಇತ್ತು. ನನ್ನ ಹೆಂಡತಿಗೆ ದೇವತೆಗೆ ಇರುವ ಎಲ್ಲಾ ಗುಣಗಳೂ ಇವೆ ಒಂದನ್ನು ಬಿಟ್ಟು ಅಂದು ಗಂಡ ಹೇಳುತ್ತಿದ್ದನಂತೆ. ಒಂದು ದಿನ ಹೆಂಡತಿ ಗಂಡನನ್ನು ಕೇಳಿದಳು ರೀ ನನ್ನಲ್ಲಿ ದೇವತೆಗೆ ಇರುವ ಎಲ್ಲಾ ಗುಣಗಳೂ ಇವೆ ಒಂದನ್ನು ಬಿಟ್ಟು ಅಂದಿರಲ್ಲ ಅದು ಏನು ಅಂತ ಕೇಳಿದಳು. ಗಂಡ ಹಿಂದೆ ಮುಂದೆ ನೋಡದೇ ಸೌಂದರ್ಯ ಅಂದ. ಹೆಂಡತಿ ಹುಸಿ ಮುನಿಸು ತೋರಿದಳು. ಹೆಂಡತಿಯನ್ನು ತನ್ನತ್ತ ತಿರುಗಿಸಿಕೊಂಡು ಲೇ ಸೌಂದರ್ಯ ನಿನ್ನಲ್ಲಿ ಇಲ್ಲ. ಸೌಂದರ್ಯದಲ್ಲೇ ನೀನಿದೀಯ ಕಣೆ ಅದಕ್ಕೆ ಹಾಗಂದೆ ಅಂದ. ಹೆಂಡತಿಗೆ ಸಖತ್ ಖುಷಿಯಾಯಿತು. ಸಂಸಾರದಲ್ಲಿ ಸುಖ ಸಂತಸ ಇರಬೇಕು, ಹೊಟ್ಟೆ ತುಂಬಾ ಊಟ ತಿಂಡಿ ಸಿಗುತ್ತಿರಬೇಕು ಅಂದರೆ ಆಗಾಗ ಇಂಥಾ ಒಂದೊಂದು ಸುಳ್ಳುಗಳನ್ನು ಹೇಳುತ್ತಿರಬೇಕಾಗುತ್ತೆ ಅಂದುಕೊಂಡ.

# ಅಂಬಾನಿಯ ಆಹ್ವಾನ ಪತ್ರಿಕೆ

**- ಪಾಲಹಳ್ಳಿ ವಿಶ್ವನಾಥ್**

ಮನೆಗೆ ಹೋಗಿ ಹೆಂಡತಿಯನ್ನು ಕೇಳಿದ

''ಇವತ್ತು ನನಗೆ ಏನಾದರೂ ಕೊರಿಯರ್ ಬಂದಿತ್ತೆ?''

''ನಿಮಗೆ ಯಾವ ಕೊರಿಯರ್ ಬರ್ತಾನೆ?''

''ಸರಿ, ಏನಾದರೂ ಪೋಸ್ಟ್ ಬಂದಿತ್ತೆ?''

''ಇಲ್ಲ, ಏಕೆ?''

''ಒಂದು ಅಹ್ವಾನ ಪತ್ರಿಕೆ ಬರಬೇಕಿತ್ತು''

''ಯಾವುದಕ್ಕೆ ಆಹ್ವಾನ?''

''ಒಂದು ಮದುವೆಯದ್ದು?''

''ಯಾರದು? ನಮ್ಮ ಸಂಬಂಧೀಕರದ್ದು ಯಾವುದೂ ಇಲ್ಲವಲ್ಲ . ನಿಮ್ಮ ಆಫೀಸಿನವರದ್ದಾ?''

''ಇಲ್ಲ ಇಲ್ಲ! ನಿನಗೆ ಅವರು ಗೊತ್ತಿಲ್ಲ! ..ಅಂದರೆ ನನಗೆ ಅವರು ಗೊತ್ತು ಅಂತ ನಿನಗೆ ಗೊತ್ತಿಲ್ಲ''

''ಅಂಥವರು ಯಾರು?''

''ಅಂಬಾನಿಯವರು !''

''ಯಾವ ಅಂಬಾರಿ? ಯಾವ ಆನೆ?''

''ಇದು ಅಂಬಾನಿ ! ಅಂಬಾರಿ ಅಲ್ಲ ಅಮ್ ... ಬಾ.. ನಿ ! ಸ ರಿ ಗ ಮ ಪ ದ ನಿ ಸ ಇದೆಯಲ್ಲ ಅದರಲ್ಲಿ ರಿ ಅಲ್ಲ ನಿ''

''ಆಯ್ತು ! ಗೊತ್ತಾಯಿತು ಅಂಬಾ ನಿ ! ಯಾವ ಆಂಬಾನಿ ಅಂತ ಕೇಳಬಹುದೇ? ನಿಮ್ಮ ಆಫೀಸಿನವರಲ್ಲ ಅಂದಿರಿ.. ಅಲ್ಲ ಏನೋ ಗುಮಾನಿ ! ಆ ಆಗರ್ಭ ಶ್ರೀಮಂತ ಅಂಬಾನಿಯವರೋ?''

''ಹೌದು, ಹೌದು !ಅಬ್ಬ! ಕಡೆಗೂ ಗೊತ್ತಾಯಿತು ! ನೀನು ಟ್ಯೂಬು ಲೈಟೇ!

''ಮುಖೇಶ್ ಅವರೋ? ಅನಿಲ್ ಅವರೋ? ಸರಿ, ಮುಖೇಶ್ ! ಪೆಡ್ಡರ್ ರೋಡಿನಲ್ಲಿ ಎಷ್ಟೋ ಅಂತಸ್ತಿನ ಮನೆ ಉಳ್ಳವರಲ್ಲವೆ . .. ಇರಬೇಕು . ಅವರ ಮನೆಯಲ್ಲಿ ಮದುವೆ ಎಂದು ಓದಿದೆ ''

''ಅದೇ ಮದುವೆಯ ಅಹ್ವಾನಪತ್ರಿಕೆಯನ್ನು ನಾನು ನಿರೀಕ್ಷಿಸುತ್ತಿದ್ದೇನೆ!!

''ಆಯಿತು . ಈಗ ಒಂದು ಪ್ರಶ್ನೆ ಕೇಳಬಹುದೆ?''

''ಏಕೋ ಬಹಳ ಕ್ರಾಸ್ ಎಕ್ಸಾಮಿನೇಷನ್ ಆಗ್ತಾ ಇದೆ ! ಕೇಳು''

''ಆ ಶ್ರೀಮಂತ ಅಂಬಾನಿಯವರಿಗೆ ಸರಕಾರಿ ಕಛೇರಿಯ ಈ ಮಧ್ಯ ದರ್ಜೆಯ

ಕಾರಕೂನ ಹೇಗೆ ಪರಿಚಯವಾದರು?''

''ಹಾಸ್ಯ ಮಾಡ್ತಾ ಇರು ! ಮಧ್ಯಮ ದರ್ಜೆ ಈವತ್ತು ! ನಾಳೆ ಮೇಲು ದರ್ಜೆ ಅಗ್ತೀನಿ.

''ಅದು ಸರಿ. ಆಗುತ್ತೆ ಆಗುತ್ತೆ ನಿಮ್ಮ ನಿವೃತ್ತಿಯ ಸಮಯದಲ್ಲೇ ಅಗಬಹುದು ! ಆದರೆ ನನ್ನ ಪ್ರಶ್ನೆಗೆ ಉತ್ತರ ಸಿಗಲಿಲ್ಲ. ಆ ಶ್ರೀಮಂತರಿಗೆ ನೀವು ಹೇಗೆ ಗೊತ್ತು ?

''ಅವರು ನನ್ನ ಸ್ನೇಹಿತರು''

''ಅದೇ ಕೇಳ್ತಾ ಇರೋದು ! ಅದು ಹೇಗೆ ಆಯಿತು?''

''ನನಗೆ ಆವರು ವೇವ್ ಮಾಡಿದರು''

''ನಿಮಗೆ ಅವರು ವೇವ್ ಮಾಡಿದರು?''

''ಏನು ನೀನು ಗಿಣೀನಾ? .. ಹೇಳ್ತೀನಿ . ನಾನು ಚೌಪಾತಿಯಲ್ಲಿ ರಸ್ತೆ ದಾಟಲು ನಿಂತಿದ್ದೆ. ಅಗ ಅವರ ಕಾರು ಆಲ್ಲಿ ಬಂದು ನಿಂತಿತು. ಅದರಲ್ಲಿ ಮುಖೇಶ್ ಕುಳಿತಿದ್ದರು. ನಾನು ಅವರಿಗೆ ವೇವ್ ಮಾಡಿದೆ ಅವರು ಮುಗಳ್ನಕ್ಕು ವಾಪಸ್ಸು ವೇವ್ ಮಾಡಿದರು .''

''ಅಂದರೆ ಇದು ವೇವ್ ವೇವ್ ಸಂಬಂಧ.. ಹೀಗಾ.? ನೋಡಿ, ನನ್ನ ಕೈ''

''ಹೌದು ! ಆದರೆ ಅವರಿಗೆಲ್ಲ ಇದು ಅಭ್ಯಾಸ ಅಲ್ವಾ ! ನಿನಗಿಂತ ಚೆನ್ನಾಗಿಯೇ ವೇವ್ ಮಾಡಿದರು ! ಬರೀ ವೇವ್ ಆಲ್ಲ, ನಕ್ಕರು ಕೂಡ! ಆಳವಾದ ಸಂಬಂಧಗಳೆಲ್ಲಾ ಹೀಗೆಯೇ ಶುರುವಾಗುತ್ತವೆ ಗೊತ್ತಾ?''

''ಅದು ಮುಖೇಶ್ ಅಂಬಾನಿ ಎಂದು ನಿಮಗೆ ಚೆನ್ನಾಗಿ ಗೊತ್ತೋ?.. ಕಾರಿನ ಗಾಜು ಕಪ್ಪಗಿದ್ದಿರಬೇಕಲ್ಲವೆ ?''

''ನಾನು ಬಹಳ ಹತ್ತಿರ ಇದ್ದೆ . ಅದಕ್ಕೆ .. ಇಷ್ಟೇ ದೂರ ..''

''ನೀವೊಬ್ಬರೇನಾ ಅಲ್ಲಿದ್ದದ್ದು ?''

''ಏನು ಪ್ರಶ್ನೆ ಇದು ! ಚೌಪಾತಿಯಲ್ಲಿ ಜನ ರಸ್ತೆ ದಾಟ್ತಾನೆ ಇರೋಲ್ಲ ?

''ಅಂದರೆ ನಿಮ್ಮ ಜೊತೆ ಬಹಳ ಜನ ಇದ್ದರೂ ..ಅಂಬಾನಿಯವರು ನಿಮಗೆ ಮಾತ್ರ ವೇವ್ ಮಾಡಿದರು. ಅಲ್ವೆ?''

''ಹೌದು, ನಕ್ಕರು ಕೂಡ .ಏನಿದು ಕ್ರಾಸ್ ಎಕ್ಸಮಿನೇಷನ್ ಮುಗಿಯೋಹಾಗೇ ಕಾಣಲಿಲ್ಲವಲ್ಲ, .. ಸರಿ ಇರಬಹುದು''

''ಅಂಬಾನಿಯವರು ನಿಮಗೆ ಮಾತ್ರ ಅಲ್ಲ, ಅಲ್ಲಿ ನಿಂತಿದ್ದ ಎಲ್ಲರಿಗೂ ವೇವ್ ಮಾಡಿರಬಹುದು ಅಲ್ಲವೇ''

''ಅಂದರೆ ನಿಮ್ಮನ್ನು ನೋಡಿರದ ಸಾಧ್ಯತೆಯೂ ಇದೆ ಅಲ್ಲವೇ ಯುವರ್ ಹಾನರ್''

''ಟೀವಿ ನೋಡೋದು ಜಾಸ್ತಿಯಾಗಿದೆ ''

''ಬಿಡಿ. ನಿಮಗೇ ವೇವ್ ಮಾಡಿದರು ಅಂದುಕೊಳ್ಳೋಣ. ನಿಮ್ಮ ಹೆಸರು, ವಿಳಾಸ ಎಲ್ಲ ಅವರಿಗೆ ಹೇಗೆ ತಿಳಿಯುತ್ತೆ?''

‘‘ಅಯ್ಯೋ ಹುಚ್ಚಿ! ಲೀಲಾಜಾಲ !’’

‘‘ನನಗೂ ಬರುತ್ತೆ ಪದಗಳು. ಅಂತರ್ಜಾಲ! ನಾನು ಕೇಳಿದ್ದಕ್ಕೆ ಉತ್ತರ ಕೊಡಿ’’

‘‘ಅವರಿಗೆ ಇರುವ ಹಣ ಎಷ್ಟು? ಈ ದೇಶದ ದೊಡ್ಡವರು ಕೂಡ ಅವರ ಮುಂದೆ ಕೈ ಕಟ್ಟಿಕೊಂಡು ನಿಲ್ತಾರಂತೆ ಗೊತ್ತಾ?... ಅವರ ಪ್ರಭಾವ ಎಷ್ಟು ! . ಏನು ಬೇಕಾದರೂ ತಿಳಿದುಕೋತಾರೆ. ಆ ದಿನ, ಆ ಸಮಯದಲ್ಲಿ , ಚೌಪಾತಿಯ ಟ್ರಾಫಿಕ್ ಸಿಗ್ನಲ್‌ನಲ್ಲಿದ್ದಾಗ ಅವರು ಡ್ರೈವರ್ ಮಹಾಶಯನಿಗೆ ಹೇಳಿರುತ್ತಾರೆ:’’ ಏ ವಾಹನ ಚಾಲಕನೇ ! ನೋಡು ಅಲ್ಲಿ ಹಲ್ಲು ಕಿರಿಯುತ್ತಾ ವೇವ್ ಮಾಡುತ್ತಿರುವ ಆ ವ್ಯಕ್ತಿಯನ್ನು ನೋಡು . ಅವನ ಮುಖವನ್ನು ಕಾರಿನ ಕ್ಯಾಮೆರಾದಲ್ಲಿ ಸೆರೆ ಹಿಡಿ. ಆವನು ಯಾರು, ಹೆಸರೇನು, ವಿಳಾಸವೇನು ಎಂಬುದು ನನಗೆ ತಿಳಿಯಬೇಕು. ನನಗೆ ಈ ಮಾಹಿತಿ 24 ಗಂಟೆಯೊಳಗೆ ಬೇಕು. .. 24 ಏನು 12 ಗಂಟೆಯ ಒಳಗೇ ಅವರಿಗೆ ಈ ಮಾಹಿತಿ ಸಿಕ್ಕಿರುತ್ತೆ !

‘‘ಅಂತೂ ನಿಮ್ಮ ವಿಷಯ ಎಲ್ಲಾ ಅಂಬಾನೀಯವರಿಗೆ ತಿಳಿದಿದೆ !’’

‘‘ಅವತ್ತು ನಮ್ಮಿಬ್ಬರ ಮಧ್ಯೆ ಇನ್ನೊಂದು ಸಂಬಧವೂ ಹುಟ್ಟಿತು. ನಮ್ಮಿಬ್ಬರ ಮಧ್ಯೆ ಒಂದು ತರಹ ವಿದ್ಯುತ್ ಶಕ್ತಿಯ ವಿನಿಮಯವಾಯಿತು.’’

‘‘ಬ್ಯಾಟರಿ, ಜನರೇಟರ್ ಇಲ್ಲದೆಯೇ?’’

‘‘ನನ್ನ ಹೆಸರಿನ ಕಡೆಯ ಅಕ್ಷರವೂ ಅವರ ಹೆಸರಿನ ಕಡೆಯ ಅಕ್ಷರವೂ ಒಂದೇ !’’

‘‘ಓ ! ಇದು ವೇವ್ ವೇವ್ ಅಲ್ಲದೆ ಶ್ ಶ್ ಸಂಬಂಧ !’’

‘‘ಹಾಸ್ಯ ಮಾಡ್ತಿರು. ಎಲ್ಲ ದೊಡ್ಡವರು ನಮ್ಮಂತಹ ಅಭಿಮಾನಿಗಳಿಗೆ 1% ಆಹ್ವಾನಪತ್ರಿಕೆಗಳನ್ನು ಮೀಸಲಾಗಿಟ್ಟು ಕೊಂಡಿರುತ್ತಾರೆ. ಅಂದರೆ ಒಟ್ಟು ಹತ್ತು ಸಾವಿರ ಜನರನ್ನು ಕರೆದರೆ ನಮ್ಮಂತಹವರು ನೂರಾದರೂ ಇರ್ತಾರೆ. .. ನೋಡ್ತಾ ಇರು ! . ಅವರೆ ಬಂದು ನಮ್ಮಿಬ್ಬರನ್ನೂ ಆಹ್ವಾನಿಸಬಹುದು’’

‘‘ಹೌದು ಬರಬಹುದು. ಬರಬಹುದು ಕಾಯೋಣ ’’

..............................

ಒಂದು ವಾರದ ಆನಂತರ

‘‘ಏನು, ನಿಮ್ಮ ಅಂಬಾನಿ ಕಡೆಯವರು ಯಾರೂ ಬರಲೇ ಇಲ್ಲ’’

‘‘ಪಾಪ ! ನಾವೂ ಅಂತಹ ದೊಡ್ಡವರ ತೊಂದರೆಗಳನ್ನು ಅರ್ಥಮಾಡಿಕೊಳ್ಳಬೇಕು. ಮುಖೇಶ್ ನಮ್ಮ ಪರ ಮಾತಾಡಿರ್ತಾರೆ. ಅದರೆ ನೀತಾಜಿ ತಮ್ಮ ಐ.ಪಿ.ಎಲ್ ಕ್ರಿಕೆಟ್ ಟೀಮನ್ನು ನೆನಸಿಕೊಂಡು ಹರಭಜನ್ ಮರೆತು ಹೋಯ್ತಲ್ಲ ಅಂತಾರೆ. ಆಗ ನನಗೆ ಬರಬೇಕಾದ ಆಹ್ವಾನ ಅವರಿಗೆ ಹೋಗಿರುತ್ತೆ . ಏನು ಮಾಡೋದು ?’’

‘‘ ನನ್ಗೇನನ್ನಿಸ್ತುತ್ತೆ ಗೊತ್ತಾ. ಆಗ ನೀತಾಜಿ ಹೇಳಿರ್ತಾರೆ ‘‘ಈ ಸತಿ ಇಲ್ಲದಿದ್ದರೂ ನಮಗೆ ಮೊಮ್ಮಗು ಹುಟ್ಟುತ್ತಲ್ಲ, ಅದರ ನಾಮಕರಣಕ್ಕೆ ಅ ನಿಮ್ಮ ಚೌಪಾತಿಯ ಅಭಿಮಾನಿಯನ್ನು ಕರೆದೇ ಕರೆಯೋಣ.. ಅದಿರಲಿ ಯಾವತ್ತಾ ದರೂ ಚೌಪಾತೀಲಿ ನಿಮಗೆ ದೀಪಿಕಾ ಪಡುಕೋಣೆ ಸಿಕ್ಕಿದ್ದರಾ?

# ನಮ್ಮೂರು ಚಂದವೋ,
# ಈ ಊರು ಅಂದವೋ?
# ಆದರೆ ಈಗಾವುದಯ್ಯಾ ನನ್ನೂರು?

**- ಹೆಚ್. ಎನ್. ರಾಮಮೂರ್ತಿ**

ನನ್ನ ಪತ್ನಿ ಸೀತುಗೆ ಈ ಸಮಸ್ಯೆ ಇಲ್ಲ. ಬೆಳೆದಿದ್ದು ಬೆಂಗಳೂರು, ಸಂಸಾರ ಮಾಡುತ್ತಿರುವುದು ಇಂಗ್ಲೆಂಡ್. ಇಂಡಿಯಾಗೆ ಹೋದಾಗ ನನಗೆ ಕೆಲವರು ಎರಡು ಪ್ರಶ್ನೆಗಳನ್ನು ಕೇಳುತ್ತಾರೆ, 'ವಾಟ್ ಈಸ್ ಯುವರ್ ಗುಡ್ ನೇಮ್?' ಮತ್ತು ನಿಮ್ಮ ನೇಟಿವ್ ಪ್ಲೇಸ್?. ಗುಡ್ ನೇಮೂ ಬ್ಯಾಡ್ ನೇಮೂ ಗೊತ್ತು ಆದರೆ ನೇಟಿವ್ ಪ್ಲೇಸ್? ದೇವರಿಗೇ ಗೊತ್ತು. ಅದು ಯಾಕೆ ಅಂತ ಕೇಳ್ತೀರಾ?

ನೋಡಿ, ನಮ್ಮ ತಂದೆಯ ಕಡೆಯವರು ತಮಿಳುನಾಡಿನಿಂದ ಬಂದವರು ಅಂತ ಕೇಳಿದ್ದೆ, ಬಹಳ ಹಿಂದೆ ಅಂತ ಇಟ್ಕೊಳಿ. ಇವರು ವಲಸೆ ಬಂದು ಕಾವೇರಿ ನದಿಯ ದಡದಲ್ಲಿ ಇರುವ ಹನಸೋಗೆಯಲ್ಲಿ (ಹಾಸನ ಡಿಸ್ಟ್ರಿಕ್ಟ್) ಬಂದು ಸೆಟ್ಲ್ ಆದರಂತೆ. ಯಾಕೆ ಅಂತ ಕೇಳಬೇಡಿ, ನನಗೆ ಗೊತ್ತಿಲ್ಲ, ನಮ್ಮ ಮನೆ ದೇವರು ಜೋಲಾರ ಪೇಟೆ ಹತ್ತಿರ ಘಟಕಾಚಲ. ಇದು ಇರುವುದು ತಮಿಳುನಾಡಿನಲ್ಲಿ, ಅಜ್ಜಿ ಮನೆಯವರು ಮಹಾರಾಷ್ಟ್ರದವರು. ಇವರೆಲ್ಲಾ ಪೇಶ್ವೆಗಳ ಕಾಲದಲ್ಲಿ ಬಂದವರು, ಕಂದಾಯ ವಸೂಲಿ ಗಾರರು. ಕೊಣಸೋರು (ಮೈಸೂರು ಮತ್ತು ಕೊಡಗು ಗಡಿಯಲ್ಲಿ) ನೆಲಸಿದ್ದವರು. ನಮ್ಮ ಅಜ್ಜಿಗೆ 4 ಜನ ಅಣ್ಣಂದಿರು.

ಮನೆಯಲ್ಲಿ ಅನುಕೂಲವಂತರು ಬೇಕಾದಷ್ಟು ತೋಟ ಗದ್ದೆ ಇತ್ತು. ಒಬ್ಬ ಅಣ್ಣ ರಾಮರಾಯರು, ಮನೆ ಎದುರಲ್ಲೇ ಇದ್ದ ಪ್ರಾಥಮಿಕ ಶಾಲೆಯಲ್ಲಿ ಓದಿ, ಅಲ್ಲೇ ಮೇಷ್ಟ್ರು ಆಗಿ ರಿಟೈರ್ ಆದರು. ಸಾಯಂಕಾಲ ಅವರು ಜಗಲಿ ಮೇಲೆ ಕೂತು ಹಳ್ಳಿಯವರ ಕಷ್ಟಗಳನ್ನ ಮತ್ತು ಜಗಳಗಳನ್ನು ಪರಿಹರಿಸುತ್ತಿದರು. ಇದು ಸುಮಾರು 1920 ರಲ್ಲಿ, ಇನ್ನೊಬ್ಬ ಅಣ್ಣ ನಾರಾಯಣರಾಯರು ಬಹಳ ಮುಂದುವರೆದರು. 1925 ರಲ್ಲಿ ಮೈಸೂರು ರಾಜ್ಯದ ಎಜುಕೇಶನ್ ಡಿಪಾರ್ಟ್‌ಮೆಂಟ್ ನಲ್ಲಿ ಡೈರೆಕ್ಟರ್ ಆಗಿದ್ದರು. ಇವರೇ ನಮ್ಮ ತಂದೆಗೆ ಕೆಲಸ ಕೊಡಿಸಿದ್ದರು.  ನೆಪೋಟಿಸಂ ಅಂದಿರಾ, ಹೌದು ಇದು ಬಹಳ ಹಳೇ ಪದ್ಧತಿ ಅಲ್ಲವೇ?

ನಾನು ಹುಟ್ಟಿದ್ದು ಕಾವೇರಿ ದಡದಲ್ಲಿರುವ ರಾಮನಾಥಪುರ, ನಮ್ಮ ತಾಯಿಯ ಊರು. ಇಲ್ಲಿ ನಮ್ಮ ಅಜ್ಜಿ  ಮತ್ತು ಮುತ್ತಜ್ಜಿ ಇದ್ದರು. ಇವರ ಮನೆಗೆ ಪ್ರತಿ ಬೇಸಿಗೆ ರಜಕ್ಕೆ ಹೋಗುತ್ತಿದ್ದೆ. ನಮ್ಮ ಅಜ್ಜಿ ಅಡ್ರೆಸ್ ಬಹಳ ಸಿಂಪಲ್: ''ಅರಕಲಗೂಡು ತಾಲೋಕು ರಾಮನಾಥಪುರದ ಓಣಿ ನಾಗೂ ಬಾಯಿ ಅವರಿಗೆ.''

ಇವರ ಮನೆ ಸುಬ್ರಹ್ಮಣ್ಯ ದೇವಸ್ಥಾನದ ಎದುರು ಓಣಿ. ಸಾಯಂಕಾಲ ನಮಗೆಲ್ಲಾ ಮುತ್ತಜ್ಜಿ ತುಳಸಿಬಾಯಿ ನದಿ ದಡದಲ್ಲಿ ಕಥೆಗಳ ಮಧ್ಯೆ ಕೈತುತ್ತು ಹಾಕುತ್ತಿದ್ದರು. ಈ ನದಿಯಲ್ಲಿ ದೊಡ್ಡ ದೊಡ್ಡ ಮೀನುಗಳು (ಇನ್ನೂ ಇದೆ). ಜೇಬಿನಲ್ಲಿ ಕಡಲೆಪುರಿ ತುಂಬಿಕೊಂಡು

ಮೀನುಗಳಿಗೆ ಹಾಕುತ್ತಿದ್ದೆವು.

**''ಎಷ್ಟು ಎತ್ತು ಕಟ್ಟಿದ್ದಾರೆ?''**

ಅರಕಲ ಗೂಡಿನಿಂದ ಮೊದಲನೇ ಬಸ್ ಬಂದಾಗ ನಮ್ಮ ಮುತ್ತಜ್ಜಿಯ ತಾಯಿನ ಬಸ್ನಲ್ಲಿ ಕರೆಕೊಂಡು ಹೋದರು. ಪಾಪ ಈ ಮುದುಕಿಗೆ ಸರಿಯಾಗಿ ಕಣ್ಣು ಕಾಣುತ್ತಿರಲಿಲ್ಲ. ಬಸ್ ಬಹಳ ಸ್ಪೀಡಿನಲ್ಲಿ ಹೋಗುತ್ತಾ ಇತ್ತು. ಆಶ್ಚರ್ಯದಿಂದ ಎಷ್ಟು ಎತ್ತು ಕಟ್ಟಿದಾರೆ ಈ ಗಾಡಿಗೆ ಅಂತ ಕೇಳಿದ್ದರಂತೆ!

**ಮೇಷ್ಟ್ರು**

ನಂಜನಗೂಡಿನ ದೇವಸ್ಥಾನ ನಮ್ಮ ತಂದೆ ಹುಟ್ಟಿದ್ದು ನಂಜನಗೂಡಿನಲ್ಲಿ. ಅಲ್ಲಿ ಅವರ ತಂದೆ ಕೆಲಸಕ್ಕೆ ಬಂದವರು ಅಂತ ಕಾಣುತ್ತೆ, ಸರಿಯಾಗಿ ಗೊತ್ತಿಲ್ಲ. ನಾನು ಈ ಊರಿನ ಹೈಸ್ಕೂಲಿನಲ್ಲಿ ಓದಿದೆ. ನಮ್ಮ ಹೆಡ್ ಮಾಸ್ಟರ ಹೆಸರು 'ತಾಪತ್ರಯ ಅಯ್ಯಂಗಾರ್', ಇವರ ನಿಜವಾದ ಹೆಸರು ಮರೆತುಹೋಗಿದೆ. ಬಹಳ ಸ್ಟ್ರಿಕ್ಟ್ ಮನುಷ್ಯ, ಲೇಟಾಗಿ ಬಂದರೆ ಏಟು. ಇವರಿಗೆ ಈ ಅಡ್ಡ ಹೆಸರು ಹೇಗೆ ಬಂತು ಅನ್ನುವುದು ಸ್ವಲ್ಪ ತಮಾಷಿಯಾಗಿದೆ. ಬಾಲ್ಯದಲ್ಲಿ ಇವರು ಚೆನ್ನಾಗಿ ಫುಟ್ ಬಾಲ್ ಆಡುತ್ತಿದ್ದರಂತೆ. ಒಂದು ಮ್ಯಾಚಿಗೆ ಬಂದಿದ್ದು ಲೇಟ ಆಯಿತು ಏನೋ ಮನೇಲಿ ತಾಪತ್ರಯ ಇತ್ತು ಅದಕ್ಕೆ ಲೇಟ್ ಆಯಿತು ಅಂದರಂತೆ . ಅವತ್ತಿಂದ ಅವರ ಹೆಸರು ಹೀಗೆ ನಿಂತುಹೋಯಿತಂತೆ.

ನಮ್ಮ ತಂದೆ ಮಿಡ್ಲ್ ಸ್ಕೂಲ್ ಹೆಡ್ ಮಾಸ್ಟರ್ ಕೋಲಾರ ಡಿಸ್ಟ್ರಿಕ್ಟ್ ನ ಕೈವಾರ, ಚಿಂತಾಮಣಿ, ಕಾಗತಿ ಮುಂತಾದ ಕಡೆ ಇದ್ದು ಕೊನೆಗೆ ನಾನು ಬೆಂಗಳೂರಿಗೆ ಕೆಲಸಕ್ಕೆ ಬಂದೆ. ನೀವು ಕೈವಾರದ ಹೆಸರು ಕೇಳಿರಬಹುದು. ಪೂರ್ವ ಕಾಲದ ಹೆಸರು ಏಕಚಕ್ರ ನಗರ, ಮಹಾಭಾರತದಲ್ಲಿ, ಇಲ್ಲೇ ಭೀಮ ಬಕಾಸುರನ್ನು ಕೊಂದಿದ್ದು ಅಂತ ಪ್ರತೀತಿ.

ಈ ದೇಶಕ್ಕೆ ಬರುವುದು ನನ್ನ ಕನಸಿನಲ್ಲೂ ಬಂದಿರಲಿಲ್ಲ. ಆದರೆ ನನ್ನ ಸ್ನೇಹಿತ ಹೇಳಿದ ಎಂಪ್ಲೋಯ್‌ಮೆಂಟ್ ವೋಚರ್ ಗೆ ಅಪ್ಲೈ ಮಾಡು ಅಂದ. ಮಾಡಿ ಆರು ತಿಂಗಳಿಗೆ ಪೋಸ್ಟ್ ನಲ್ಲಿ ಆನ್ ಹರ್ ಮೆಜಸ್ಟೀಸ್ ಸರ್ವಿಸ್ ಕಾಗದ ಬಂತು ಇಂಗ್ಲೆಂಡಿಗೆ ಹೋಗುವುದಕ್ಕೆ. ಮನೆಯಲ್ಲಿ ಹೇಳಿದರೆ ನಮ್ಮಜ್ಜಿ ನನಗೆ ಹುಚ್ಚು ಅಂತ ಹೇಳಿದರು. ಆದರೆ ನಮ್ಮ ತಂದೆ ಹೋಗು, ಆದರೆ 5 ವರ್ಷದಲ್ಲಿ ವಾಪಸ್ ಬಂದು ಬಿಡು ಅಂದರು. ಇದು ಆಗಿ ಈ ತಿಂಗಳಿಗೆ 50 ವರ್ಷ ಆಯಿತು. ನಾನು ಇನ್ನೂ ಇಲ್ಲೇ ಇದ್ದೀನಿ.

ಹೇಗೋ ಮಾಡಿ ಏರ್ ಇಂಡಿಯಾ ಟಿಕೆಟ್ ಆಯ್ತು. ಆಗ ಪಾಕಿಸ್ತಾನದ ಮೇಲೆ ಯುದ್ಧ ಶುರು ಆಯಿತು. ಬೊಂಬಾಯಿಗೆ ಬಂದರೆ ಅಲ್ಲಿ ಬ್ಲಾಕ್ ಔಟ್. ಏರ್‌ಪೋರ್ಟ್ ತಲುಪಿದಾಗಲೂ ಹೊರಡುವುದು ಗ್ಯಾರಂಟಿ ಇರಲಿಲ್ಲ .ಆಗ ಕೇವಲ Rs.50 (£3) ಮಾತ್ರ ಎಕ್ಸ್‌ಚೇಂಜ್ ಕೊಡುತ್ತಿದ್ದರು. ಇದನ್ನ ಜೇಬಿನಲ್ಲಿ ಹಾಕಿ ಇಲ್ಲಿಗೆ ಬಂದೆ 1965ರಲ್ಲಿ.

ಲಂಡನ್ನಿಗೆ ಬಂದು ಎಸೆಕ್ಸ್, ಕೇಂಬ್ರಿಡ್ಜ್‌ಶೈರ್ ನಲ್ಲಿ ವಾಸಮಾಡಿ ಈಗ ಮೂವತ್ತು ವರ್ಷಗಳಿಂದ ಬೇಸಿಂಗಸ್ಟೋಕ್‌ನಲ್ಲಿ ವಾಸಿಸುತ್ತಿದ್ದೇನೆ. ಈಗ ನೀವೇ ಹೇಳಿ ನನ್ನ ನೇಟಿವ್ ಪ್ಲೇಸ್' ಯಾವುದು? ಅಂತ. ನೀನು ಜಿಪ್ಸೀ ಅಂತ ನಮ್ಮ ಮಕ್ಕಳು ಹಾಸ್ಯ ಮಾಡುತ್ತಾರೆ! ಈ ವಿಚಾರನೆಲ್ಲಾ ನಮ್ಮ ಇಬ್ಬರು ಮೊಮ್ಮಕ್ಕಳಿಗೆ ಹೇಳಬೇಕು!

# ಇಸ್ಪೀಟಾಟವೂ ಭಾಷಾವಿಜ್ಞಾನವೂ

- ಕೆ.ವಿ. ತಿರುಮಲೇಶ್

ಇಸ್ಟಾರ್ಟ್, ಇಸ್ಪೂನ್, ಇಸ್ಮೈಲ್ ತರಹ ಇಸಪೀಟ್ ಆಯಿತೆ?

ಇಸ್ಪೀಟಾಟಕ್ಕೂ ಭಾಷಾವಿಜ್ಞಾನಕ್ಕೂ ಏನಾದರೂ ಸಂಬಂಧವಿದೆಯೇ? ಇದೆ. ಅದನ್ನೇ ನಾನಿಲ್ಲಿ ಹೇಳಲು ಹೊರಟಿರುವುದು.

ನಾನು ಚಿಕ್ಕವನಿದ್ದಾಗ ನಮ್ಮೂರಲ್ಲಿ ಬ್ರಾಹ್ಮಣರ ಮದುವೆ ಸಮಾರಂಭಗಳಲ್ಲಿ ಇಸ್ಪೀಟಾಟ ಪ್ರಚಾರದಲ್ಲಿತ್ತು. ಅತಿಥಿಗಳಾಗಿ ಅಲ್ಲಿ ಸೇರಿದ ಗಂಡಸರು ಮನರಂಜನೆಗಾಗಿ ಆಡುತ್ತಿದ್ದ ಆಟ ಅದು. ಅವರು ದುಡ್ಡಿಟ್ಟು ಆಡುತ್ತಿರಲಿಲ್ಲ, ಇಸ್ಪೀಟಾಟವನ್ನು ದುಡ್ಡಿಗೆ ಆಡುವುದು ಕೆಟ್ಟದು ಎನ್ನುವುದು ಭಾವನೆಯಾಗಿತ್ತು. ಇಪ್ಪತ್ತೆಂಟು ಎಂಬ ಆಟ ಜನಪ್ರಿಯವಾಗಿತ್ತು.

ಪ್ರಾಯಕ್ಕೆ ಬರುತ್ತಿದ್ದಂತೆ ನಾನೂ ಈ ಆಟವನ್ನು ಕಲಿತುಕೊಂಡೆ. ಈ ಆಟದ ಪರಿಭಾಷೆ ತುಸು ವಿಚಿತ್ರವಾಗಿತ್ತು. ಸ್ಪೇಡು (ಇಸ್ಪೀಟು'), ಕ್ಲಾವರ್ (ಕಳಾವರ್), ಆಟೀನು, ಡೈಮನ್ (ಡಯಮಂಡ್) ಎಂಬ ನಾಲ್ಕು ಜಾತಿಯ ಎಲೆಗಳಿದ್ದುವು. ಇವಕ್ಕೆ ಇಂಗ್ಲಿಷಿನಲ್ಲಿ ಸ್ಪೇಡ್, ಕ್ಲಬ್, ಹಾರ್ಟ್, ಮತ್ತು ಡಯಮಂಡ್ ಎಂದು ಕರೆಯುತ್ತಾರೆ ಎನ್ನುವುದು ಮುಂದೆ ನನಗೆ ಗೊತ್ತಾಯಿತು. ರಾಜ, ರಾಣಿ, ಗುಲಾಮ (ಜ್ಯಾಕ್) ಇದ್ದರು; ಜೋಕರ್ ಇತ್ತು. (ಇಪ್ಪತ್ತೆಂಟರಲ್ಲಿ ಜೋಕರಿಗೆ ಏನೂ ಪಾತ್ರವಿರಲಿಲ್ಲ.) ಇವಕ್ಕೆಲ್ಲ ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರುಗಳಿವೆ ಎಂದುಕೊಳ್ಳುತ್ತೇನೆ.

ಈ ಹೆಸರುಗಳು ಹೇಗೆ ಕನ್ನಡೀಕರಣಗೊಂಡುವು ಎಂದು ನೋಡುವುದು ಕುತೂಹಲದ ಸಂಗತಿ. ಇವೆಲ್ಲವೂ ಚಿತ್ರಗಳಿಗೆ ಸಂಬಂಧಿಸಿದ ಹೆಸರುಗಳು. ಉದಾಹರಣೆಗೆ, ಸ್ಪೇಡ್ ಎನ್ನುವುದು ಹಾರೆ (ಕುಟ್ಟಾರೆ). (ವಾಸ್ತವದಲ್ಲಿ ಅದು ಅಶ್ವತ್ಥದ ಎಲೆಯನ್ನು ಹೆಚ್ಚು ಹೋಲುವುದು!) ಇಂಗ್ಲಿಷಿನ ಸ್ಪೇಡನ್ನ ಕನ್ನಡದಲ್ಲಿ ತತ್ಸಮವಾಗಿ ಸ್ಪೇಡು ಎಂದೇ ಕರೆಯುವುದರಲ್ಲಿ ಹೆಚ್ಚಿನ ಸ್ವಾರಸ್ಯವಿಲ್ಲ.

ಆದರೆ ಕ್ಲಬ್ ಹೇಗೆ ಕ್ಲಾವರ್ ಆಯಿತು? ಇದರ ಚಿತ್ರವನ್ನು ನೋಡಿದರೆ ಇದು ಮೂರೆಲೆ ಸಸ್ಯದಂತೆ ತೋರುವುದಿಲ್ಲವೇ? ಇಂಗ್ಲಿಷಿನಲ್ಲಿ ಈ ಸಸ್ಯಕ್ಕೆ ಕ್ಲೋವ್ ಎಂದು ಕರೆಯುತ್ತಾರೆ. ಬಹುಶಃ ಕ್ಲೋವರಿನಿಂದ ಕ್ಲಾರ್ವ ಬಂದಿರಬಹುದು ಎನ್ನುವುದು ನನ್ನ ಊಹೆ. ಕ್ಲಾವರಿನಿಂದ ಕಳಾವರ್! ಹಾರ್ಟಿನಿಂದ ಆಟೀನು (ಮಲೆಯಾಳಿಗಳು ಆಡ್ಡನ್' ಎನ್ನುತ್ತಾರೆ) ಹೇಗೆ ಬಂತೋ ಆಶ್ಚರ್ಯವಾಗುತ್ತದೆ.

ಇನ್ನು ಡಯಮಂಡ್ ಎಂದರೆ ವಜ್ರ; ಡಯಮಂಡಿನ ತದ್ಭವ ಡೈಮನ್. ಏಸ್ ಎನ್ನುವುದನ್ನು ಎಕ್ಕ ಅನ್ನುತ್ತಾರೆ (ಏಕದ ಒಂದು ರೂಪ). ಒಂಬತ್ತು ನಂಬರಿನ ಚೀಟಿಗೆ ನೈಲಾ (ಕೊನೆಯ ಸ್ವರ ಅನುನಾಸಿಕ) ಎನ್ನುವುದೂ ಇದೆ; ಇದು ಇಂಗ್ಲಿಷಿನ ನೈನ್ ಪದದಿಂದ ಬಂದುದು. ಅದೆಲ್ಲಾ ಆಯ್ತು, ಆದರೆ ತುರುಫ್ ಅಥವಾ ತುರುಪು ಎನ್ನುವ ಒಂದು ವಿಚಿತ್ರ ಪದವಿದೆಯಲ್ಲ, ಅದು ಹೇಗೆ ಕನ್ನಡಕ್ಕೆ ಬಂತು?

ಇಂಗ್ಲಿಷಿನಲ್ಲಿ ಅದು ಟ್ರಂಪ್. ಟ್ರಂಪಿನಿಂದ ತುರುಫ್ ಬರುವುದು ದುರ್ಗಮವೇ ಸರಿ. ತುರುಪಿಗೆ ಕಿಟೆಲರು ಎ ಟ್ರೂಪ್ ಎಂಬ ಮೂಲವನ್ನು ಕೊಡುತ್ತಾರೆ. ಎಂದರೆ ದಂಡು', ಬಲ' ಎಂಬಿತ್ಯಾದಿ ಅರ್ಥಗಳನ್ನು ಊಹಿಸಿಕೊಳ್ಳಬಹುದು. ಆಟಗಾರ ಒಂದು ಎಲೆಯನ್ನು ತುರುಫ್ ಆಗಿ ಆರಿಸಿಕೊಂಡರೆ ಅದರ ಇಡೀ ಜಾತಿಗೇ ಬಲ ಬಂದು ಬಿಡುತ್ತದೆ; ಉಳಿದ ಎದುರಾಳಿಗಳನ್ನು - ಅವು ಎಷ್ಟೇ ಪ್ರಬಲವಾಗಿದ್ದರೂ - ಅದು ಕಡಿದು ಹಾಕಬಲ್ಲುದು.

ಟ್ರೂಪಿನಿಂದ ತುರುಪು ತದ್ಭವಿಸುವುದು, ಆದರಿಂದ, ಒತ್ತಿಗೋಸ್ಕರ ತುರುಫ್

ಮೂಡಿಬರುವುದು ಸಹಜವೆನಿಸುತ್ತದೆ. ಆದರೆ ಈ ಟ್ರೂಪಿನ ಕಲ್ಪನೆ ಹೇಗೆ ಬಂತು ಎನ್ನುವುದು ತಿಳಿಯದು. ಬಹುಶಃ ಟ್ರಂಪ್ ಎಂಬುದನ್ನು ಟ್ರೂಪ್ ಎಂದು ತಪ್ಪಾಗಿ ಕೇಳಿಸಿಕೊಂಡುದರಿಂದ ಇರಬಹುದು.

ಈಗ ಇಸ್ಪೀಟಾಟಕ್ಕೆ ಬರೋಣ. ಈ ಆಟಕ್ಕೆ ಇಸ್ಪೀಟು ಎಂಬ ಹೆಸರು ಹೇಗೆ ಬಂತು? ಈ ಬಗ್ಗೆ ನಾನು ಆಗಿನ ಕಾಲದಲ್ಲಿ ಯೋಚಿಸಿದವನೇ ಅಲ್ಲ. ಬಳಕೆದಾರರಿಗೆ ವಸ್ತು ಮುಖ್ಯವೇ ಹೊರತು ಅದರ ಹೆಸರಲ್ಲ. ಆದರೆ ನಾನು ಭಾಷೆಯಲ್ಲಿ ಹೆಚ್ಚಿನ ಆಸಕ್ತಿ ವಹಿಸಿದಾಗ ಗೊತ್ತಾಯಿತು, ಇಸ್ಪೀಟು ಸ್ಪೇಡಿನದೇ ತದ್ಭವ ಎನ್ನುವುದು! ಇಲ್ಲಿ ಪದಾರಂಭದಲ್ಲಿ ಇಕಾರ ಬರುವುದು ಉಚ್ಚಾರಣೆಯ ಸೌಲಭ್ಯದ ದೃಷ್ಟಿಯಿಂದ. ಬರೇ ಸ್ಪೇಡ್ ಎನ್ನುವಾಗ ಆರಂಭದಲ್ಲಿ ಸಕಾರಕ್ಕೆ ಪಕಾರ ಸೇರಿ ಒಂದು ಸಂಯುಕ್ತಾಕ್ಷರ ಸೃಷ್ಟಿಯಾಗುತ್ತದೆ. ಅಭ್ಯಾಸವಿಲ್ಲದವರಿಗೆ ಇದು ಉಚ್ಚಾರಣೆಗೆ ತ್ರಾಸ (ಕೆಲವರ ಬಾಯಲ್ಲಿ ಇತ್ರಾಸ' ಅಥವಾ ಅತ್ರಾಸ!') ಕೊಡುತ್ತದೆ. ಪದಾದಿಯಲ್ಲಿ ಇಕಾರ ಸೇರಿಸುವುದರ ಮೂಲಕ ಈ ಸಮಸ್ಯೆಯನ್ನು ಪರಿಹರಿಸಲಾಗುತ್ತದೆ: ಇಸ್+ಪೀಟ್ ಎನ್ನುವುದು ಹೆಚ್ಚು ಸುಲಭ. ಸಕಾರ ಮೊದಲ ಭಾಗಕ್ಕೆ ಪಕಾರ ಎರಡನೆಯ ಭಾಗಕ್ಕೆ ಹಂಚಿಹೋಗುತ್ತವೆ. ಇದನ್ನು ರೂಢಿಸಿಕೊಂಡವರು ಗ್ರಾಮೀಣ ಜನರಿರಬೇಕು. ಅವರಲ್ಲಿ ಹಲವರು ಸ್ಕೂಲನ್ನು ಇಸ್ಕೂಲ್' ಎನ್ನುವುದೂ ಇದೇ ಕಾರಣಕ್ಕೆ. ಅವರ ಬಾಯಲ್ಲಿ ಇನ್ನೂ ಅನೇಕ ಇಂಗ್ಲಿಷ್ ಪದಗಳು ಹೀಗೆ ಜನರ ಬಾಯಲ್ಲಿ ರೂಪಾಂತರಗೊಳ್ಳುತ್ತವೆ. ಇಸ್ಟಾರ್ಟ್ (ಸ್ಟಾರ್ಟ್), ಇಸ್ಪೂನ್ (ಸ್ಪೂನ್), ಇಸ್ಮೈಲ್ (ಸ್ಮೈಲ್) ಮುಂತಾಗಿ.

ಇದರ ಹಿಂದಿರುವ ಪ್ರೇರಣೆಯೆಂದರೆ ಕನ್ನಡದ ದ್ರಾವಿಡ ಮೂಲದ ಜಾಯಮಾನ. ಕೆಲವು ಅಚ್ಚಗನ್ನಡ ಪ್ರತಿಪಾದಕರು ಅಂದುಕೊಂಡಿದ್ದಾರೆ, ಮಹಾಪ್ರಾಣ ಅಕ್ಷರಗಳನ್ನು ಕಿತ್ತುಹಾಕುವುದರಿಂದ ನಾವು ಅಚ್ಚಗನ್ನಡವನ್ನು ತಲಪುತ್ತೇವೆ ಎಂದು. ಅಚ್ಚಗನ್ನಡದಲ್ಲಿ ಪದಾದಿಯಲ್ಲಿ ಸಂಯುಕ್ತಾಕ್ಷರಗಳೇ (ಸಂಯುಕ್ತ ವ್ಯಂಜನಗಳು) ಇರಲಿಲ್ಲ ಎನ್ನುವುದನ್ನು ಅವರು ಮರೆತುಬಿಟ್ಟಿರುತ್ತಾರೆ. ಇಂದು ಹೆಚ್ಚಿನವರೂ ಬಳಸುವ ಪ್ರಿಯ, ಪ್ರೀತಿ, ಪ್ರಕಾಶ, ತ್ವರೆ, ತ್ಯಾಗ, ಕ್ರಯ, ಗ್ರಹ, ಜ್ಞಾನ ಎಲ್ಲವೂ ಸಂಸ್ಕೃತದಿಂದ ಬಂದುವು. ಪದಾದಿಯಲ್ಲಿ ಸಂಯುಕ್ತಾಕ್ಷರವಿದ್ದಲ್ಲಿ ಅದು ಅಚ್ಚಗನ್ನಡ ಮೂಲದ್ದು ಅಲ್ಲ ಎಂದು ಹೇಳಬಹುದು.

ಅಂಥ ಪದಗಳು ಒಂದೋ ಸಂಸ್ಕೃತದಿಂದ ಇಲ್ಲವೇ ಇಂಗ್ಲಿಷಿನಿಂದ ಬಂದವಾಗಿರುತ್ತವೆ. ಅಕ್ಷರವಂತರಲ್ಲದ ಗ್ರಾಮೀಣ ಜನರಲ್ಲಿ ಇನ್ನೂ ಅಚ್ಚಗನ್ನಡದ ಮೂಲ ಜಾಯಮಾನ ಇರುವುದರಿಂದ ಅವರು ಪದಾದಿಗೆ ಇಕಾರವನ್ನು ಸೇರಿಸಿ ಸಂಯುಕ್ತಾಕ್ಷರವನ್ನು ಒಡೆದು ಸರಳೀಕರಿಸಿ ಅಂಥ ಪದಗಳನ್ನು ಬಳಸುವುದನ್ನು ಕಾಣುತ್ತೇವೆ. (ಆದರೆ ಇಲ್ಲಿ ಒಂದು ಅಪವಾದವಿದೆ. ಕೆಲವೊಮ್ಮೆ ಮಾತಿನ ಶೈಲಿಯಲ್ಲಿ ಪೇಟೆ ಪ್ಯಾಟೆಯಾಗುತ್ತದೆ, ಬೇಡ ಬ್ಯಾಡವಾಗುತ್ತದೆ, ಬೇನೆ ಬ್ಯಾನೆಯಾಗುತ್ತದೆ. ಇದಕ್ಕೆ ಕಾರಣ ಸ್ವರಾದೇಶ: ಏ ಬದಲಿಗೆ ಆ ಬರುತ್ತಲೂ ಯಕಾರ ಆಗಮಿಸಿ ಸಂಯುಕ್ತಾಕ್ಷರ ಉಂಟಾಗುತ್ತದೆ. ಆದರೆ ಯಕಾರವೊಂದು ಅರ್ಧ ಸ್ವರವಾದ್ದರಿಂದ, ಇದು ಇತರ ರೀತಿಯ ಸಂಯುಕ್ತಾಕ್ಷರದಂತೆ ಇಲ್ಲ.)

ಈ ವಿದ್ಯಮಾನ ಕೇವಲ ಕನ್ನಡಕ್ಕೆ ಸೀಮಿತವಾದುದೂ ಅಲ್ಲ. ಪದಾದಿಯಲ್ಲಿ ಸಂಯುಕ್ತಾಕ್ಷರಗಳಿಲ್ಲದ ಯಾವುದೇ ಭಾಷೆಯನ್ನಾಡುವ ಜನ ಪದಾದಿಯಲ್ಲಿ ಸಂಯುಕ್ತಾಕ್ಷರಗಳಿರುವ ಪದಗಳಿಗೆ ತೆರೆದುಕೊಂಡಾಗಲೆಲ್ಲ ಇಂಥ ಸಾಧ್ಯತೆಯಿದೆ. ಅರೇಬಿಕ್ ಮತ್ತು ಜಪಾನೀ ಭಾಷೆಗಳು ಅಂಥವು.

ಆದರೆ ಇಸ್ಪೀಟಾಟಕ್ಕೆ ಆ ಹೆಸರೇ ಯಾಕೆ ಬಂತು ಎಂಬ ಪ್ರಶ್ನೆ ಉಳಿಯುತ್ತದೆ. ಯಾಕೆಂದರೆ ಸ್ಪೇಡಿನ ಚಿಹ್ನೆ ಇಡೀ ಆಟಕ್ಕೆ ಸಂಕೇತವೂ ಆಗಿದೆ. ಆದ್ದರಿಂದಲೇ ಇಸ್ಪೀಟ್ ಪ್ಯಾಕುಗಳ ಮೇಲೆ ಸ್ಪೇಡಿನ ಚಿತ್ರ ತಪ್ಪದೆ ಮುದ್ರಿತವಾಗಿರುವುದು.

# ಪ್ರಭುಶಂಕರರ ಆಯ್ದ ಕೆಲವು ನಗೆ ಮುತ್ತುಗಳು

ಮದರ್ ತೆರೇಸಾ ಮುಖದಲ್ಲಿ ಎಂಥಾ ನಗುವಿತ್ತು. ಮಗುವನ್ನು ಎತ್ತಿಕೊಳ್ಳುವಾಗ, ಅನಾಥರನ್ನು ಸಂರಕ್ಷಿಸುವಾಗ, ಬಡಬಗ್ಗರಲ್ಲಿ ಮಾತಾಡುವಾಗ ಆಕೆ ಸೂಸುತ್ತಿದ್ದ ನಗೆ ಎಂಥದು. ಅವರ ಆಶ್ರಮ ಇದ್ದುದು ಗ್ವಾಟೆಮಾಲದ ಅಂಗಡಿ ಬೀದಿಯಲ್ಲಿ. ಅಲ್ಲಿನ ಮೇಯರ್ ಒಂದು ಸಾರಿ ಈ ಅಂಗಡಿ ಬೀದಿ ತುಂಬಾ ಜನನಿಬಿಡ. ಅದಕ್ಕೆ ನಿಮಗೆ ವಿಶಾಲವಾದ ಜಾಗ ಕೊಡುತ್ತೇನೆ. ಅಲ್ಲಿ ನಿಮ್ಮ ಆಶ್ರಮ ಕಟ್ಟಿಕೊಳ್ಳಬಹುದು ಎಂದರೆ ತೆರೇಸಾ ಇದು ಅಂಗಡಿ ಬೀದಿ, ನಮ್ಮದೂ ಅಂಗಡಿಯೇ ನಾವು ಇಲ್ಲಿ ಪ್ರೀತಿ, ಪ್ರೇಮ, ಶಾಂತಿ, ನೆಮ್ಮದಿ, ಸುಖ ಮಾರುತ್ತೇವೆ ಎಂದರು

ಸ್ಕಾಟ್‌ಲ್ಯಾಂಡಿನ ಜನ ತುಂಬಾ ಜಿಪುಣರಂತೆ. ಒಂದು ಸಾರಿ ಒಬ್ಬ ಜಿಪುಣನಿಗೆ ವಿಮಾನದಲ್ಲಿ ಹಾರಾಡಬೇಕು ಅಂತ ಆಸೆಯಾಯಿತಂತೆ. ಆದರೆ ದುಡ್ಡು ಖರ್ಚಾಗುತ್ತಲ್ಲ ಅಂತ ಯೋಚನೆ. ಒಬ್ಬ ಸ್ಕಾಚ್‌ಮೆನ್ ತನ್ನ ಕಲಿಕೆಯ ವಿಮಾನದಲ್ಲಿ ದಿನಾ ಹಾರಾಟ ನಡೆಸುತ್ತಿದ್ದ. ಅವನ ಬಳಿ ಜಿಪುಣ ತನ್ನ ಆಸೆಯನ್ನು ತೋಡಿಕೊಂಡ. ಅವನು ನೋಡಪ್ಪಾ ನನ್ನದು ಕಲಿಕೆಯ ವಿಮಾನ ಹುಷಾರಾಗಿರಬೇಕು. ನಾಳೆ ಬೆಳಗ್ಗೆ ಬಾ ಅಂದ. ಜಿಪುಣನಿಗೆ ಖುಷಿಯಾಯಿತು. ಮೆತ್ತಗೆ ನನ್ನ ಹೆಂಡತಿಯನ್ನೂ ಕರೆತರಲೇ ಅಂದ. ಸ್ಕಾಚ್‌ಮೆನ್ ಕರ್ಕೊಂಡು ಬಾ ಅಂದ. ಮರುದಿನ ಜಿಪುಣ ದಂಪತಿಗಳು ವಿಮಾನ ಹಾರಾಟಕ್ಕೆ ಸಿದ್ಧವಾದರು. ಹಾರಾಟಕ್ಕೆ ಮುನ್ನ ಸ್ಕಾಚ್‌ಮೆನ್ ನೋಡಪ್ಪಾ ನನ್ನದು ಕಲಿಕೆಯ ವಿಮಾನ. ಅದು ಹಾರುವಾಗ ತುಂಬಾ ಜೋಲಾಡುತ್ತದೆ, ವಾಲಾಡುತ್ತದೆ, ಮೇಲೆ ಹೋಗಿ ಸರಕ್ಕನೆ ಕೆಳಗಿಳಿಯುತ್ತದೆ. ಜೋಲಿ ಹೊಡೆಯುತ್ತದೆ. ಆಗ ನೀನಾಗಲೀ ನಿನ್ನ ಹೆಂಡತಿಯಾಗಲೀ ಕಿರುಚಿ ಗಲಾಟೆ ಮಾಡಬಾರದು. ಹಾಗೆ ಮಾಡಿದರೆ ೨೫ ಪೌಂಡ್ ದಂಡ ಕೊಡಬೇಕಾಗುತ್ತದೆ ಅಂದ. ಜಿಪುಣ ಒಪ್ಪಿದ. ಸುಖವಾದ ವಿಮಾನ ಹಾರಾಟ ನಡೆಯಿತು. ಸ್ಕಾಚ್‌ಮೆನ್ ಪರವಾಗಿಲ್ಲಯ್ಯ ಬಹಳ ಧೈರ್ಯವಾಗಿ ಕೂತಿದ್ದೆ ಎಂದ. ಅದಕ್ಕೆ ಜಿಪುಣ ಧೈರ್ಯ ಅಲ್ಲ ಸ್ವಾಮಿ ಭಯ. ಸ್ವಲ್ಪ ಚೀರಿದರೂ ೨೫ ಪೌಂಡ್ ದಂಡ ಕೊಡಬೇಕಾಗುತ್ತದೆ ಎಂದಿದ್ದರಲ್ಲ ಅದಕ್ಕೆ ನನ್ನ ಹೆಂಡತಿ ವಿಮಾನದಿಂದ ಬಿದ್ದಾಗಲೂ ನಾನು ಬಾಯಿ ಮುಚ್ಚಿಕೊಂಡಿದ್ದೆ ಎಂದ. ಜಿಪುಣ ತನ ಹೀಗೀ ಇರಬಹುದೇ

ಕುತೂಹಲ ಎನ್ನೋದು ಮಹಿಳೆಯರಲ್ಲಿ ಹೆಚ್ಚು ಎನ್ನುತ್ತಾರೆ ಪ್ರಭುಶಂಕರರು. ಅದಕ್ಕೆ ಒಂದು ಉದಾಹರಣೆಯನ್ನೂ ಕೊಡುತ್ತಾರೆ. ಒಮ್ಮೆ ಅಮೆರಿಕನ್ ಮಹಿಳೆಯೊಬ್ಬರು ಮೃಗಾಲಯಕ್ಕೆ ಹೋಗಿದ್ದರು. ಅಲ್ಲಿ ಒಂದು ನೀರಾನೆಯನ್ನು (ಹಿಪ್ಪೋಪಟಮಸ್) ತೀವ್ರ ಕುತೂಹಲದಿಂದ ನೋಡುತ್ತಾ ನಿಂತಿದ್ದರು. ಅವರಿಗೆ ಎಷ್ಟೊಂದು ಅಚ್ಚರಿಯಾಗಿತ್ತು ಎಂದರೆ ಅಲ್ಲಿದ್ದ ಕಾವಲುಗಾರನನ್ನು ಕರೆದು ಅಯ್ಯಾ ಇದರ ತೂಕ ಎಷ್ಟಿರಬಹುದು ಅಂತ ಕೇಳಿದರು. ಕಾವಲುಗಾರ ಈಯಮ್ಮನಿಗೆ ಏಕೆ ಅಂತ ತಿರಸ್ಕಾರದ ಧ್ವನಿಯಿಂದ ಇರಬಹುದು ಒಂದು ಎರಡು ಸಾವಿರ ಕೆಜಿ ಅಂದ. ಮಹಿಳೆ ಹುಬ್ಬೇರಿಸಿ ಇನ್ನೊಂದು ಪ್ರಶ್ನೆ ಹಾಕಿದಳು. ಅಪ್ಪಾ ಇದು ಗಂಡೋ ಹೆಣ್ಣೊ. ಕಾವಲುಗಾರ ಮಹಿಳೆ ಕಡೆ ಮತ್ತೆ ಬೇಜಾರಿನಿಂದ ನೋಡಿ ಈ ಕುತೂಹಲ ಇರಬೇಕಾದದ್ದು ಇನ್ನೊಂದು ನೀರಾನೆಗೇ ಹೊರತು ನಿಮಗಲ್ಲ ಅಂದು ಹೊರಟುಹೋದ.